
ಕರ್ನಾಟಕ ಲಲಿತಕಲಾ ಅಕಾಡೆಮಿ

ಜನಪ್ರಿಯ ದೇಶಿ ಕಲಾಮಾಲೆ

# ಬಿದರಿ ಚಿತ್ರಕಲೆ

● ಡಾ. ವಿ.ಎಮ್. ಬಾಗಾಯತ್



# ಬಿದರಿ ಚಿತ್ರಕಲೆ

ಪೀಟರ್ ಎ. ಲುಯಿಸ್
ಪ್ರಧಾನ ಸಂಪಾದಕರು

ಲೇಖಕರು
ಡಾ. ವಜೀರಬಾಷಾ ಮ. ಬಾಗಾಯತ

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು ೫೬೦೦೦೨

BIDARI KALE
*By* : Dr. Vajeerbasha M. Bagayat
*Published by*
B.T. Munirajayya, Registrar
Karnataka Lalithakala Academy
Kannada Bhavana, J.C.Road
BANGALORE-560002
First Impression : 2004
Pages : VIII + 52 Price Rs : 40-00
ಬೆಲೆ ರೂ. : ೪೦-೦೦
ಪ್ರಥಮ ಮುದ್ರಣ : ೨೦೦೪
© ಲೇಖಕರದು
ಈ ಪುಸ್ತಕದಲ್ಲಿರುವ ಅಭಿಪ್ರಾಯಗಳು
ಆಯಾ ಲೇಖಕರಿಗೆ ಸಂಬಂಧಿಸಿದ್ದು
*ಪ್ರಧಾನ ಸಂಪಾದಕರು*
ಶ್ರೀ ಪೀಟರ್ ಎ. ಲೂಯಿಸ್
*ಸಂಪಾದಕರು*
ಡಾ.ಎಸ್.ಸಿ.ಪಾಟೀಲ
*ಪ್ರಕಟಣಾ ಸಮಿತಿ ಸದಸ್ಯರು*
ಶ್ರೀ ಸುರೇಶ ಡಿ.ಹಾಲಬಾವಿ
ಡಾ. ಪೂರ್ಣಿಮಾ ಪಾಟೀಲ
ಶ್ರೀ ಪಿ.ಎಸ್.ಕಡೇಮನಿ
ಶ್ರೀ ಬಿ.ಎಸ್.ದೇಸಾಯಿ
ಶ್ರೀ ದಿಲೀಪಕುಮಾರ ಕಾಳೆ
*ಪ್ರಕಾಶಕರು*
ಶ್ರೀ ಬಿ.ಟಿ.ಮುನಿರಾಜಯ್ಯ, ರಿಜಿಸ್ಟ್ರಾರ್
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
*ಸಮನ್ವಯಕಾರ* : ಶ್ರೀ ಪ.ಸ.ಕುಮಾರ
*ಮುಖಪುಟ* : ಶ್ರೀ ಸುಧಾಕರ ದರ್ಬೆ
*ಅಕ್ಷರ ಜೋಡಣೆ* : ಯಾಜಿ ಗ್ರಾಫಿಕ್ಸ್, ಹೊಸಪೇಟೆ
ಮುದ್ರಣ
ಮನು ಗ್ರಾಫೀಕ್ಸ್
11/3, 3ನೇ ಕ್ರಾಸ್, ಅಣ್ಣಪುರ
ಬೆಂಗಳೂರು - 27

# ಅಧ್ಯಕ್ಷರ ಮಾತು

ಆತ್ಮೀಯರೆ,

ಲಲಿತಕಲಾ ಅಕಾಡೆಮಿಯ ಅಧ್ಯಕ್ಷನಾಗಿ ಮೂರು ವರ್ಷಗಳಾಗುತ್ತಿದೆ. ಈ ಅವಧಿಯಲ್ಲಿ ನಾನು ಮತ್ತು ಸದಸ್ಯರ ತಂಡ, ರೂಪಿಸಿ ನಿರ್ವಹಿಸಿದ ಕಾರ್ಯಕ್ರಮಗಳನ್ನು ನಿಮ್ಮ ಮುಂದಿಡುವುದು ನನ್ನ ಜವಾಬ್ದಾರಿ ಹಾಗೂ ಸಂತೋಷದ ವಿಷಯ. ನಾವು ಮೂರು ವರ್ಷಗಳು ಕಾರ್ಯಕ್ರಮಗಳನ್ನು ರೂಪಿಸುವಾಗ ಯುವ ಪೀಳಿಗೆಗೆ ಸಿಂಹಪಾಲು ನೀಡಿದ್ದೇವೆ, ಹೊಸತನವನ್ನೂ ಕಾಪಾಡಿಕೊಂಡಿದ್ದೇವೆ.

'ಯಂಗ್ ಸ್ಟ್ರೋಕ್ಸ್' 'ನಿಮ್ಮೊಂದಿಗೆ ನಾವು' 'ಮನೆಗೊಂದು ಕಲಾಕೃತಿ', 'ಜನಪದ ಶೃತಿ-ಆಧುನಿಕ ಕೃತಿ', ಯುವಕಲಾವಿದರಿಗೆ ಫೆಲೋಶಿಪ್ ಮುಂತಾದ ನವೀನ ಹಾಗೂ ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಕರ್ನಾಟಕವನ್ನು ನಾಲ್ಕು ವಿಭಾಗಗಳಾಗಿ ಮಾಡಿ, ಪ್ರತಿ ಕಾರ್ಯಕ್ರಮದಲ್ಲಿ ನಾಲ್ಕೂ ವಿಭಾಗದ ಕಲಾವಿದರಿಗೆ ಸಮಪಾಲು ದೊರಕುವಂತೆ ಮಾಡಿದ್ದು ಕಲಾವಿದರಿಗೆ ಸಂತಸ ತಂದಿದೆ.

ಯಂಗ್ ಸ್ಟ್ರೋಕ್ಸ್: ಕರ್ನಾಟಕದ ನಾಲ್ಕು ವಿಭಾಗಗಳಿಂದ ಆಯ್ದ ಪ್ರತಿಭಾವಂತ ಯುವಕಲಾವಿದರ ಕಲಾಪ್ರದರ್ಶನವನ್ನು ಬೆಂಗಳೂರು, ಮುಂಬೈ ಮತ್ತು ನವದೆಹಲಿಯಲ್ಲಿ ಪ್ರದರ್ಶಿಸಿದ್ದೇವೆ. ಸುಂದರ ಕೈಪಿಡಿಯನ್ನು ಮುದ್ರಿಸಿದ್ದೇವೆ.

ಮನೆಗೊಂದು ಕಲಾಕೃತಿ : ಮಧ್ಯಮ ವರ್ಗದ ಜನರ ಮನೆಯಲ್ಲಿ ನಾಡಿನ ಕಲಾವಿದರ ಕೃತಿಗಳು ರಾರಾಜಿಸಬೇಕೆಂಬ ಉದ್ದೇಶದಿಂದ ಕಡಿಮೆ ಬೆಲೆಯಲ್ಲಿ ಕಲಾಕೃತಿಗಳನ್ನು ಮಾರಾಟ ಮಾಡಿದೆವು. ಜನರ ಉತ್ಸಾಹ ಹಾಗೂ ಪ್ರೋತ್ಸಾಹ ನಮ್ಮನ್ನು ನಿಬ್ಬೆರಗಾಗಿಸಿತು. ಐದು ನೂರಕ್ಕೂ ಹೆಚ್ಚು ಕಲಾಕೃತಿಗಳು ಮಧ್ಯಮ ವರ್ಗದ ಮನೆಗಳನ್ನು ಅಲಂಕರಿಸಿದರೆ, ಅಕಾಡೆಮಿ ಬೊಕ್ಕಸಕ್ಕೆ ಲಕ್ಷಕ್ಕೂ ಹೆಚ್ಚು ಆದಾಯ ಬಂತು.

ನಿಮ್ಮೊಂದಿಗೆ ನಾವು : ಕರ್ನಾಟಕದ ಎಲ್ಲ ಕಡೆಗಳಲ್ಲೂ ಈ ಕಾರ್ಯಕ್ರಮಕ್ಕೆ ನಿರೀಕ್ಷೆಗೆ ಮೀರಿದ ಯಶಸ್ಸು ಲಭಿಸಿದೆ. ಈಗಾಗಲೇ ಎಪ್ಪತ್ತೈದು ಸಾವಿರ ಜನರಿಗೆ ಕಲೆಯ ಕಿರು ಪರಿಚಯವನ್ನು ಮಾಡಿಸಿದೆ.

**ಜನಪದ ಶೃತಿ-ಆಧುನಿಕ ಕೃತಿ :** ಜಾನಪದದ ಬೇರುಗಳು ಗಟ್ಟಿಯಾಗಿರುವ ಹಳ್ಳಿಯಲ್ಲಿ ಆಧುನಿಕ ಚಿತ್ರಕಲೆಯನ್ನು ಎತ್ತಿನ ಬಂಡಿಗಳ ಮೇಲೆ ಚಿತ್ರಿಸಿ 'ಚಲಿಸುವ ಗ್ಯಾಲರಿ'ಗಳನ್ನು ನಿರ್ಮಿಸಿದ್ದೇವೆ.

**ಯುವ ಕಲಾವಿದರಿಗೆ ಫೆಲೋಶಿಪ್ :** ಮೂವರು ಯುವ ಪ್ರತಿಭೆಗಳನ್ನು ಆಯ್ಕೆ ಮಾಡಿ ಅವರಿಗೆ ಒಂದು ವರ್ಷದ ಅವಧಿಗೆ ತಿಂಗಳಿಗೆ ರೂ.೩೦೦೦ (ಮೂರು ಸಾವಿರ) ಧನ ಸಹಾಯ ನೀಡಿ ಸ್ವತಂತ್ರವಾಗಿ ಚಿಂತಿಸಿ ಅಭಿವ್ಯಕ್ತಿಸುವ ವಾತಾವರಣವನ್ನು ನಿರ್ಮಿಸಿ ಕೊಟ್ಟಿದ್ದೇವೆ.

ಈ ಎಲ್ಲಾ ಕಾರ್ಯಕ್ರಮಗಳು ಯುವಶಕ್ತಿಯ ಪಾಲಾದರೆ, ಹೊಸದುರ್ಗದ ಹತ್ತಿರವಿರುವ ಸಾಣೆಹಳ್ಳಿಯಲ್ಲಿ ಹಿರಿಯ ಕಲಾವಿದರ ಶಿಬಿರ, ಬೆಂಗಳೂರಿನಲ್ಲಿ ಕಲಾವಿದೆಯರ ಶಿಬಿರ, ಬೆಂಗಳೂರು ಹಾಗೂ ಗುಲ್ಬರ್ಗಾದಲ್ಲಿ ಗ್ರಾಫಿಕ್ ಶಿಬಿರವನ್ನು ನಡೆಸಿದ್ದೇವೆ. ಶ್ರೀ ಜಿ.ಎಸ್. ದಂಡಾವತಿಮಠ ಹಾಗೂ ಡಾ.ಎಂ.ವಿ.ಮಿಣಜಿಗಿಯವರ ಶತಮಾನೋತ್ಸವ ಕಾರ್ಯಕ್ರಮಕ್ಕೂ ಪರೋಕ್ಷವಾಗಿ ನಾವು ಕಾರಣಕರ್ತರಾಗಿದ್ದೇವೆ.

ಇದರೊಂದಿಗೆ ವಾರ್ಷಿಕ ಕಲಾಪ್ರದರ್ಶನ, ವಾರ್ಷಿಕ ಪ್ರಶಸ್ತಿ ಸಮಾರಂಭ, ಜಿಲ್ಲಾವಾರು ಕಲಾಶಿಬಿರ, ಏಕವ್ಯಕ್ತಿ ಹಾಗೂ ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮ, ಐಫೆಕ್ಸ್ ಕಲಾಪ್ರದರ್ಶನಗಳಿಗೆ ಸಹಯೋಗ ನೀಡಿದ್ದೇವೆ.

ಹಿರಿಯ ಕಲಾವಿದರಿಗೆ ನೀಡುವ ವಾರ್ಷಿಕ ಪ್ರಶಸ್ತಿಯ ಜೊತೆಗೆ ಕಲಾಕ್ಷೇತ್ರದ ಅಭಿವೃದ್ಧಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಚೇತನಗಳಿಗೆ ವಾರ್ಷಿಕ ಪುರಸ್ಕಾರವನ್ನು ನೀಡಿ ಗೌರವಿಸುವುದನ್ನು ಪ್ರಾರಂಭಿಸಿದ್ದೇವೆ. ಈ ವರ್ಷ ವಾರ್ಷಿಕ ಕಲಾ ಪ್ರದರ್ಶನದಲ್ಲಿ ನೀಡುವ ಬಹುಮಾನಗಳನ್ನು ಹಿರಿಯ ಕಲಾವಿದರ ಹೆಸರಿನಲ್ಲಿ ನೀಡುವುದರೊಂದಿಗೆ ಅವರನ್ನು ಸ್ಮರಿಸುತ್ತಿದ್ದೇವೆ.

ಇಷ್ಟೆಲ್ಲಾ ಆದರೂ ಮನಸ್ಸಿನಲ್ಲಿ ಕೊರತೆ ಕೊರೆಯುತ್ತಿದೆ. ರಾಷ್ಟ್ರಮಟ್ಟದ ಕಲಾಶಿಬಿರ, ರಾಷ್ಟ್ರಮಟ್ಟದ ವಿಚಾರಗೋಷ್ಠಿ, ಕಲಾಕೃತಿಗಳ ಮಾರಾಟ ಕೇಂದ್ರ, ಹಾಸನದಲ್ಲಿ ರಾಷ್ಟ್ರೀಯ ಕಲಾಗ್ರಾಮ, ವಿಭಿನ್ನ ಶೈಲಿಯ ಭಾವಚಿತ್ರದ ಶಿಬಿರವನ್ನು ಈ ಅವಧಿಯಲ್ಲಿ ನಡೆಸಲಾಗದಿದ್ದುದಕ್ಕೆ ನಮ್ಮ ಮನಸ್ಸುಗಳಲ್ಲಿ ಇನ್ನೂ ಅತೃಪ್ತಿ ಕಾಡುತ್ತಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಹಲವು ಹತ್ತು ಕಾರ್ಯಕ್ರಮಗಳಲ್ಲಿ ಪುಸ್ತಕ ಪ್ರಕಟಣಾ ಯೋಜನೆಯು ಒಂದು. ಅದರ ಅಂಗವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ಕಲಾವಾರ್ತೆ ಎಂಬ ಸಂಚಿಕೆಯನ್ನು ಅಕಾಡೆಮಿ ನಿಯಮಿತವಾಗಿ ಪ್ರಕಟಿಸುತ್ತ ಬಂದಿದೆ. ಮುದ್ರಣ ಹಾಗೂ ವಿನ್ಯಾಸಗಳಲ್ಲಿ ಕಲಾತ್ಮಕತೆಗೆ ಒತ್ತುಕೊಟ್ಟು, ಕಲಾವಾರ್ತೆಯನ್ನು ವಾರ್ತಾ ಸಂಚಿಕೆಯಾಗಿಸದೆ ಸಂಗ್ರಹಯೋಗ್ಯ ಸಂಚಿಕೆಯನ್ನಾಗಿಸಿದ್ದೇವೆ. ಹಾಗೆಯೇ ಅಕಾಡೆಮಿಯ

ಎಲ್ಲ ಸದಸ್ಯರ ತೀರ್ಮಾನದಂತೆ ಹತ್ತು ಜನ ಹಿರಿಯ ಕಲಾವಿದರ ಚಿತ್ರಸಂಪುಟ ಮತ್ತು ಒಂಬತ್ತು ಜನ ಹಿರಿಯ ಕಲಾವಿದರಾದ ಪ್ರೊ.ವ್ಹಿ.ಜಿ.ಅಂದಾನಿ, ಎಸ್.ಕಾಳಪ್ಪ, ಎಚ್.ಎಸ್. ಇನಾಮತಿ, ಕೆ.ಕೇಶವಯ್ಯ, ಪುರುಷೋತ್ತಮ ಕಾರಂತ, ಎಂ.ಆರ್.ಬಾಳೀಕಾಯಿ, ರಘೋತ್ತಮ ಪುಟ್ಟಿ, ವ್ಹಿ.ಟಿ.ಕಾಳೆ ಹಾಗೂ ಸಿ.ಚಂದ್ರಶೇಖರ್ ಅವರುಗಳ ಜೀವನ ಸಾಧನೆಗಳ ಪುಸ್ತಕಗಳು ಸಿದ್ಧಗೊಂಡಿವೆ. ಇವರಲ್ಲಿ ಮೂವರು ಕಲಾವಿದರು ಇಂದು ಇಲ್ಲವಾಗಿದ್ದಾರೆ. ಅವರ ಬಗ್ಗೆ ಮಾಹಿತಿ ಸಂಗ್ರಹಿಸುವುದು ಅತ್ಯಂತ ದುಸ್ತರ ಕಾರ್ಯವಾಗಿದ್ದು ಆಯಾ ಲೇಖಕರು ಆ ಕಾರ್ಯವನ್ನು ಸಾಹಸವೆಂಬಂತೆ ತೆಗೆದುಕೊಂಡು ಬರೆದಿದ್ದಾರೆ. ಉಳಿದ ಲೇಖಕರು ತಮ್ಮ ಲೇಖನದ ಕಲಾವಿದರನ್ನು ಅನೇಕ ಬಾರಿ ಸಂಪರ್ಕಿಸಿ, ಸಂದರ್ಶಿಸಿ ಅಭ್ಯಾಸ ಪೂರ್ಣವಾಗಿ ಬರೆದಿದ್ದಾರೆ. ಈ ಎಲ್ಲ ಬರಹಗಾರರಿಗೆ ಮತ್ತು ಸಂಪಾದಿಸಿಕೊಟ್ಟ ಡಾ.ಅ.ಲ. ನರಸಿಂಹನ್ ಅವರಿಗೆ ಅಕಾಡೆಮಿ ಪರವಾಗಿ ಧನ್ಯವಾದಗಳು. ಅಕಾಡೆಮಿಯ ಇನ್ನೊಂದು ಗ್ರಂಥ 'ಮುಖಗಳೊಂದಿಗೆ ಮುಖಾಮುಖಿ' ಭಾವಚಿತ್ರ ಪರಂಪರೆ ಶೀರ್ಷಿಕೆಯ ಅಧ್ಯಯನ ಯೋಗ್ಯ ಕೃತಿಯನ್ನು ನಮ್ಮ ಮನವಿಯಂತೆ ಬರೆದು ಕೊಟ್ಟಿರುವ ವಿಮರ್ಶಕರಾದ ಶ್ರೀ ಕೆ.ವಿ.ಸುಬ್ರಹ್ಮಣ್ಯಂರವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು.

ಕರ್ನಾಟಕದ ಎಲ್ಲ ಜಿಲ್ಲೆಗಳ ಸಮಗ್ರ ಚಿತ್ರಕಲೆಯ ಸ್ಥೂಲ ನೋಟವನ್ನು ಒಂದೆಡೆಗೆ ಮಾಡಿಕೊಡುವ ಉದ್ದೇಶದಿಂದ **ಕರ್ನಾಟಕ ಚಿತ್ರಕಲಾ ದರ್ಶನ** ಎಂಬ ಬೃಹತ್ ಸಂಪುಟವನ್ನು ತರುತ್ತಿದ್ದು ಇದನ್ನು ಡಾ.ಎಸ್.ಸಿ.ಪಾಟೀಲ ಅವರು ಸಂಪಾದಿಸಿ ಕೊಡುತ್ತಿದ್ದಾರೆ. ಅದಕ್ಕಾಗಿ ಹೆಚ್ಚಿನ ಅನುದಾನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಜನಪ್ರಿಯ ಕಲಾಮಾಲೆಯ ಅಡಿಯಲ್ಲಿ ಕರ್ನಾಟಕದ ದೇಶಿ ಚಿತ್ರಕಲೆಯನ್ನು ಪ್ರಾದೇಶಿಕ ವೈಶಿಷ್ಟ್ಯತೆಯ ಹಿನ್ನೆಲೆಯಲ್ಲಿ ಪರಿಚಯಿಸುವ ದೃಷ್ಟಿಯಿಂದ ಈ ಕೆಳಗಿನ ಗ್ರಂಥಗಳನ್ನು ತಜ್ಞ ವಿದ್ವಾಂಸರಿಂದ ಬರೆಯಿಸಿ ಇದೀಗ ಪ್ರಕಟಿಸುತ್ತಿದ್ದೇವೆ.

೧. ರಂಗೋಲಿ ಚಿತ್ರಕಲೆ

೨. ಶೀಗಿ ಚಿತ್ರಕಲೆ

೩. ಕಸೂತಿ ಚಿತ್ರಕಲೆ

೪. ಹಚ್ಚೆ ಚಿತ್ರಕಲೆ

೫. ಬೆಳದಿಂಗಳ ಚಿತ್ರಕಲೆ

೬. ಚಿತ್ತಾರಗೊಂಬೆ ಚಿತ್ರಕಲೆ

೭. ನಾಗಾರಾಧನೆ ಮತ್ತು ಚಿತ್ರಕಲೆ

೮. ಯಕ್ಷಗಾನ ಮತ್ತು ಚಿತ್ರಕಲೆ

೯. ಬಿದರಿ ಚಿತ್ರಕಲೆ

೧೦. ಭೂತಾರಾಧನೆ ಮತ್ತು ಚಿತ್ರಕಲೆ

ಅಳಿದು ಹೋಗುತ್ತಿರುವ ನಮ್ಮ ಜಾನಪದರ ಈ ಚಿತ್ರಕಲೆಯನ್ನು ಉಳಿಸಿ ಬೆಳೆಸಿ ಕೊಳ್ಳುವ ಮತ್ತು ಜನಸಾಮಾನ್ಯರಿಗೂ ಪರಿಣಿತರಿಗೂ ಸುಲಭ ಬೆಲೆಯಲ್ಲಿ ಕಲೆಯ ಈ ಸಾಹಿತ್ಯವನ್ನು ತಲುಪಿಸುವುದು ನಮ್ಮ ಉದ್ದೇಶವಾಗಿದೆ. ಎಲ್ಲ ವರ್ಗದ ಜನರು ಕಲೆಯನ್ನು ಅರ್ಥೈಸಿಕೊಳ್ಳಬೇಕು ಮತ್ತು ಅದರೊಂದಿಗೆ ತಾವೂ ಬೆರೆತುಕೊಳ್ಳಬೇಕು ಅಂದಾಗ ಮಾತ್ರ ಕಲೆ ಉಳಿಯುತ್ತದೆ ಮತ್ತು ಬೆಳೆಯುತ್ತದೆ. ಇಂತಹ ಕೆಲಸಗಳು ಹಲವಾರು ರೀತಿಯಿಂದ ಆಗಬೇಕಾಗಿದೆ. ಕಲಾ ಪ್ರದರ್ಶನ, ಕಲಾಶಿಬಿರ, ವಿಚಾರ ಸಂಕಿರಣ, ಕಲಾ ಪ್ರಾತ್ಯಕ್ಷಿಕೆ ಇತ್ಯಾದಿ ಯಾಗಿ ಮಾಡುತ್ತ ಹೆಚ್ಚು ಹೆಚ್ಚು ಜನಪ್ರಿಯಗೊಳಿಸುವ ಕೆಲಸಗಳು ನಡೆದಷ್ಟು ಈ ಕ್ಷೇತ್ರ ಬೆಳೆಯುತ್ತದೆ.

ಈ ಹಿನ್ನಲೆಯಲ್ಲಿ ಪ್ರಸ್ತುತ ಜನಪ್ರಿಯ ಕಲಾಮಾಲಿಕೆಯಲ್ಲಿ ಈ ಹೊತ್ತಿಗೆಗಳನ್ನು ಪ್ರಕಟಿಸು ತ್ತಿದ್ದೇವೆ. ನಮ್ಮ ಮನವಿಯನ್ನು ಒಪ್ಪಿ ಈ ಹೊತ್ತಿಗೆಗಳನ್ನು ತಮ್ಮ ಬಿಡುವಿಲ್ಲದ ವೇಳೆಯಲ್ಲಿಯೂ ನಮಗಾಗಿ ಕಷ್ಟಪಟ್ಟು ಬರೆದುಕೊಟ್ಟ ಎಲ್ಲ ಲೇಖಕರಿಗೆ ಮತ್ತು ಈ ಪುಸ್ತಕಗಳ ಯೋಜನೆಯನ್ನು ರೂಪಿಸಿ, ಪರಿಣಿತ ಲೇಖಕರನ್ನು ಹುಡುಕಿ, ಅವರಿಂದ ಬರ ವಣಿಗೆಯನ್ನು ಬರೆಯಿಸಿ ಅವುಗಳನ್ನು ಸುಂದರವಾಗಿ ಸಂಪಾದಿಸಿ ಕೊಟ್ಟವರು ಅಕಾಡೆಮಿಯ ಸದಸ್ಯರಾದ ಸಂಶೋಧಕ ಡಾ.ಎಸ್.ಸಿ.ಪಾಟೀಲ ಅವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು.

ನಾವು ಮೂರು ವರ್ಷಗಳಲ್ಲಿ ಮಾಡಿದ ಕಾರ್ಯಕ್ರಮಗಳ ಪಟ್ಟಿಯನ್ನು ನಿಮ್ಮ ಮುಂದಿಟ್ಟಿದ್ದೇವೆ. ಎಲ್ಲಾ ಕಾರ್ಯಕ್ರಮಗಳಲ್ಲೂ ನಮ್ಮೊಡನೆ ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೇಂದ್ರ ಲಲಿತಕಲಾ ಅಕಾಡೆಮಿ, ರೀಜನಲ್ ಸೆಂಟರ್ ಚೆನ್ನೈ, ಐಫೇಕ್ಸ್ ಸಂಸ್ಥೆಗೆ ವಂದನೆಗಳು. ನನ್ನೊಡನೆ ಇದುವರೆಗೂ ಸಹಕರಿಸಿ ಉಪಯುಕ್ತ ಸಲಹೆಗಳನ್ನು ನೀಡಿದ ಸದಸ್ಯ ಮಿತ್ರರೆಲ್ಲರಿಗೂ ನನ್ನ ಇಡೀ ತಂಡದ ಪರವಾಗಿ ಹಾಗೂ ವೈಯಕ್ತಿಕವಾಗಿ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ವಿಶೇಷವಾಗಿ ಸಮನ್ವಯಕಾರರಾಗಿ ಈ ಕಾರ್ಯ ಆಗು ಮಾಡಿದ ಸದಸ್ಯ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ಕೃತಜ್ಞತೆಗಳು. ಈ ಎಲ್ಲ ಪ್ರಕಟಣೆಗಳೂ ವಿವಿಧ ಮುದ್ರಣಾಲಯ ಗಳಲ್ಲಿ ರೂಪತಳೆದಿದ್ದು, ಅವುಗಳ ಮಾಲೀಕರಿಗೆ, ಮುಖಚಿತ್ರವನ್ನು ಕಲಾಕೃತಿಯೆಂಬಂತೆಯೇ ರಚಿಸಿಕೊಟ್ಟ ಶ್ರೀ ಸುಧಾಕರ ದರ್ಬೆ ಅವರಿಗೆ, ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಮತ್ತು ಸಿಬ್ಬಂದಿವರ್ಗ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಂಬಲ ನೀಡಿದ ಮಹನೀಯರಿಗೆಲ್ಲಾ ನಮ್ಮ ಧನ್ಯವಾದಗಳು. ನಮ್ಮ ಈ ಕಿರುಪ್ರಯತ್ನಗಳನ್ನು ಕಲಾವಿದರು, ಸಹೃದಯ ಕಲಾಸಕ್ತರು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಬೆಂಗಳೂರು
೨೦೦೪

ಪೀಟರ್ ಎ. ಲೂಯಿಸ್
ಅಧ್ಯಕ್ಷರು

# ಸಂಪಾದಕೀಯ

ಎಲ್ಲ ಅನ್ಯಶಿಸ್ತುಗಳಲ್ಲಿ ಆದಂತೆ ದೃಶ್ಯಕಲೆಯ ಕ್ಷೇತ್ರದಲ್ಲೂ ಹೊಸ ನೀರು ಪಶ್ಚಿಮದಿಂದ ಹರಿದು ಬಂದಿದೆ. ಅದರೊಂದಿಗೆ ನಮ್ಮದೇ ಆದ ದೇಶಿಪರಂಪರೆಯ ತಿಳುವಳಿಕೆಯ ಹಿನ್ನಲೆಯಲ್ಲಿಯೂ ಈ ಕಲೆ ಬೆಳೆದು ಬಂದಿದೆ. ಈ ಎರಡೂ ವಿಭಿನ್ನ ಜ್ಞಾನ ಪರಂಪರೆಯ ತಿಳುವಳಿಕೆಯ ಸಂಪರ್ಕ, ಸಂಸರ್ಗದಲ್ಲಿ ಮತ್ತೊಂದು ಬಗೆಯ ಹೊಸಜ್ಞಾನ ಪ್ರವಾಹ ನಮ್ಮ ಕಲಾಪ್ರಪಂಚದಲ್ಲಿ ಸಂಚಲನೆಗೊಂಡಿದ್ದು ಅದು ನಮ್ಮನ್ನು ದಿಗ್ಭ್ರಮೆಗೊಳಿಸುವಷ್ಟು ಈ ಕ್ಷೇತ್ರವನ್ನು ಆವರಿಸಿಕೊಳ್ಳುತ್ತಿದೆ.

ನಮ್ಮ ತನವನ್ನೆಲ್ಲ ನಾವು ಎಲ್ಲಿ ಕಳೆದುಕೊಳ್ಳುತ್ತೇವೆ ಎಂಬ ಆತಂಕ ಕೊಡ ಕಲಾವಲಯದಲ್ಲಿ ಉಂಟಾಗುತ್ತದೆ. ಜಾಗತೀಕರಣ ನಮ್ಮ ಸ್ಥಳೀಕರಣದ ಕಲಾ ಸಂಸ್ಕೃತಿಯ ಮೇಲೆ ಮೂಡಿಸಿದ ಈ ಪರಿಣಾಮದ ಬಗ್ಗೆ ಗಂಭೀರ ಚಿಂತನೆಗಳು ನಡೆಯಬೇಕಾಗಿವೆ. ಇಂತಹ ಸಂಕ್ರಮಣ ಕಾಲದಲ್ಲಿ ಸಹಜವಾಗಿಯೇ ದೇಶಿಕಲಾ ಚಿಂತನೆಗೆ ಹೆಚ್ಚು ಪ್ರಾಮುಖ್ಯತೆ ಪ್ರಾಪ್ತವಾಗುತ್ತಲಿದೆ.

ಕರ್ನಾಟಕದಲ್ಲಿ ಈಗ ಸ್ಥಾನಿಕ ನೆಲೆಯಲ್ಲಿ ಪ್ರಾದೇಶಿಕ ಹಿನ್ನೆಲೆಯ ದೇಶಿಚಿತ್ರ ಕಲೆಯ ಬಹುವಿನ್ಯಾಸಗಳ ಕಡೆಗೆ ನಾವು ಗಮನಹರಿಸಬೇಕಾಗಿದೆ. ಇಂದು ಶಿಷ್ಟಪರಂಪರೆಯ ಚಿತ್ರಕಲೆಯೇ ಎಂಬ ವಾತಾವರಣ ಉಂಟಾಗಿದೆ. ಆದರೆ ಕಲೆಯ ತಾಯಿ ಬೇರುಗಳು ಜನಪದ ಚಿತ್ರಕಲೆಯಿಂದ ಬಂದವುಗಳು ಎಂಬ ಪ್ರಜ್ಞೆಯನ್ನು ನಾವು ಅರಿಯಬೇಕಾಗಿದೆ. ಈ ಹಿನ್ನಲೆಯಲ್ಲಿ ನಮ್ಮ ಜಾನಪದ ನೆಲೆಯ ಚಿತ್ರಕಲಾ ಸಂಸ್ಕೃತಿಯನ್ನು ನಾವು ಜಾಗತಿಕ ನೆಲೆಯಲ್ಲಿ ಪರಿಚಯಿಸುವ, ಅನ್ವಯಗೊಳಿಸುವ, ಕಾರ್ಯಕ್ರಮಗಳನ್ನು ಅಸ್ತಿತ್ವಕ್ಕೆ ತರಬೇಕಾಗಿದೆ. ಈ ದಿಸೆಯಲ್ಲಿ ಅಕಾಡೆಮಿಯ ಈ ಯೋಜನೆ ಒಂದು ಸಣ್ಣ ಪ್ರಯತ್ನ ಮಾತ್ರ. ಹೆಚ್ಚಿನ ಅಧ್ಯಯನಗಳಿಗೆ ಇದು ನಾಂದಿಯಾಗುತ್ತದೆ ಎಂಬ ವಿಶ್ವಾಸ ನಮ್ಮದಾಗಿದೆ. ಸಾವಿರಾರು ವರ್ಷಗಳ ನಮ್ಮ ಚಿತ್ರಕಲೆಯನ್ನು

ಅಭ್ಯಸಿಸಿದಾಗ ಕೂಡ ನಮ್ಮ ಜಾನಪದದ ವಿವಿಧ ಮುಖಗಳು ಅದರಲ್ಲಿ ಅಂತರ್ಗತವಾಗಿರುವುದನ್ನು ಮತ್ತು ಅದಕ್ಕೆ ಒಂದು ಜೀವಶಕ್ತಿ ಒದಗಿಸಿರುವುದನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಹೀಗೆ ಜಾನಪದ ನಮ್ಮ ಪ್ರಾಚೀನ ಮಾರ್ಗ ಚಿತ್ರಕಲೆಯ ಒಂದು ಅವಿಭಾಜ್ಯ ಅಂಗವಾಗಿರುವುದನ್ನು ಯಾರು ಅಲ್ಲಗಳೆಯುವಂತಿಲ್ಲ.

ಜಾನಪದ ಜನಪದರ ಬದುಕಿನ ಸಂಸ್ಕೃತಿಯನ್ನು ಬಿಂಬಿಸುವ ಜೀವಂತ ವ್ಯವಸ್ಥೆ. ಜನಾಂಗದ ಬದುಕಿನೊಂದಿಗೆ ಪರಂಪರಾಗತವಾಗಿ ಬೆಳೆದು ಬಂದಿರುವ ಜನಪದ ಚಿತ್ರಕಲೆ ಆಯಾ ಪ್ರದೇಶದ ಜನಾಂಗದ ಸಂಸ್ಕೃತಿಕ ಅಧ್ಯಯನಕ್ಕೆ ಮೂಲ ಆಕರ ಸಾಮಾಗ್ರಿಯಾಗಿದೆ. ನಾಡಿನ ಸಂಸ್ಕೃತಿ ಹಾಗೂ ಪರಂಪರೆಯನ್ನು ಜೀವಂತವಾಗಿ ಮೌಖಿಕ ಪರಂಪರೆಯಲ್ಲಿ ಉಳಿಸಿಕೊಂಡು ಬಂದ ಹಿರಿಮೆ ಇವುಗಳಿಗೆ ಇದೆ. ವ್ಯಕ್ತಿ ತನ್ನ ಅನುಭವಗಳಿಗೆ ಜೀವ ಕೊಟ್ಟಿದ್ದು ಬಣ್ಣ ತುಂಬಿದ್ದು ಇಂಥ ಕಲೆಗಳ ಮೂಲಕವೇ. ವ್ಯಕ್ತಿಯ ಬದುಕಿನಷ್ಟೇ ವೈವಿಧ್ಯಮಯ, ವರ್ಣಮಯವಾಗಿ ಈ ಕಲೆ ಬೆಳೆದು ಬಂದಿದೆ.

ಇಂದಿನ ಶಿಷ್ಟಪರಂಪರೆ ಚಿತ್ರಕಲೆಯೇ ನಮ್ಮ ಚಿತ್ರಕಲೆ ಎಂಬ ಭ್ರಮೆಯಲ್ಲಿರುವ ನಮಗೆ ನಮ್ಮ ದೇಶಿಚಿತ್ರಕಲೆಯ ಬಗೆಗಿನ ತಿಳುವಳಿಕೆ ತೀರ ಕಡಿಮೆ. ಈ ಕೊರತೆಯನ್ನು ಹೋಗಲಾಡಿಸುವ ಪ್ರಯತ್ನವಾಗಿ ಅಕಾಡೆಮಿ ದೇಶೀ ಜನಪ್ರಿಯ ಕಲಾಮಾಲೆಯ ಅಡಿಯಲ್ಲಿ ಕರ್ನಾಟಕ ವಿವಿಧ ಪ್ರದೇಶದ ಪ್ರಾತಿನಿಧಿಕವಾದ ಜನಪದ ಚಿತ್ರಕಲೆಯ ಗ್ರಂಥಗಳನ್ನು ಹೊರತರಲಾಗುತ್ತಿದೆ. ಇಲ್ಲಿ ಜನಪದ ಚಿತ್ರಕಲೆಯನ್ನು ತಾತ್ವಿಕ ಮತ್ತು ಸೈದ್ಧಾಂತಿಕ ನೆಲೆಯಲ್ಲಿ ವ್ಯಾಖ್ಯಾನಿಸುವ, ವಿಶ್ಲೇಷಿಸುವ ಮತ್ತು ದಾಖಲೀಕರಣಗೊಳಿಸುವ ಮಹತ್ವದ ಉದ್ದೇಶವನ್ನು ಹೊಂದಲಾಗಿದ್ದು ಕ್ಷೇತ್ರ ಕಾರ್ಯದಿಂದ ಮೂಲ ಪ್ರಮಾಣಭೂತವಾದ ಸಂಶೋಧನಾ ವಿವರಗಳು ಇಲ್ಲಿ ಹರಳುಗಟ್ಟಿ ನಿಂತಿವೆ.

ನಮ್ಮ ಮಾರ್ಗ ಸೂಚನೆಯ ಮೇರೆಗೆ ಹತ್ತುಜನ ವಿದ್ವಾಂಸರಿಗೆ ರಂಗೋಲಿ ಚಿತ್ರಕಲೆ, ಶೀಗಿ ಚಿತ್ರಕಲೆ, ಕಸೂತಿ ಚಿತ್ರಕಲೆ, ಹಚ್ಚೆ ಚಿತ್ರಕಲೆ, ಬೆಳದಿಂಗಳ ಚಿತ್ರಕಲೆ, ಚಿತ್ತಾರದ ಗೊಂಬೆ ಚಿತ್ರಕಲೆ, ನಾಗಾರಾಧನೆ ಮತ್ತು ಚಿತ್ರಕಲೆ ಯಕ್ಷಗಾನ ಮತ್ತು ಚಿತ್ರಕಲೆ, ಬಿದರಿ ಚಿತ್ರಕಲೆ, ಭೂತಾರಾಧನೆ ಮತ್ತು ಚಿತ್ರಕಲೆ ಎಂಬ ಹತ್ತು ವಿಷಯಗಳ ಕುರಿತು ಕಿರುಗ್ರಂಥಗಳನ್ನು ಬರೆಯಲು ವಿನಂತಿಸಿಕೊಳ್ಳಲಾಗಿತ್ತು. ಆದರೆ ಕೆಲವು ಜನ ವಿದ್ವಾಂಸರು ಒಪ್ಪಿಗೆ ಸೂಚಿಸಿ ಬರೆದು ಕೊಡುತ್ತೇವೆ ಎನ್ನುತ್ತಲೇ ದಿನಗಳನ್ನು ಮುಂದೂಡಿ ಕೊನೆಗೂ ಅವರಿಂದ ಬರವಣಿಗೆ ಬರದೇ ಇದ್ದಾಗ ಇಬ್ಬರು ಎರಡೆರಡು ಗ್ರಂಥಗಳನ್ನು ಬರೆಯುವುದು ಅನಿವಾರ್ಯವಾಯಿತು. ಭೂತಾರಾಧನೆ ಮತ್ತು ಚಿತ್ರಕಲೆ ಕುರಿತು ಗ್ರಂಥ ಇನ್ನು ನಮ್ಮ ಕೈ ಸೇರದೇ ಇರುವುದರಿಂದ ಸಧ್ಯ ಬಂದಿರುವ ಒಂಬತ್ತು ಕಿರು ಗ್ರಂಥಗಳನ್ನು ಪ್ರಕಟಿಸುತ್ತಿದ್ದೇವೆ.

ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪೀಟರ್ ಎ. ಲೂಯಿಸ್ ಮತ್ತು ಪ್ರಕಟಣಾ ಸಮಿತಿಯ ಸದಸ್ಯರು ಹಾಗೂ ಅಕಾಡೆಮಿಯ ಎಲ್ಲಾ ಸದಸ್ಯರು ಈ ಯೋಜನೆಯಲ್ಲಿ ಈ ಗ್ರಂಥಗಳನ್ನು ಪ್ರಕಟಿಸಲು ಸರ್ವಾನುಮತದ ಅಭಿಪ್ರಾಯವನ್ನು ವ್ಯಕ್ತಪಡಿಸುವುದರೊಂದಿಗೆ ಸಹಕಾರ ನೀಡಿದ್ದಾರೆ. ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಅವರು ನನಗಿಂತಲೂ ಹೆಚ್ಚು ಕಾಳಜಿ ವಹಿಸಿ ಬರಹಗಳನ್ನು ತರಿಸಿಕೊಡಲು ಮತ್ತು ಮುದ್ರಣದ ಜವಾಬ್ದಾರಿಯನ್ನು ಹೊತ್ತು ಸಹಾಯ ಮಾಡಿದ್ದಾರೆ. ಅವರು ತೋರಿದ ಪ್ರೀತಿ, ಸಹಕಾರಕ್ಕೆ ವಂದನೆಗಳು. ಪ್ರಕಟಣೆಯಲ್ಲಿ ಸಹಾಯ ಮಾಡಿದ ಸ್ನೇಹಿತ ಸದಸ್ಯರಾದ ಪ.ಸ.ಕುಮಾರ ಅವರಿಗೂ ಅಕಾಡೆಮಿಯ ಸಿಬ್ಬಂದಿ ವರ್ಗದವರಿಗೂ ಮತ್ತು ಕಡಿಮೆ ವೇಳೆಯಲ್ಲಿ ಅಕ್ಷರ ಜೋಡಣೆ ಮತ್ತು ಪುಟವಿನ್ಯಾಸ ಮಾಡಿಕೊಟ್ಟ ಹೊಸಪೇಟೆಯ ಯಾಜಿ ಗ್ರಾಫಿಕ್ಸ್‌ನ ಸವಿತಾ ಯಾಜಿ ಮತ್ತು ಗಣೇಶ ಯಾಜಿಯವರಿಗೆ ಸಹ ವಂದನೆಗಳನ್ನು ತಿಳಿಸುವುದು ನನ್ನ ಕರ್ತವ್ಯ ವಾಗಿದೆ.

ಬಸವ ಜಯಂತಿ<br>೨೦೦೪

ಡಾ. ಎಸ್. ಸಿ. ಪಾಟೀಲ<br>ಸಂಪಾದಕರು

ಉತ್ತರ ಕರ್ನಾಟಕದ 'ಊಟಿ' ಎಂದು ಹೆಸರು ಪಡೆದ ಬೀದರನಗರ ಒಂದು ಐತಿಹಾಸಿಕ ಪ್ರೇಕ್ಷಣೀಯ ಸುಂದರ ತಾಣವಾಗಿದೆ. ಆ ನಗರಕ್ಕೆ ಬೇಟಿನೀಡಿದ ಪ್ರವಾಸಿಗರಿಗೆ ಐತಿಹಾಸಿಕ ಪುರಾತನ ಸ್ಮಾರಕ ಕಟ್ಟಡಗಳ ಜೊತೆಗೆ ಬಿದರಿ ವಸ್ತುಗಳ ಅಂಗಡಿಗಳು ಕಾಣಿಸುತ್ತವೆ. ಬಿದರಿ ಕರಕುಶಲ ಕಲೆಗೆ, ಅವುಗಳ ಸುಂದರ ವಿನ್ಯಾಸಗಳಿಗೆ ಮಾರುಹೋಗದ ಕಲಾರಸಿಕರೇ ಇಲ್ಲವೆನ್ನಬಹುದು.

**ಬೀದರಿನ ಐತಿಹಾಸಿಕ ಹಿನ್ನೆಲೆ**

ಇಂದಿನ ಕರ್ನಾಟಕದ ನಕ್ಷೆಯಲ್ಲಿ ಉತ್ತರದ ತುತ್ತತುದಿಯಲ್ಲಿ ಬೀದರ ಜಿಲ್ಲೆ ಕಾಣುತ್ತದೆ. ಈ ಬೀದರ ಜಿಲ್ಲೆ ಬೆಂಗಳೂರಿನ ಉತ್ತರ ದಿಕ್ಕಿಗೆ ೭೪೦ ಕಿಲೋಮೀಟರ್, ಗುಲಬರ್ಗಾದ ಈಶಾನ್ಯ ದಿಕ್ಕಿಗೆ ೧೧೬ ಕಿ.ಮೀ. ದೂರ ಇದೆ. ಹೈದರಾಬಾದಿನ ಆಗ್ನೆಯ ದಿಕ್ಕಿಗೆ ೧೩೦ ಕಿ.ಮೀ ಇದೆ. ಬೀದರ ನಗರ ಇಂದು ತಾಲೂಕಾ ಉಪವಿಭಾಗ, ಮುಖ್ಯಾಲಯ ಹಾಗೂ ಬೀದರ ಹೆಸರಿನ ಜಿಲ್ಲಾ ಕೇಂದ್ರ ನಗರವಾಗಿದೆ. ಈ ನಗರದ ದಕ್ಷಿಣ ಪ್ರಸ್ಥ ಭೂಮಿಯು ಅತೀ ಎತ್ತರ ಸ್ಥಾನದಲ್ಲಿದೆ. ಇಲ್ಲಿ ಹವಾಮಾನ ಆರೋಗ್ಯದಾಯಕ ಹಾಗೂ ಉತ್ತಮವಾಗಿದೆ.

ಒಂದು ಸಾಂಪ್ರದಾಯಕ ಕಥೆಯ ಉಲ್ಲೇಖದಂತೆ ಈ ನಗರದ ಇತಿಹಾಸ ಮಹಾಭಾರತದ ದಿನಗಳನ್ನೂ ನೆನಪಿಸುವಂತೆ ಮಾಡುತ್ತದೆ. ನಳದಯ ಮಂತಿಯ ಕಥೆಯಲ್ಲಿ ವಿಧುರ ಎಂಬ ಯುವರಾಜನಿಂದ ನಿರ್ಮಿಸಲ್ಪಟ್ಟನಗರ. ಮಹಾಭಾರತದ ವಿಧುರನಗರ ಅಥವಾ ವಿದರ್ಭ ಪುರವೇ ಬೀದರ ಆಗಿರಬಹುದೆಂದು ಹಲವು ಪಂಡಿತರ ಅಭಿಪ್ರಾಯ. ಬಿದರು ಪದವೇ ಬೀದರ ಆಗಿ ರೂಪಾಂತರವಾಯಿತೆಂದು ಕೆಲವು ವಿದ್ವಾಂಸರ ಅಭಿಪ್ರಾಯವಾದರೆ ಇನ್ನು ಕೆಲವರು ಬಿದರೂರು ಪದ ಬೀದರ ಎಂಬುದಾಗಿ ರೂಪಾಂತರ ಹೊಂದಿತೆಂದು ಹೇಳುವ ಅಭಿಪ್ರಾಯದ ವಿದ್ವಾಂಸರೂ ಇದ್ದಾರೆ.

ಆದ್ದರಿಂದ ಈ ನಗರದ ನಾಮವು ಬಿದರ್ > ಬಿದರಿ ಪುರ > ಬಿದರೂರು > ಬೀದರೆ > ಬೀದರ ಇತ್ಯಾದಿಯಾಗಿ ಹೆಸರು ಬಂದಿದೆ. ಈ ಜಿಲ್ಲೆಯಲ್ಲಿ ದೊರೆತ ಶಾಸನಗಳಲ್ಲಿ "ಬೀದರ" ಹೆಸರಿನ ಉಲ್ಲೇಖಗಳಿಲ್ಲ. ಬಹಮನಿ ಸುಲ್ತಾನರ ಕಾಲದಲ್ಲಿ ಇದು "ಮೊಹಮದಾಬಾದ ಬೀದರ್" ಎಂದು ಪ್ರಸಿದ್ಧಿ ಹೊಂದಿದ್ದರಿಂದ ಕಳೆದ ದಶಕಗಳಲ್ಲಿಯೂ ಇದನ್ನು 'ಎಂ.ಬೀದರ್" ಎಂದು ಕರೆಯುತ್ತಿದ್ದರು.

ಮಹಮ್ಮದ ಬಿನ್ ತುಘಲಕ್ ಎಂಬ ರಾಜಕುಮಾರನು ಈ ನಗರವನ್ನೂ ೧೩೨೧-೨೨ ರಲ್ಲಿ ನಿರ್ಮಿಸಿದನು. ನಂತರ ಈತನು ಕ್ರಿ.ಶ. ೧೩೪೧ ರಲ್ಲಿ ದೆಹಲಿಯ ಸುಲ್ತಾನನಾದನು. ಆಗ ಸುಲ್ತಾನನು ಈ ನಗರವನ್ನೂ ಶಹಾಬುದ್ದೀನ ಎಂಬವನಿಗೆ ಆಡಳಿತ ನೋಡಿಕೊಂಡು ಹೋಗಲು ನೀಡಿದನು. ೧೩೪೭ರಲ್ಲಿ ಅಲ್ಲಾಉದ್ದೀನ್ ಹಸನ್ ಬಹಮನಿ ಬೀದರನ್ನೂ ತನ್ನ ರಾಜ್ಯದಲ್ಲಿ ಸೇರಿಸಿಕೊಂಡನು. ಬಹಮನಿ ಸುಲ್ತಾನ ಅಹ್ಮದ ಶಹಾಬುದ್ದೀನ (ಶಹಾಬುದ್ದೀನ್ ಅಹಮ್ಮದ್, ೧೪೨೨) ತನ್ನ ರಾಜ್ಯದ ರಾಜಧಾನಿಯನ್ನು ಗುಲಬರ್ಗಾದಿಂದ ಬೀದರಿಗೆ ವರ್ಗಾಯಿಸಿದನು. ಬೀದರಿನ ಉತ್ತಮ ಹಿತಕರ ಹವಾಗುಣ ಅಲ್ಲದೆ ಮಧ್ಯವರ್ತಿ ಸ್ಥಳ ಹಾಗೂ ಸ್ವಾಭಾವಿಕ ರಕ್ಷಣೆಗೆ ಯೋಗ್ಯಸ್ಥಳವಾಗಿತ್ತು. ಬೀದರಿನ ಪುನರ್‌ನಾಮಕರಣ "ಮಹಮ್ಮದಾಬಾದ" ಎಂದಾಯಿತು.

ಒಬ್ಬ ರಶಿಯಾದ ಪ್ರವಾಸಿ ಅಥನೇಸಿಯನ್ ನಿರೆಲೀನ ದಕ್ಷಿಣದಲ್ಲಿ ಖ್ವಾಜಾ ಯುಸುಫ ಖುರಾಸಾನಿ ಎಂಬ ಪರ್ಷಿಯನ್ ಹೆಸರಿನಿಂದ ೧೪೬೯ ರಿಂದ ೧೪೭೪ ರ ವರೆಗೆ ಅನೇಕ ತಿಂಗಳು ಬೀದರಿನಲ್ಲಿ ಕಳೆದನು. ಈತನು ಬೀದರನ್ನು ಇಡೀ ಮಹಮ್ಮದನ್ ಹಿಂದುಸ್ತಾನದ ಪ್ರಮುಖ ನಗರವೆಂದು ಕರೆದಿದ್ದಾನೆ. "ಈ ನಗರವು ಸುಮಾರು ೨೪ ಕಿ.ಮೀ. ವ್ಯಾಪಿಸಿತ್ತು. ಇಲ್ಲಿ ಕುದುರೆ, ಹತ್ತಿ ಬಟ್ಟೆ, ರೇಶ್ಮೆಬಟ್ಟೆ, ಹಾಗೂ ಮೆಣಸಿನ ವ್ಯಾಪಾರ ತೀವ್ರಗತಿಯಲ್ಲಿ ನಡೆಯಿತು. ನ್ಯಾಯಾಲಯವು ಬೀದರಿನ ಕೋಟೆ ಆವರಣದಲ್ಲಿತ್ತು. ಸರದಾರರು ವೈಭವ ಐಶಾರಾಮಿ ಜೀವನ ನಡೆಸುತ್ತಿದ್ದರು.

ಬಹಮನಿ ಸಾಮ್ರಾಜ್ಯದ ಅವನತಿಯ ನಂತರ ಬರೀದಶಾಹಿ ಸುಲ್ತಾನರು ರಾಜಧಾನಿಯನ್ನಾಗಿ ಮಾಡಿಕೊಂಡು ೧೪೪೩ ರಿಂದ ಆಡಳಿತ ನಡೆಸಿದರು. ವಿಜಾಪುರದ ಆದಿಲಶಾಹಿ ಕ್ರಿ.ಶ. ೧೬೧೯ರಲ್ಲಿ ಬೀದರನ್ನೂ ವಶಪಡಿಸಿಕೊಂಡನು. ಅಸಫ್‌ಖಾನನು ೧೬೩೧ರಲ್ಲಿ ಭಾಲ್ಕಿಯನ್ನು ವಶಪಡಿಸಿಕೊಂಡು ಬಿಜಾಪುರಕ್ಕೆ ಮುತ್ತಿಗೆ ಹಾಕಿದನು. ಆದರೆ ಈ ದಾಳಿಯನ್ನು ಹಿಮ್ಮೆಟ್ಟಿಸಲಾಯಿತು.

೧೬೫೬ರಲ್ಲಿ ಜಾರಂಗಜೇಬನು ಬೀದರ ಹಾಗೂ ಕಲ್ಯಾಣವನ್ನು ವಶಪಡಿಸಿಕೊಂಡು ಬೀದರನ್ನು ಝಾಪರಬಾದ ಎಂದು ಪುನರ್ನಾಮಕರಣ ಮಾಡಿದನು. ಶಹಜಹಾನನ ನಾಣ್ಯಗಳ ಮೇಲೆ "ಝೂಫರಬಾದ" ಎಂದು ಮುದ್ರಿಸಲಾಗಿತ್ತು. ಬೀದರ ದೆಹಲಿಯ ಮೊಘಲರ

ಅಧೀನದಲ್ಲಿ ಮುಂದುವರೆಯಿತು. ೧೭೨೪ರಲ್ಲಿ ಹೈದರಾಬಾದಿನ ನಿಜಾಮನು ಉಲ್ ಮುಲ್ಕ ಅಸಫಜಾಹ ತನ್ನ ಅಧಿಕಾರವನ್ನು ಈ ಪ್ರದೇಶದಲ್ಲಿ ಸ್ಥಾಪಿಸಿದನು.

ಬೀದರಿನ ಸುತ್ತಲಿನ ಕೋಟೆ ದೇಶದ ಅತ್ಯಂತ ಬಲಾಢ್ಯ ಹಾಗೂ ಸುರಕ್ಷಿತಕೋಟೆ ಎಂದು ಪರಿಗಣಿಸಲ್ಪಟ್ಟಿತು. ಅತಿ ದೊಡ್ಡ ಹಾಗೂ ಬಲಾಢ್ಯ ಕೋಟೆಯನ್ನು ಸುಲ್ತಾನ ಅಹಮ್ಮದಶಾಹ ೧೪೨೬ ಹಾಗೂ ೧೪೩೨ ರ ಅವಧಿಯಲ್ಲಿ ಹಳೆಯ ಕೋಟೆಯ ಮೇಲೆ ಕಟ್ಟಿಸಿದನು. ಈ ಹಳೆಯ ಕೋಟೆ ಈಗ ಪುರಾನಾರೆಲ್ಲಾ ಎಂದು ಪ್ರಸಿದ್ಧಿಯಾಗಿದೆ. ಇದು ನಗರದ ಪೂರ್ವ ದಿಕ್ಕಿನಲ್ಲಿದೆ. ಪುರಾತರ ಅರಮನೆ ಮಸೀದಿ ಹಾಗೂ ಇತರ ಭಿನ್ನ ಕಟ್ಟಡಗಳ ಅವಶೇಷಗಳನ್ನು ಕಾಣಬಹುದು. ಕೋಟೆಯ ಗೋಡೆಯ ಬಾಹ್ಯ ಸುತ್ತಳತೆ ಸುಮಾರು ೪ ಕಿ.ಮೀ. ಇದೆ.

ಹೀಗೆ ಐತಿಹಾಸಿಕ ಹಿನ್ನೆಲೆ ಹೊಂದಿದ ನಗರ ಬೀದರ ಹಿಂದೂ ಹಾಗೂ ಮುಸಲ್ಮಾನ ಅರಸರು ಆಳಿಹೋದ ಪ್ರದೇಶವಾಗಿದೆ. ಕರ್ನಾಟಕ ರಾಜ್ಯದ ಉತ್ತರ ತುದಿಯಲ್ಲಿರುವ ಈ ಬೀದರ ಜಿಲ್ಲೆ ಕೆಂಪುಕಲ್ಲಿನ ತುಣುಕುಗಳಿಂದ ಕೂಡಿದ ಪ್ರದೇಶವಾಗಿರುವುದರಿಂದ ಮಳೆಗಾಲದಲ್ಲಿ ಹೆಚ್ಚಿಗೆ ಕೆಸರಾಗುವ ಸಂಭವ ಇರುವುದಿಲ್ಲ. ಇಲ್ಲಿನ ಮಣ್ಣಿನ ಬಳಕೆ ವಾಸ್ತುಶಿಲ್ಪದಲ್ಲಾಗುತ್ತದೆ. ಇಂತಹ ಕಲೆಗಳಲ್ಲಿ ಬಿದರಿ ಕಲೆಯು ಒಂದಾಗಿರುತ್ತದೆ.

ವ್ಯವಸಾಯ ಇಲ್ಲಿನ ಜನರ ಮುಖ್ಯ ಉದ್ಯೋಗ. ಹಿಂದಿನ ವಾರ್ಷಿಕ ಯೋಜನೆಯಲ್ಲಿ (೯೪೬-೯೯೧) ಈ ಜಿಲ್ಲೆಯಲ್ಲಿ ಹಿಂದುಳಿದ ಪ್ರದೇಶವೆಂದು ಪರಿಗಣಿಸಿ ಕೇಂದ್ರ ಸರಕಾರ ಇಲ್ಲಿನ ಔದ್ಯೋಗೀಕರಣ ಬೆಳವಣಿಗೆಗಾಗಿ ಅನುದಾನ ನೀಡಿತು. ಈ ಯೋಜನೆಯಲ್ಲಿ ಅನೇಕ ಚಿಕ್ಕ ಕಾರ್ಖಾನೆಗಳು ಮತ್ತು ಲಘು ವ್ಯವಸಾಯಗಳು ಸ್ಥಾಪಿತಗೊಂಡವು.

ಔದ್ಯೋಗಿಕರಣದ ಬೆಳವಣಿಗೆಯಲ್ಲಿ ಬಿದರಿಕಲೆಯ ಕಾರ್ಮಿಕರಿಗೂ ಸರಕಾರ ಮಾನ್ಯತೆ ನೀಡಿತು. ಇದರಿಂದಾಗಿ ಸ್ಥಳಿಯ ಚಿಕ್ಕ ಚಿಕ್ಕ ಅಂಗಡಿಗಳಲ್ಲಿ ಕುಳಿತು ಬಿದರಿ ಕೆಲಸ ಮಾಡುವ ಅವಕಾಶ ಸಿಕ್ಕಂತಾಗಿ ಕಾರ್ಮಿಕರಿಗೆ ಪ್ರೋತ್ಸಾಹ ಸಿಕ್ಕಿತು. ಮೊದಲ ರಾಜಾಶ್ರಯವಿತ್ತು. ಕಲಾಕಾರರಿಗೆ ಜೀವನ ಸಾಗಿಸುವುದು ಅಂತಹ ಕಷ್ಟದ ಕೆಲಸವಾಗಿರಲಿಲ್ಲ. ಆದರೆ ಇಂದಿನ ಬೀದರ ನಗರದಲ್ಲಿ ವಾಸಿಸುತ್ತಿರುವ ಮತ್ತು ಪರಂಪರೆಯಿಂದ ಬಂದ ಬಿದರಿ ವ್ಯವಸಾಯದಲ್ಲಿ ತೊಡಗಿದ ಕಾರ್ಮಿಕರಿಗೆ ಇಂದು ಜೀವನ ನಡೆಸುವುದು ಕಷ್ಟದ ಕೆಲಸವಾಗಿದೆ.

ಬೀದರ ನಗರದಲ್ಲಿ ಅನೇಕ ಧರ್ಮದ ಜನರು ವಾಸಿಸುತ್ತಾರೆ. ಹಲವು ಮಾತೃಭಾಷೆ ಗಳನ್ನಾಡುವ ಜನರು ಇರುವರು. ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದ ಗಡಿಯಲ್ಲಿ ಈ ನಗರ ಇರುವುದು. ಹೀಗಾಗಿ ಹಲವು ಭಾಷೆಗಳ ಹಲವು ಸಂಸ್ಕೃತಿಗಳ ಜನರು ಇಲ್ಲಿ ವಾಸಿ ಸುತ್ತಾರೆ. ಇಲ್ಲಿನ ಕಲೆ ಮತ್ತು ಸಂಸ್ಕೃತಿಗೆ ತನ್ನದೇ ಆದ ಸ್ಥಾನವಿದೆ. ಹೆಚ್ಚಿನಕಾಲ

ಮುಸಲ್ಮಾನರ ಆಳ್ವಿಕೆಗೆ ಒಳಪಟ್ಟಿದ್ದು ಬೀದರನಗರದಲ್ಲಿ ಇಸ್ಲಾಮ್ ಕಲೆಯನ್ನು ಹೆಚ್ಚಿಗೆ ಕಾಣಬಹುದು.

ಬಹಮನಿ ಹಾಗೂ ಬರೀದ ವಂಶದ ಸುಲ್ತಾನರ ಕಾಲದಲ್ಲಿ ಹಿಂದೂ ಮುಸಲ್ಮಾನ ಮತ್ತು ಪರ್ಷಿಯಾದಿಂದ ಬಂದ ಕಾರ್ಮಿಕರು ಮತ್ತು ಕಲಾವಿದರು ಇಲ್ಲಿ ಕೆಲಸ ಮಾಡುತ್ತಿದ್ದರು. ಬಹಮನಿಯ ಅರಸರ ಕಾಲದಲ್ಲಿ ಬೀದರ ನಾಗರ ಕಲೆ ಮತ್ತು ಸಂಸ್ಕೃತಿಯ ಕೇಂದ್ರವಾಗಿತ್ತು. ಈ ಸಮಯದಲ್ಲಿ ಇಲ್ಲಿಗೆ ಮೊಗಲ್, ಡೆಕ್ಕನ್, ಪರ್ಷಿಯನ್, ಇರಾಕಿ, ಟರ್ಕಿ, ಕಲಾವಿದರು, ವಿದ್ವಾಂಸರು, ಸಾಹಿತಿಗಳು, ಶಿಕ್ಷಣ ತಜ್ಞರು, ಬಂದು ನೆಲೆಸಿದರು. ಇದರ ಪ್ರಭಾವ ಇಲ್ಲಿನ ಕಲೆಯಲ್ಲಿ ಕಾಣಬಹುದು. ಮಹಮ್ಮದ ಗವಾನರು ಇಲ್ಲಿ "ಮದರಾಸಾ" ಎಂಬ ವಿಶ್ವವಿದ್ಯಾಲಯವನ್ನು ಕಟ್ಟಿಸಿದನು. ಆ ಕಾಲದಲ್ಲಿ ಇಲ್ಲಿ ದೇಶ ವಿದೇಶಗಳ ಅನೇಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಪರ್ಷಿಯನ್ ಭಾಷೆಯ ಜೊತೆ ಅನೇಕ ಕರ ಕುಶಲಕಲೆಗಳನ್ನು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದರು.

ಐತಿಹಾಸಿಕ ಹಿನ್ನೆಲೆ ಹೊಂದಿರುವ ಬೀದರ ಕಲೆ, ಸಂಸ್ಕೃತಿ, ಶಿಕ್ಷಣ ಹಾಗೂ ಧಾರ್ಮಿಕ ಕ್ರಾಂತಿಯ ಕೇಂದ್ರವಾಗಿತ್ತು. ೧೨ನೆಯ ಶತಮಾನದ ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ರಾಂತಿಯ ಪ್ರವರ್ತಕರಾದ ಮಹಾತ್ಮಾ ಬಸವೇಶ್ವರ ಈ ನಾಡನ್ನು ತಮ್ಮ ಕರ್ಮಭೂಮಿಯನ್ನಾಗಿಸಿ ಕೊಂಡಿದ್ದರು.

ಬಿದರಿ ಎಂಬ ಹೆಸರು ಬೀದರ ನಗರದ ಹೆಸರಿನಿಂದ ಉತ್ಪತ್ತಿಯಾಗಿಲ್ಲ. ನಾಲ್ಕುನೂರು ವರ್ಷಗಳ ಪುರಾತನ ಪರಂಪರೆ ಈ ನಗರದ ಜೊತೆ ಮೈಗೂಡಿಸಿಕೊಂಡಿದೆ. ಬಿದರಿ ಕಲೆಯ ಮಹತ್ವಪೂರ್ಣ ಸ್ಥಾನಗಳಲ್ಲಿ ಬೀದರ ನಗರವು ಒಂದಾಗಿದೆ. ಇಂದು ಇಲ್ಲಿ ಇನ್ನೂರಕ್ಕಿಂತ ಹೆಚ್ಚಿನ ಕಾರ್ಮಿಕರು ಈ ಕರಕುಶಲ ಕಲೆಯಲ್ಲಿ ತೊಡಗಿದ್ದಾರೆ. ಇದರಲ್ಲಿ ಪ್ರತಿಶತ ಎಪ್ಪತ್ತರಷ್ಟು ಜನರು ಈ ಕೆಲಸವನ್ನೂ ತಮ್ಮ ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ. ಈ ಕಲೆ ಇವರಿಗೆ ಪಿತ್ರಾರ್ಜಿತ ಕಲೆಯಾಗಿದೆ. ಬಿದರಿ ಕರಕುಶಲ ವಸ್ತುಗಳು ನೋಡಲು ಮನಮೋಹಕವಾಗಿವೆ. ಒಂದು ಕಾಲದಲ್ಲಿ ಈ ವಸ್ತುಗಳು ರಾಜರ ಆಸ್ಥಾನದ ಶೋಭೆ ಮತ್ತು ವೈಭವವನ್ನು ಹೆಚ್ಚಿಸುವ ಕೆಲಸ ಮಾಡುತ್ತಿದ್ದವು.

ಭಾರತದಲ್ಲಿ ಬಿದರಿ ಕಲೆಯ ವಸ್ತುಗಳ ನಿರ್ಮಾಣಕ್ಕೆ ಸಂಬಂಧಿಸಿದ ಒಂದು ಕರ್ನಾಟಕದ ಬೀದರ ಆದರೆ, ಇನ್ನೊಂದು ಬಿಹಾರದ ಪೂರ್ಣಿಯಾ. ಇವು ಎರಡೇ ಬಿದರಿಕಲೆಯ ಕೇಂದ್ರವಾಗಿ ಉಳಿದುಕೊಂಡಿವೆ. ಈ ನಗರಗಳನ್ನು ಹೊರತುಪಡಿಸಿ ಹೈದರಾಬಾದ್, ಲಕ್ನೋ, ಮುರ್ಷಿದಾಬಾದ್, ಅಹ್ಮದನಗರ ಪ್ರದೇಶಗಳಲ್ಲಿ ಬಿದರಿ ಕಲೆಯ ವಸ್ತುಗಳ ನಿರ್ಮಾಣ ನಡೆಯುತ್ತಿದೆ.

ಇಂದು ಬೀದರಿನಲ್ಲಿ ಸರಕಾರದಿಂದ ಸಹಾಯಪಡೆದು ಇಲ್ಲಿನ ಕುಶಲ ಕರ್ಮಿಗಳು ಜೀವನ ನಡೆಸುತ್ತಿದ್ದಾರೆ. ಸರಕಾರ ಹತ್ತನೇಯ ತರಗತಿಯಿಂದ ಎರಡು ವರ್ಷದ ಬಿದರಿ ಕರಕುಶಲ ಕಲೆಯ ತರಬೇತಿ ಶಿಕ್ಷಣವನ್ನು ಪ್ರಾರಂಭಿಸಿದೆ. ಇಲ್ಲಿ ಪರಂಪರೆಯಿಂದ ಬಂದ ಈ ಹಸ್ತಕಲೆಯನ್ನು ಮತ್ತು ಅದನ್ನು ಕಲಿಯುವ ಅವಕಾಶ ಬದಗಿಸಲಾಗಿದೆ. ಇಂತಹ ಶಿಕ್ಷಣ ಭಾರತದಲ್ಲಿ ಇದೇ ಸ್ಥಳದಲ್ಲಿ ನೋಡಲು ಸಿಗುತ್ತದೆ. ಭಾರತ ಸರಕಾರದಿಂದ ಭಾರತ ದೇಶದಲ್ಲಿಯೇ ಬಿದರಿ ಕಲೆಗೆ ಸಂಬಂಧಿಸಿದ ತರಬೇತಿ ನೀಡುವ ಒಂದೇ ಒಂದು ಸ್ಥಳ ಈ ಬೀದರ ಮಾತ್ರ. ಇಲ್ಲಿನ ಕಾರ್ಮಿಕರು ಈ ಬಿದರಿ ಕರಕುಶಲ ವಸ್ತುಗಳಿಗೆ ರಾಜ್ಯ ಮತ್ತು ರಾಷ್ಟ್ರಪ್ರಶಸ್ತಿಯನ್ನು ಪಡೆದಿದ್ದಾರೆ.

**೨. ಬಿದರಿ ಕಲೆಯ ಇತಿಹಾಸ**

ಬಿದರಿ ಕಲೆಯ ಹೆಸರಿನ ಮೂಲದ ಬಗ್ಗೆ ಅನೇಕ ವಿದ್ವಾಂಸರ ಭಿನ್ನಾಭಿಪ್ರಾಯಗಳಿವೆ. ಬಿದ್ರಿಕಲೆಗೆ ಈ ಹೆಸರು ಬಂದಬಗೆ ಜಾನಪದರು ನಾನಾರೀತಿಯ ಕಥೆಗಳನ್ನು ಹೇಳುತ್ತಾರೆ. ಯಾವುದೋ ಒಂದು ರೀತಿಯಲ್ಲಿರುವ ಒಂದು ಕಲೆ ಈಗಿರುವ ಬಿದ್ರಿಕಲೆಯ ರೂಪದಲ್ಲಿ ಕಂಡುಕೊಂಡಾಗ ಅವನು ತನ್ನ ಭಾಗ್ಯ, ವಿಧಿ(ಅದೃಷ್ಟ)ಯಿಂದಲೇ ಈ ಕಲೆ ಕರಗತವಾಯಿತೆಂದು ತಿಳಿದ. ಆದ್ದರಿಂದ ಇದಕ್ಕೆ 'ವಿಧಿ' ಎಂದು ಕರೆದ. ಅದು ವಿಧಿ>ಬಿದಿ ಎಂದು ಅಪಭ್ರಂಶ ಹೊಂದಿ "ಬಿದ್ರಿ" ಆಯಿತು ಎನ್ನುವ ಅಭಿಪ್ರಾಯವು ಇದೆ.

ಇನ್ನೂ ಕೆಲವರು ಈ ಕೆಲಯ ರೂಪ ಕಂಡುಕೊಂಡವನು ಮುಂದೆ ಬಣ್ಣ ಏರಿಸುವುದಕ್ಕಾಗಿ ಪ್ರಯತ್ನ ಮಾಡುವಾಗ ಅವನು ಕೆಳಗೆ ಬಿದ್ದನು. ಆಗ ಅವನ ಕೈಯಲ್ಲಿನ ಕಲೆಯು ಕೆಳಗೆ ಬಿತ್ತು. ಆಗ ಕಲೆಯು ಬಿದ್ದ ಕೋಟೆಯ ಮಣ್ಣಿನಂಶದಲ್ಲಿ ಕಲೆಯ ಬಣ್ಣ ಬದಲಾಗುವುದನ್ನೂ ಗಮನಿಸಿದ. ಈ ಅನುಭವದಿಂದ ಕಲೆಗಾರ ಕಲೆಗೆ ಬಣ್ಣ ಏರಿಸಲು ಬೀದರ ಕೋಟೆಯ ಪಕ್ಕದ ಮಣ್ಣನ್ನೂ ಬಳಸಿಕೊಳ್ಳಲು ಪ್ರಾರಂಭಿಸಿದ.

ಈ ರೀತಿಯಾಗಿ ಇವನು ಕೆಳಗೆ ಬಿದ್ದಾಗಲೇ ಒಂದು ಹೊಸ ಶೋಧವಾಯಿತು. ಆದ್ದರಿಂದ ಆತನು ಬಿದ್ದೆ, ಬಿದ್ದಿವಿ, ಬಿದ್ದಿವಿರಿ, ಬಿದ್ದಿರಿ, ಬಿದ್ರಿ ಎಂದು ಹೇಳುತ್ತ ಅದೇ ಹೆಸರು ಕಲೆಗೆ ಕರೆಯಲು ಪ್ರಾರಂಭಿಸಿದ ಎಂದು ರಾಜೇಂದ್ರಯರವಾಳೆ ಅವರು ಹೇಳುತ್ತಾರೆ. ಆದರೆ ಭಾಷಾರೂಪ ನಿಷ್ಪತ್ತಿಯ ಪ್ರಕಾರ ಈ ಪ್ರದೇಶದಲ್ಲಿ ಬಿದ್ರಿಕಲೆಯಲ್ಲಿ ನಿಪುಣತೆಯನ್ನು ಪಡೆದ ಪರಿಣಾಮವಾಗಿ ಬೀದರ್‌ನ ಮೂಲ ಶಬ್ದ ಬಿದಿರು> ಬಿದರೆ > ಬಿದಿರೆ > ಬಿದಿರೆ ಬಿದಿರುಪುರ > ಬಿದಿರೂರು > ಬೀದರ್ ಆಗಿದೆ ಎನ್ನುವವಾದವೂ ಇದ್ದು ಇವೆಲ್ಲದರ ಹಿನ್ನೆಲೆಯಲ್ಲಿ ಇಂದಿನ ಬೀದರ ಆಗಿದೆ ಎಂದು ರಾಜಶೇಖರ್.ಕೆ.ಎಲ್. ಅಭಿಪ್ರಾಯ ಪಡುತ್ತಾರೆ. ಬೀದರನಲ್ಲಿ ವಿಕಾಸ ಹೊಂದಿದ ಈ ಕೆಲೆಗೆ ಬಿದರಿಕಲೆಯೆಂದು ಹೆಸರು ಬಂದಿದೆ.

## ಬಿದರಿ ಕಲೆಯ ಹುಟ್ಟು ಮತ್ತು ಬೆಳವಣಿಗೆ

ಬೀದರ್ ಅತ್ಯಂತ ಉತ್ಕೃಷ್ಟವಾದ ಲೋಹದ ಕೆಲಸಕ್ಕೆ ಜಗತ್ತಿನಾದ್ಯಂತ ಪ್ರಸಿದ್ಧವಾಗಿದೆ. ಈ ಕಲೆ ಎಲ್ಲಿಂದ ಬಂತು, ಯಾರು ತಂದರು, ಯಾವಾಗ ತಂದರು ಎಂಬುದು ತಿಳಿದಿಲ್ಲ. ಕಳೆದ ಎರಡು ಶತಮಾನಗಳಿಂದ ಈ ಕಲೆಯನ್ನು ಬಹಮನಿ ರಾಜ ವಂಶದೊಂದಿಗೆ ಸಂಬಂಧ ಗೊಳಿಸಿದ ಸಂಪ್ರದಾಯವು ಬೆಳೆದು ಬಂದಿದೆ. ಅದಕ್ಕೊಂದು ಕಥೆಯೂ ಹೀಗಿದೆ. ೨ನೆಯ ಅಲ್ಲಾವುದ್ದೀನ್ ಅಹಮನು ಇರಾನಿನಿಂದ ಕಸಬುದಾರರನ್ನು ಬಿಜಾಪುರಕ್ಕೆ ಕರೆತಂದನು. ಬೀದರಿನ ತನ್ನ ನೂತನ ರಾಜಧಾನಿಯಲ್ಲಿ ಅವರನ್ನು ಇರಿಸಿದನು. ಆದ್ದರಿಂದ ಆ ವಸ್ತುಗಳಿಗೆ ಬಿದಿರೆಯ ಹೆಸರೇ ಬಂದಿತು. ಸಂಪ್ರದಾಯವು ಬಹಳಕಾಲ ಉಳಿದುಕೊಂಡು ಬಂದಿರುವು ದರಿಂದ ಸುಮ್ಮನೆ ತಳ್ಳಿಹಾಕಲು ಸಾಧ್ಯವಿಲ್ಲ. ಆದರೆ ಈ ಅಭಿಪ್ರಾಯವನ್ನು ಪೋಷಿಸುವ ಸರಿಯಾದ ಸಾಕ್ಷಾಧಾರ ಇನ್ನು ದೊರಕಬೇಕಾಗಿದೆ.

ಶಿಲಾಯುಗದಿಂದಲೂ ಬಿದರಿ ಕಲೆಯ ಪ್ರಕಾರ ಕಾಣಸಿಗುತ್ತದೆ. ಮುಂದಿನ ಯುಗಗಳಲ್ಲಿ ಕಲೆ ಹಂತಹಂತವಾಗಿ ಬದಲಾವಣೆ ಹೊಂದಿರುವುದು ಇತಿಹಾಸದ ಪುಟಗಳಿಂದ ವ್ಯೇದ್ಯ ವಾಗುತ್ತದೆ. ಮಣ್ಣಿನ ಮಡಕೆಗಳ ಮೇಲೆ ಲೋಹದ ವಸ್ತುಗಳ ಮೇಲೆ ಚಿತ್ತಾರಗಳನ್ನು (ನಕ್ಷೆ) ಬಿಡಿಸುವ ಕಲೆಯನ್ನೂ ಮಾನವ ಬಹುಹಿಂದೆಯೇ ಬೆಳೆಸಿಕೊಂಡಿದ್ದ. ಇದು ಮಾನವನ ವಿಕಾಸದ ಸಂಕೇತವಾಗಿದೆ. ರಾಜಾಶ್ರಯದಲ್ಲಿ ಕಲೆಗಳು ಹುಲುಸಾಗಿ ಬೆಳೆದು ಜನಮನ್ನಣೆ ಗಳಿಸಿವೆ. ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದ ಕಳಚೂರಿ ಅರಸರ ಕಾಲದಲ್ಲಿ ವಿವಿಧ ಪರಿಕರಗಳ ಮೇಲಲ್ಲದೆ ಕಬ್ಬಿಣದ ವಸ್ತುಗಳ ಮೇಲೆ ಬೆಳ್ಳಿ, ಬಂಗಾರ ಲೇಪಿಸುವ ಹಾಗೂ ಚಿತ್ತಾರ ಕೆತ್ತಿ ಅದರಲ್ಲಿ ಕೂಡಿಸುವ ಕಲೆ ಜಾರಿಯಲ್ಲಿದ್ದುದು ಕಂಡುಬರುತ್ತದೆ.

ಬಿದರಿ ವಸ್ತುಗಳ ಪ್ರಾಚೀನತಮ ಉಲ್ಲೇಖವನ್ನು ವಿದ್ವಾಂಸರು ಹಲವು ರೀತಿಯಲ್ಲಿ ವಿವರಿಸಿದ್ದಾರೆ. ಬಿದರಿ ಕರಕುಶಲ ಕಲೆ ಬೀದರದಲ್ಲಿ ಮೊಟ್ಟಮೊದಲಿಗೆ ಪರಿಚಯಿಸಿದ್ದು ೧೫ನೇ ಶತಮಾನದ ಆರಂಭದಲ್ಲಿಯೇ ಎನ್ನಬಹುದು. ಬಹಮನಿಸುಲ್ತಾನ ಅಹಮದ್ ಶಹವಲಿ ಬಹಮನಿ (ಕ್ರಿ.ಶ. ೧೪೨೨-೧೪೩೬) ತನ್ನ ರಾಜಧಾನಿಯನ್ನು ಕಲಬುರ್ಗಿಯಿಂದ ಬೀದರಕ್ಕೆ ವರ್ಗಾಯಿಸಿದಾಗ ರಂಗೀನ ಮಹಲ್ ಹಾಗೂ ಇತರ ಕಾಲಾತ್ಮಕ ಕಟ್ಟಡಗಳನ್ನು ಕಟ್ಟಿಸಲು ಇರಾನ್‌ನಿಂದ ಕುಶಲಕರ್ಮಿಗಳನ್ನು ಕರೆಸಿದ. ಇವರಲ್ಲಿ ಅಬ್ದುಲ್ಲಾಬಿನ್‌ಕೈಸರ್ ಎಂಬಾತ ಸತುವಿನ ಮಿಶ್ರಲೋಹದ ಮೇಲೆ ಚಿನ್ನದ ಕುಸುರಿ ಕೆಲಸವನ್ನು ಮಾಡಿ ಸುಂದರ ಕಲಾತ್ಮಕ ವಸ್ತುಗಳನ್ನು ತಯಾರಿಸಬಲ್ಲವನಾಗಿದ್ದ. ಸತುವು ಬಿಳಿಯದಾಗಿರುವುದರಿಂದ ಅದರಲ್ಲಿ ಬೆಳ್ಳಿ ಕೂಡಿಸಿದ್ದರೂ ಅದು ಕಾಣುತ್ತಿರಲಿಲ್ಲ. ಕಾರಣ ಅವೆರಡರ ಬಣ್ಣ ಒಂದೆ ಯಾಗಿದ್ದವು.

ಒಮ್ಮೆ ಕೋಟೆಯ ಕಟ್ಟಡದ ಕೆಲಸಕ್ಕೆ ಈ ಕಲಾಕೃತಿಯೊಂದಿಗೆ ಹೋದಾಗ, ಆತನ ಕೈಯಿಂದ ಕಲಾಕೃತಿ ಜಾರಿ ಕೆಳಗೆ ಕೆಸರಲ್ಲಿ ಬಿದ್ದು ಸತುವಿನ ಬಣ್ಣ ಕಪ್ಪಾಗಿರುವದನ್ನು ಹಾಗೂ ಬೆಳ್ಳಿ ಮತ್ತು ಬಂಗಾರದ ಬಣ್ಣ ತಮ್ಮ ಮೂಲರೂಪದಲ್ಲಿರುವುದನ್ನು ಕಂಡು ಆಶ್ಚರ್ಯಪಟ್ಟು, ಕಲಾಕೃತಿ ಬಿದ್ದ ಸ್ಥಳವನ್ನು ಮಣ್ಣು ಪರೀಕ್ಷೆಮಾಡಿದ, ಮಣ್ಣಿನ ವಾಸನೆ ಹಾಗೂ ರುಚಿ ವಿಚಿತ್ರವಾಗಿರುವುದನ್ನು ಕಂಡುಕೊಂಡನು. ಆ ಮಣ್ಣಿಗೆ ಉಪ್ಪು ಹಾಗೂ ಖಾರದ ವಿಶಿಷ್ಟ ರುಚಿ ಇರುವುದನ್ನು ತಿಳಿದುಕೊಂಡು ಕಲಾಕೃತಿಗಳ ಮೇಲೆ ವಿವಿಧ ರೀತಿಯಲ್ಲಿ ಮಣ್ಣು ಪ್ರಯೋಗಿಸಿದ. ಪ್ರಯೋಗಫಲಿಸಿ ಬಿದ್ರಿಕಲೆ ಇಲ್ಲಿಂದಲೇ ಹುಟ್ಟಿತ್ತೆಂಬುದು ಜನಪದರ ವಾದವಾಗಿದೆ.

ಅತೀ ಅಪೂರ್ವ ಹಾಗೂ ಉನ್ನತ ಕಲಾಕೌಶಲ್ಯ ಹೊಂದಿರುವ ಬಿದ್ರಿ ಕಲೆ ಪರ್ಷಿಯಾ ಮೂಲದ್ದು ಎಂದು ಹೇಳಲಾಗಿದೆ. ರಾಜಾಶ್ರಯ ಪೋಷಿತವಾಗಿರುವ ಈ ಕಲೆ, ಜನಸಾಮಾನ್ಯ ರಿಗೂ ಉಪಯುಕ್ತ ಎನಿಸಿದ್ದರಿಂದ ಇಂದಿಗೂ ತನ್ನ ಜೀವಂತಿಕೆಯನ್ನು ಉಳಿಸಿಕೊಂಡಿದೆ. ಸೂಫಿಸಂತ ಖ್ವಾಜಾ ಮೋಹಿನೋದ್ದಿನ್ ಬೆಸ್ತಿ ಎಂಬವರು ಈ ಕಲೆಯನ್ನು ಅಜ್ಮೀರ ರಾಜಸ್ಥಾನ, ಉದಯಪುರಗಳಲ್ಲಿ ಜನಪ್ರಿಯಗೊಳಿಸಿದರು ಎಂದು ಹೇಳಲಾಗಿದೆ. ಕುಶಲ ಕರ್ಮಿಯಾಗಿದ್ದ ಅಬ್ದುಲ್‌ಬಿನ್ ಕೈಸರ್ ಇರಾನ್-ಇರಾಕ್‌ಗಳಿಂದ ಬಿದರಿ ಕರಕುಶಲ ವಸ್ತುಗಳನ್ನು ತಂದು ಬಿಜಾಪುರದಲ್ಲಿ ಮಾರಾಟ ಮಾಡುತ್ತಾ ಈ ಕರಕುಶಲ ಕಲೆಯನ್ನು ಇಲ್ಲಿ ಬೆಳಸಿದನೆಂದು ಹೇಳುತ್ತಾರೆ. ಇದೇ ಸಂದರ್ಭದಲ್ಲಿ ಅವರ ವಿಶ್ವಾಸ ಗಳಿಸಿದ ಬೀದರಿನ ಶಿವಣ್ಣ ಎಂಬ ಕುಶಲಕರ್ಮಿ ಬಿದ್ರಿಕಲೆಯನ್ನು ಕರಗತ ಮಾಡಿಕೊಂಡನು. ನಂತರ ಬೀದರಿ ನಲ್ಲಿ ಈ ಕಲೆಯನ್ನು ಪ್ರಚಾರಪಡಿಸಿದನೆಂದು ರಾಧಾಕೃಷ್ಣರಾವ ಎಂಬ ವಿದ್ವಾಂಸರ ಅಭಿ ಪ್ರಾಯವಾಗಿದೆ.

ರಾಮಣ್ಣ ಮತ್ತು ಹೇಮಣ್ಣ ಎಂಬ ಪ್ರಸಿದ್ಧ ಚಿನಿವಾರರು ೧೪ನೆಯ ಶತಮಾನದ ಉತ್ತರಾರ್ಧದಲ್ಲಿ ಬೀದರ್‌ನಲ್ಲಿದ್ದು ಬಂಗಾರ, ಬೆಳ್ಳಿ ಇತ್ಯಾದಿ ಕಲಾ ಕೃತಿಗಳಲ್ಲಿ ಮುತ್ತು, ರತ್ನ, ಹವಳಗಳ ಜೋಡಣೆಯ ಕಲೆ ಕರಗತ ಮಾಡಿಕೊಂಡಿದ್ದರೆಂಬ ವಿಚಾರ ಲಕ್ಕಣ ದಂಡೇಶನ ಶಿವತತ್ವ ಚಿಂತಾಮಣಿಯಿಂದ ತಿಳಿದು ಬರುತ್ತದೆ. ಸ್ಥಳೀಯ ಚಿನಿವಾರರ ಕಲಾಕೃತಿಗಳ ಪ್ರೇರಣೆಯಿಂದ ಅಬ್ದುಲ್‌ಬಿನ್ ಕೈಸರನು ಬಿದರಿ ಕಲೆಯ ಹುಟ್ಟಿಗೆ ಕಾರಣ ಕರ್ತನಾದನು ಎಂಬುದು ಒಂದು ಅಭಿಪ್ರಾಯವಾಗಿದೆ. ಅಬ್ದುಲ್‌ಬಿನ್ ಕೈಸರನು ಪರ್ಷಿಯಾ ದಿಂದಲೇ ಈ ಕಲೆಯನ್ನು ಕರಗತ ಮಾಡಿಕೊಂಡು ಬಂದಿದ್ದನೆಂಬುದು ಮತ್ತೊಂದು ಅಭಿಪ್ರಾಯವಾಗಿದೆ.

ಬಹಮನಿ ವಂಶದ ರಾಜರ ಕಾಲದಲ್ಲಿ ಊರ್ಜಿತಾವಸ್ಥೆಯನ್ನೂ ಮುಟ್ಟಿದ್ದ. ಈ ಬಿದರಿಕಲೆಯನ್ನು ಪರ್ಶಿಯಾದ ಸಾಂಸ್ಕೃತಿಕ ಮತ್ತು ಕಲೆಯ ಮೂಲದಿಂದ ಬಂದಿರುವುದಾಗಿ

ಭಾವಿಸಲಾಗಿದೆ. ಅರೇಬಿಯಾ ಮತ್ತು ಪರ್ಶಿಯಾದಲ್ಲಿ ಸ್ಟೀಲ್ ಅಥವಾ ತಾಮ್ರದ ವಸ್ತುಗಳ ಮೇಲೆ ಬಂಗಾರದ ಎಲೆಗಳನ್ನು "ಇನಲೆ" ಮಾಡುವ ಕಲೆಯು "ಬಿದರಿ" ಕಲೆ ಹೋಲುತ್ತದೆ. ಅಬ್ದುಲ್ಲಾಬಿನ್ ಕೈಸರನು ಮಹಮ್ಮದ ಗವಾನ ಮದರಸಾದಲ್ಲಿ ಈ ಕಲೆಯನ್ನು ಮುಂದುವರೆಸಿ, ಹೊಸ ಶಿಷ್ಯಂದಿರನ್ನು ತಯಾರು ಮಾಡಿದನು.

ಬಿದರಿ ವಸ್ತುಗಳ ಪ್ರಾಚೀನತಮ ಉಲ್ಲೇಖ ಬೀದರಿನದೇ ಆದರೂ ಅದರ ಮೊದಲನೆಯ ಉಲ್ಲೇಖ ದೊರಕುವುದು ೧೭೫೯-೧೭೬೦ರಲ್ಲಿ ಪರ್ಷಿಯನ್ ಭಾಷೆಯಲ್ಲಿ ಬರೆದ ಚಹಾರ್ ಗುಲ್‌ಶನ್ ಎಂಬ ಗ್ರಂಥದಲ್ಲಿ. ಈ ಗ್ರಂಥದಲ್ಲಿ ಮೊಗಲ್ ಮತ್ತು ಡೆಕ್ಕನಿಯ ರಾಜರ ಆಡಳಿತ ಕುರಿತು ಮತ್ತು ಲಘು ಉದ್ಯೋಗಗಳ ಬಗ್ಗೆ ಬರೆಯಲಾಗಿದೆ. ಈ ಪರ್ಷಿಯನ್ ಕೃತಿಯನ್ನು ಜಾದುನಾಥ ಸರ್ಕಾರ ಅವರು ಭಾಷಾಂತರ ಮಾಡಿರುವರು. ಅವರು ಬಿದರಿ ವಸ್ತುಗಳ ಕುರಿತು ಸ್ವಾರಸ್ಯವಾದ ಚಿತ್ರವನ್ನು ಕೊಡುತ್ತಾರೆ. "ಈ ಪ್ರಾಂತದಲ್ಲಿ (ಬೀದರ) ಅತೀಸುಂದರವಾದ ಮತ್ತು ಬೆಲೆಬಾಳುವ ಬಿದ್ರಿ ಪಾತ್ರೆಗಳನ್ನು ತಯಾರಿಸಲಾಗುತ್ತದೆ. ಪಾನ್-ದಾನ್, ಅಬ್-ಖೋರಾ, ರೆಕಬಿ, ಸಣ್ಣ ಹಾಗೂ ದೊಡ್ಡ ಬಟ್ಟಲುಗಳು, ಹುಕ್ಕಾ, ಮೇಣದ ಭತ್ತಿ ಹಿಡಿಕೆಗಳು ಮತ್ತಿತರ ವಸ್ತುಗಳು ತಯಾರಾಗುತ್ತವೆ. ಅವುಗಳ ಮೇಲೆ ಬೇರೆ ಬೇರೆ ಬಗೆಯ ಹೂವುಗಳ ವಿನ್ಯಾಸಗಳನ್ನು ಚಿನ್ನ ಮತ್ತು ಬೆಳ್ಳಿಯಲ್ಲಿ ಇನ್‌ಲೇ ಮಾಡಲಾಗುತ್ತದೆ. ಈ ಸ್ಥಳದ ಕುಶಲಕರ್ಮಿಗಳು ಎಷ್ಟು ನಾಜೂಕಾಗಿ ಈ ಕೆಲಸ ಮಾಡುತ್ತಾರೆಂದರೆ, ಒಬ್ಬ ಚಿತ್ರ ಕಲಾವಿದರು ಕೂಡ ತನ್ನ ಕಲ್ಪನೆಯಲ್ಲಿ ಅವುಗಳನ್ನು ಚಿತ್ರಿಸಿಕೊಳ್ಳಲಾರನು."

"ಚಹಾರ್‌ಗುಲಶನ್ ಗ್ರಂಥದ ಪ್ರಕಾರ ೧೭ ನೆಯ ಶತಮಾನದಲ್ಲಿ ಬೀದರ ಈ ಕಲೆಯ ಮುಖ್ಯ ಕೇಂದ್ರವಾಗಿತ್ತು. ಇದರ ಇನ್ನೊಂದು ಉದಾಹರಣೆ ೧೭೭೦ರಲ್ಲಿ ಫಿರೋಜಾಬಾದಿನಲ್ಲಿ ಬರೆದ ನಕಾಶೆಯಲ್ಲಿ ದಾಖಲಾಗಿದೆ. ಇದನ್ನು ಫ್ರೆಂಚ ಅಧಿಕಾರಿ ಕಲೋನಲಿ ಜೀನ್ ಬೆಪಸ್ಟ ಬರೆದಿದ್ದರು. ಇವರು ಔಧ ನವಾಬರ ಸೇನಾದಳದ ಕಾರ್ಯ ನಿರ್ವಾಹಕರಾಗಿದ್ದರು. ಇವರು ಸ್ಥಳೀಯ ಕಲಾವಿದರ ನೆರವಿನಿಂದ ಭಾರತದ ಐತಿಹಾಸಿಕ ಮತ್ತು ಔದ್ಯೋಗಿಕ ನಕಾಶೆಗಳನ್ನು ಬರೆದಿದ್ದರು. ಇದರಲ್ಲಿ ಸುಭಹ-ದೇ-ಬೀದರೆ ಎಂಬ ನಕಾಶೆ ಒಂದಾಗಿತ್ತು. ಈ ನಕ್ಷೆಯಲ್ಲಿ ಈ ಪ್ರದೇಶದ ಅನೇಕ ಕರಕುಶಲ ಕಲೆ ಮತ್ತು ಚಿಕ್ಕ ಉದ್ಯೋಗಗಳ ವಿವರಣೆ ಸಿಗುತ್ತದೆ. ಈ ನಕ್ಷೆಯ ಬಲಭಾಗದ ಮೂಲೆಯಲ್ಲಿರುವ ಚಿತ್ರದಲ್ಲಿ ಬಿದರಿ ಕರಕುಶಲ ವಸ್ತುಗಳ ಮೇಲೆ ನಕ್ಷೆಯನ್ನು ಕೆತ್ತುತ್ತಿರುವ ದೃಶ್ಯ ಇರುವುದು. ಬಿದರ ವಸ್ತುಗಳನ್ನು ತಯಾರಿಸಲು ಉಪಯೋಗಿ ಸುವ ಉಪಕರಣಗಳನ್ನು ಸಹ ನೋಡಬಹುದು. ಝುಂಕ ಧಾತುವನ್ನು ಕಾಯಿಸಲು ಹಸ್ತಚಾಲಿತ ಭಟ್ಟಿಸುತ್ತಿಗೆ, ಪಕ್ಕಡ, ಪ್ಲೇನ್ ಹುಕ್ಕಾ ಮತ್ತು ಎದುರುಗಡೆ ನಿಂತಿರುವ ಅವನ ಪತ್ನಿ, ಹಿಂದೆ ನಳಿಕೆಯ ಮೇಲೆ ಕುಳಿತ ಸಾಕಿದ ಗಿಳಿಯೊಂದಿದೆ. ಈ ನಕ್ಷೆಯ ಎಡಭಾಗದ ಕೆಳಮೂಲೆಯಲ್ಲಿ ಬಿದರಿ ವಸ್ತುಗಳಿವೆ. ಇದರಲ್ಲಿ ಹುಕ್ಕಾ, ಜಲ ಪಾತ್ರೆ, ಘುಂಟಾಕೃತಿಯ ಹುಕ್ಕಾ, ಚಿಕ್ಕ ಪೆಟ್ಟಿಗೆ ಗಳನ್ನು ಕಾಣಬಹುದು.

೧೭ನೇ ಶತಮಾನದಲ್ಲಿ ಬಿದರಿ ವಸ್ತುಗಳನ್ನು ಮೊಗಲ್ ಮತ್ತು ದಖ್ಖನಿ ಲಘುಚಿತ್ರಗಳಲ್ಲಿ ಬಳಸಿಕೊಂಡರು. ದಖ್ಖನಿ ಲಘುಚಿತ್ರಗಳ ತಜ್ಞರಾದ ಜಗದೀಶ ಮಿತ್ತಲ್‌ರ ಪ್ರಕಾರ ಈ ವಿಷಯ ಬೆಳಕಿಗೆ ಬಂದಿದೆ. ಕೆಲವು ಚಿತ್ರಗಳಲ್ಲಿ ಒಬ್ಬ ರಾಜವಂಶದ ವ್ಯಕ್ತಿ ಹುಕ್ಕಾ ಸೇದುತ್ತಿರುವ ದೃಶ್ಯ ನೋಡಬಹುದು. ಇಂತಹ ಚಿತ್ರಗಳನ್ನು ಮೊಗಲರ ಕಿರುರೂಪ ಚಿತ್ರಗಳಲ್ಲಿ ಕಾಬಹುದು. ಇಲ್ಲಿ ಬಿದರಿ ಹುಕ್ಕಾದ ಮೇಲೆ ಬೆಳ್ಳಿಯ ಕೆಲಸಮಾಡಲಾಗಿದೆ. ಇದರ ಬಾಹ್ಯ ಆಕಾರ ಮೊಗಲರದು ಮತ್ತು ಅದರೊಳಗಿನ ಪರ್ಶಿಯನ್ ಕಲೆಯಿಂದ ಪ್ರಭಾವಿತಗೊಂಡಿದೆ ಇದರ ಕುತ್ತಿಗೆ ಮತ್ತು ತಳಭಾಗ ಡೆಕ್ಕನಿ ಪಾತ್ರೆಗಳ ಪ್ರಭಾವ ಹೊಂದಿದೆ. ದಖ್ಖನಿನ ಲಘು ಚಿತ್ರಗಳ ಮೇಲೆ ಮಾರ್ಕ್ ಜೀಬ್ರೋವೆಸ್ಕಿ ಇನ್ನೊಂದು ಪುಸ್ತಕ ಬರೆದಿದ್ದಾರೆ. ಇದರಲ್ಲಿ ನವಾಬ ಅಬ್ದುಲ್ ಗಫಾರಖಾನ್‌ರ ಚಿತ್ರವಿದೆ. ಈ ಚಿತ್ರದಲ್ಲಿ ಗಫಾರಖಾನರು ಅಲಂಕೃತ ಹಾಸಿಗೆಯ ಮೇಲೆ ಕುಳಿತಿದ್ದಾರೆ. ಅವರ ಮುಂದೆ ವರ್ತುಲ ಆಕಾರದ ಒಂದು ಹುಕ್ಕಾ ಇದೆ-ಹಿಂದೆ ಒಬ್ಬ ಸೇವಕ ಗಾಳಿ ಬೀಸಲು ಬೀಸಣಿಕೆ ಹಿಡಿದು ನಿಂತಿದ್ದಾನೆ.

ಜಿಬ್ರೊವೆಸ್ಕಿಯವರ ಪ್ರಕಾರ ಈ ಚಿತ್ರ ೧೭ ನೆಯ ಶತಮಾನದ ಉತ್ತರಾರ್ಧದಲ್ಲಿ ಬರೆಯಲಾಗಿದೆ. ಇದರಲ್ಲಿ ಚಿತ್ರಿತ ಕಪ್ಪು ಹುಕ್ಕಾದ ಮೇಲೆ ಬೆಳ್ಳಿಯಿಂದ ನಕ್ಷೆಯ ಕೆಲಸ ಮಾಡಲಾಗಿದೆ. ಇದರ ಬಾಹ್ಯ ವರ್ತುಲ ಆಕಾರದ ಮತ್ತು ತೆಳುವಾದ ಎತ್ತರವಾದ ಕುತ್ರಿಗೆಯ ಭಾಗ ಮೊಗಲರಿಂದ ಪ್ರಭಾವಿತಗೊಂಡಿದ್ದರೆ, ನಕ್ಷೆಯಲ್ಲಿನ ಹೂವು, ಎಲೆಗಳ ರಚನೆಯೂ ಸಹ ಮೊಗಲರಿಂದಲೇ ಪ್ರಭಾವಿತಗೊಂಡಿದೆ. ಇದು ಬಿದರಿ ಹುಕ್ಕಾ ಇರಬಹುದೆಂದು ಊಹಿಸಲಾಗಿದೆ. ಈ ಕಾಲದ ದಖ್ಖನಿ ಕಲೆ ಮತ್ತು ವಾಸ್ತು ಕಲೆಯ ಮೇಲೆ ಮೊಗಲರ ಮತ್ತು ಪರ್ಶಿಯನ್ನರ ಪ್ರಭಾವವಿರುವುದು ಸ್ಪಷ್ಟವಾಗುತ್ತದೆ.

ಈಗ ಉಳಿದಿರುವ ಅತ್ಯಂತ ಸುಂದರವಾದ ೧೭ ನೆಯ ಶತಮಾನದ ಮಾದಿರಿಯೊಂದು ಲಂಡನ್ನಿನ ವಿಕ್ಟೋರಿಯ ಅಲ್ಬರ್ಟ ಮ್ಯೂಸಿಯಂನಲ್ಲಿದೆ. ಅದೊಂದು ಹೂಜಿ. ಅದರ ಒಡಲೆಲ್ಲ ಬೆಳ್ಳಿ ಮತ್ತು ಹಿತ್ತಾಳೆಯ ಲತಾ ಚಿತ್ರಗಳು ಮತ್ತು ಹೂವು ಎಲೆಗಳಿಂದ ತುಂಬಿದೆ. ಅದರ ಇನ್‌ಲೇ ತುಂಬ ಉತ್ತಮ ದರ್ಜೆಯದಾಗಿದೆ. ಅಲ್ಲದೇ ಅಫ್ತಬಿ ಎಂಬ ಬಿದರಿ ಇನೇಲೇ ತಂತ್ರ ಅಲ್ಲಿ ಬಳಕೆಯಾಗಿದೆ. ಬೆಳ್ಳಿ ಇನ್‌ಲೇ ಮಾಡಿ ಅದರಲ್ಲಿ ವಿನ್ಯಾಸವನ್ನು ಕತ್ತರಿಸಿರುವುದರಿಂದ ಕೆಳಗಿರುವ ಕರಿಯ ಮೇಲ್ಮೈ ಮೇಲೆ ಅದು ಬಹುಸುಂದರವಾಗಿ ಎದ್ದು ಕಾಣುತ್ತದೆ. ಹಿತ್ತಾಳೆಯ ಇನ್‌ಲೇ ಹೂವು ಮತ್ತು ಎಲೆಗಳ ವಿವರಗಳನ್ನು ಒದಗಿಸಿ ವಿಫುಲತೆಯ ಪರಿಣಾಮವನ್ನು ಕೊಡುತ್ತದೆ. ಹೂಜಿಯ ಅಂಚಿನ ಮೇಲಿರುವ ಬರಹವು ಅದು ತೈಮೂರನಿಗೆ ಸೇರಿದ್ದೆಂದೂ ೧೪೮೧-೦೭ರಲ್ಲಿ ಹುಸೇನ್ ಇಸ್ಫಹಾನಿ ಎಂಬ ಕಲಾವಿದನು ತಯಾರಿಸಿದನೆಂದೂ ಹೇಳಿದೆ.

ಆದರೆ ಹೀಗೆ ಹೇಳಿರುವುದು ಸರಿಯಲ್ಲ. ಅದು ಹದಿನೇಳನೆಯ ಶತಮಾನದ ಮಧ್ಯ ಭಾಗಕ್ಕಿಂತ ಹಿಂದಕ್ಕೆ ಹೋಗಲಾರದು ಎಂದು ಹೇಳಲಾಗಿದೆ. ಹದಿನೈದನೆಯ ಶತಮಾನದಲ್ಲಿ ತೈಮೂರನಿಗೆ ಉಪಯೋಗಿಸಿದ ಬಿರುದಿನ ಪದಗಳು ಇಲ್ಲಿ ಬರೆಯದಿರುವು ದಕ್ಕಿಂತ ಬೇರೆ ಯಾದವು. ಈ ಹೂಜಿಯಲ್ಲಿ ದಖ್ಖನಿನ ಲಕ್ಷಣಗಳು ಬಲವಾಗಿವೆ. ಕುಸುರಿ ಕೆಲಸ, ಅಲಂಕಾರದ ಮಾದರಿ ಈ ಕಲಾಕೃತಿಯನ್ನು ಬೀದರ್‌ಗೆ ಸೇರಿದ್ದೆಂದು ಸೂಚಿಸುತ್ತದೆ.

ಈಗ ಹೈದರಾಬಾದ ಸಾಲರಜಂಗ ಮ್ಯೂಜಿಯಂನಲ್ಲಿರುವ ರತ್ನಗಂಬಳಿಗಳ ಮೂಲೆ ಗಳಲ್ಲಿಯ 'ಪಾರ್ಶ್ವಚಿತ್ರ'ಗಳನ್ನು ನೋಡಬಹುದಾಗಿದೆ. ಇವುಗಳ ಮುಖ್ಯ ಅಲಂಕಾರ ವೆಂದರೆ, ಒಂದರ ಮೇಲೊಂದು ಕೂಡಿಸಿದ ಬೆಳ್ಳಿಯ ಶಲ್ಕಗಳು, ತ್ರಿದಳ ವಿನ್ಯಾಸ, ಬೆಳ್ಳಿ ಮತ್ತು ಹಿತ್ತಾಳೆಯಲ್ಲಿ ಮಾಡಿದ ಅಪ್ತಭಿ ವಿನ್ಯಾಸ, ಇವು ಸಮಕಾಲೀನ ಹಂತಗಳಲ್ಲಿ ಕಂಡು ಬರುತ್ತವೆ. ಮೇಲೆ ಗೋಪುರದ ಮಾದರಿಯ ಗುಮ್ಮಟಗಳಿವೆ.ವಾಸ್ತುಶಿಲ್ಪದಲ್ಲಿ ಕಾಣುವ ಮಾದರಿಯ ಹಣಿಗೆಯನ್ನು ಇನ್‌ಲೇ ಮಾಡಿದೆ. ತಳವು ಆರು ಮೂಲೆಯದಾಗಿದೆ. ಅದರ ಮೇಲಿನ ವಿನ್ಯಾಸಗಳು ದಖ್ಖನ್ ವಾಸ್ತುಶಿಲ್ಪದ ಸಾಮಾನ್ಯ ಲಕ್ಷಣಗಳಾಗಿವೆ. ತಳಹದಿಯ ಹಂತಗಳಲ್ಲಿ ಕೋಟೆಗಳು ಮತ್ತು ಕೈಪಿಡಿಗಳಲ್ಲಿರುವಂತೆ ತೆನೆಗಳ ಅಲಂಕಾರವಿದೆ.

ವಿಕ್ಟೋರಿಯಾ ಮತ್ತು ಅಲ್ಬರ್ಟಮ್ಯೂಸಿಯಂನಲ್ಲಿರುವ ಇನ್ನೊಂದು ಕಲಾಕೃತಿ ಒಂದು ಹುಕ್ಕಾ, ಬೆಳ್ಳಿ ಮತ್ತು ಹಿತ್ತಾಳೆಯ ಇನ್‌ಲೇ ಮಾಡಿ ಹೂಬಿಟ್ಟ ಸಸ್ಯಗಳಿರುವ ಸುರುಳಿ ಚಿತ್ರದ ನಮೂನೆಯನ್ನು ಇಲ್ಲಿ ನೋಡಬಹುದು. ಅದನ್ನು ಎಲ್ಲಿ ತಯಾರಿಸಲಾಯಿತೆಂಬು ದನ್ನು ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. ದಖನ್ ಸುಲ್ತಾನರನ್ನೂ ೧೭ ನೆಯ ಶತಮಾನ ದಲ್ಲಿ ಒಳಪಡಿಸಿಕೊಂಡ ಮುಗಲ್ ಸಾಮ್ರಾಜ್ಯದ ಯಾವ ಭಾಗದಲ್ಲಿಯಾದರೂ ಸಿದ್ಧವಾಗಿರ ಬಹುದು. ಷಹಜಹಾನನ (೧೬೨೮-೧೬೫೮) ಆಳ್ವಿಕೆಯಲ್ಲಿ ಬಿಜಾಪುರ ಮತ್ತು ಗೋಲ್ಕೊಂಡ ಗಳು ಮುಗಲ್ ಪ್ರಭುತ್ವವನ್ನು ಅಂಗೀಕರಿಸಲೇಬೇಕಾಯಿತು.

ಬೀದರವು ೧೬೫೭ರಲ್ಲಿ ಅವರ ಕೈವಶವಾಯಿತು. ಔರಂಗಜೇಬರು ೧೬೮೬ರಲ್ಲಿ ಬಿಜಾಪುರವನ್ನು ೧೬೮೭ರಲ್ಲಿ ಗೋಲ್ಕೊಂಡವನ್ನು ವಶಪಡಿಸಿಕೊಂಡು ಆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದನು. ಮುಗಲ್ ರಾಜಕೀಯ ಪ್ರಭಾವವು ಕಲೆಗೆ ಷಹಜಹಾನನ ಆಳ್ವಿಕೆಯ ಸಮಯದ ಪ್ರಧಾನ ಅಲಂಕರಣ ಅಂಶವಾಗಿದ್ದ ಪುಷ್ಪ ವಿನ್ಯಾಸವನ್ನು ಸೇರಿಸಿತು. ವಿಕ್ಟೋರಿಯಾ ಮತ್ತು ಅಲ್ಬರ್ಟ ಮ್ಯೂಸಿಯಂನಲ್ಲಿರುವ ಹುಕ್ಕಾದಲ್ಲಿಯೂ ದಖ್ಖನಿನ ಸಮಕಾಲಿನ ವರ್ಣಚಿತ್ರಗಳಲ್ಲಿ ಚಿತ್ರಿತವಾದ ಬಿದರಿ ವಸ್ತುಗಳಲ್ಲಿಯೂ ಕಂಡುಬರುವ ಶೈಲಿ ಇದೆ.

## ೧೮ ನೆಯ ಶತಮಾನ

೧೮೮೦ ರಲ್ಲಿ ಭಾರತದಲ್ಲಿ ಔದ್ಯೋಗಿಕರಣದಿಂದಾಗಿ ಅನೇಕ ಬದಲಾವಣೆಗಳಾದವು. ಪಾಶ್ಚಿಮಾತ್ಯರಾಷ್ಟ್ರಗಳಲ್ಲಿ ಕಂಡುಹಿಡಿದ ವೈಜ್ಞಾನಿಕ ಉಪಕರಣಗಳ ಉಪಯೋಗ ನಡೆಯುತ್ತಿತ್ತು. ಬಿಹಾರ ರಾಜ್ಯದ ಪೂರ್ಣಿಮಾ ಎಂಬಲ್ಲಿ ಬ್ರಿಟೀಷರ ಸಹಕಾರದೊಂದಿಗೆ ಬಿದರಿ ಕಲೆ ಕುಶಲಕರ್ಮಿಗಳಿಂದ ತಲೆ ಎತ್ತಿತು. ಅಲ್ಲಿಂದ ಬಿದರಿ ಕಲೆಗಳು ದೇಶ ವಿದೇಶ ಗಳಿಗೆ ರಫ್ತಾಗುತ್ತಿದ್ದವು. ಈ ಅವಧಿಯಲ್ಲಿ ಬೀದರ್, ಪೂರ್ಣಿಯಾ, ಲಕ್ನೋ ಹಾಗೂ ಮುರ್ಶಿದಾ ಬಾದಗಳು ಬಿದರಿ ಕಲೆ ತಯಾರಿಕೆಯ ಕೇಂದ್ರಬಿಂದುಗಳಾದವು. ಕಲ್ಕತ್ತಾ, ಫೈಜಾಬಾದ, ಢಾಕಾ, ಇಂಗ್ಲೆಂಡ ಇತ್ಯಾದಿ ನಿರ್ಯಾತದ ಕೇಂದ್ರ ಸ್ಥಾನಗಳಾದವು. ಈ ಕಾಲದ ಬಿದರಿ ವಸ್ತುಗಳ ಮೇಲೆ ನಕ್ಷೆ ಹೆಚ್ಚು ಸ್ಪಷ್ಟವಾಗಿವೆ.

೧೮೫೧ ರಲ್ಲಿ ಮೊದಲನೆಯ ಅಂತರಾಷ್ಟ್ರಿಯ ಪ್ರದರ್ಶನ ಬ್ರಿಟನ್‌ನಲ್ಲಿ ನಡೆಯಿತು. ಅನಂತರ ಭಾರತದ ಪ್ರಮುಖ ನಗರಗಳಲ್ಲಿ ನಿಯಮಿತ ರೂಪದಲ್ಲಿ ಇದರ ಪ್ರದರ್ಶನ ನಡೆಯಲಾರಂಭಿಸಿತು. ೧೮೫೧ ರಲ್ಲಿ ನಡೆದ ಪ್ರದರ್ಶನದಲ್ಲಿ ೧೭ನೆಯ ಶತಮಾನದ ಬೀದರ -ಪೂರ್ಣಿಯಾ, ಮುರ್ಷಿದಾಬಾದ್ ಮತ್ತು ಲಕ್ನೋದಲ್ಲಿ ನಿರ್ಮಾಣಗೊಂಡ ಉತ್ಕೃಷ್ಟ ಪ್ರಕಾರಗಳನ್ನು ಪ್ರದರ್ಶನಮಾಡಲಾಯಿತು. ಈ ಪ್ರದರ್ಶನದಿಂದ ಇದರ ಲೋಕ ಪ್ರಿಯತೆ ಹೆಚ್ಚಾಯಿತು.

ಬೀದರನ್ನು ಹೊರತು ಪಡಿಸಿದರೆ ಬಿಹಾರದ ಪೂರ್ಣಿಯಾ ವಿಶ್ವದಲ್ಲಿಯೇ ಬಿದರಿಕಲೆ ತಯಾರಿಕೆಯ ಎರಡನೆಯ ಮುಖ್ಯಸ್ಥಾನವಾಗಿತ್ತು. ಫ್ರಾನ್ಸಿಸ್ ಬುಕನನ್ನನು ೧೮೮೦ ರಿಂದ ೧೮೧೦ವರೆಗೆ ಪೂರ್ಣಿಯಾದಲ್ಲಿದ್ದನು. ಆ ಸಮಯದಲ್ಲಿ ಬಿದರಿ ಕಲೆ ಬಗ್ಗೆ ಮಾಡಿದ ಟಿಪ್ಪಣಿ ಹೀಗಿದೆ. ಪೂರ್ಣಿಯಾದಲ್ಲಿ ೭೧ ಬಿದರಿ ಕಲೆಯ ಕರಕುಶಲ ಕರ್ಮಿಗಳಿದ್ದು ಬಿದರಿ ಕಲಾಕೃತಿಗಳನ್ನು ತಯಾರಿಸಬಲ್ಲವರಾಗಿದ್ದರು. ಪೂರ್ಣಿಯಾದಲ್ಲಿ ಸಿದ್ಧವಾದ ಬಿದರಿ ಕಲಾ ಕೃತಿಗಳು ಮುರ್ಸಿದಾಬಾದ್, ದಿನಜಪುರ, ರಂಗಪೂರ, ಢಾಕಾ ಇತ್ಯಾದಿಗಳತ್ತ ನಿರ್ಯಾತ ಗೊಳ್ಳುತಿದ್ದವು. ಇಲ್ಲಿಯ ಕುಶಲ ಕರ್ಮಿಗಳು ಬಿದರಿ ಕಲಾಕೃತಿಗಳ ತಯಾರಿಕೆಯಲ್ಲಿರುವ ಕೆಲವು ಹಂತಗಳಿಗೆ ತಕ್ಕಂತೆ ಕೆಲಸ ಮಾಡುತ್ತಿದ್ದರು.

ಉದಾ : ಲೋಹಗಳನ್ನು ಮಿಶ್ರಣಮಾಡಲು ಕುದಿಸುವವರು, ಕಲಾಕೃತಿಗಳನ್ನು ನಯ ಗೊಳಿಸುವವರು, ವಿನ್ಯಾಸಗಳನ್ನು ಕೆತ್ತುವವರು, ವಿನ್ಯಾಸಗೊಂಡ ಚಿತ್ತಾರಗಳಲ್ಲಿ ಬೆಳ್ಳಿ ಹುದು ಗಿಸುವವರು.. ಇತ್ಯಾದಿ ವಿಭಿನ್ನ ಕೆಲಸಗಳು. ಹೀಗೆ ಒಂದು ಬಿದರಿ ಕಲಾಕೃತಿ ಪೂರ್ಣಗೊಳ್ಳ ಬೇಕಾದರೆ ಹಲವಾರು ಕುಶಲಕರ್ಮಿಗಳಿಂದ ಹಸ್ತಾಂತರಗೊಂಡು ಅಂತಿಮರೂಪತಾಳಿ ಪರಿ ಪೂರ್ಣಗೊಳ್ಳುತ್ತಿತ್ತು. ಕಲಾವಿನ್ಯಾಸಗಳನ್ನು ಕೆತ್ತುವವರಿಗೆ ಹಾಗೂ ನಯಗೊಳಿಸುವವರಿಗೆ ಹೆಚ್ಚಿನ ಸಂಭಾವನೆ ಲಭ್ಯವಾಗುತ್ತಿತ್ತೆಂದು ಬುಕನನ್ನನು ದಾಖಲಿಸಿದ್ದಾನೆ. ಬುಕನನ್ನ ಪ್ರಕಾರ ನಕ್ಷೆ ಕೆತ್ತುವ ಮತ್ತು ಪಾಲಿಶ್ ಮಾಡುವ ಕಾರ್ಮಿಕರ ಆದಾಯ ಎಲ್ಲರಿಗಿಂತ ಹೆಚ್ಚಿತ್ತು.

ಸೂಯಿಟೋನಿಯಸ್ ಹಿಟ್ಲೆ ೧೭೭೪ ರಲ್ಲಿ ಪೂರ್ಣಿಯಾದ ಮುಖ್ಯ ಅಧಿಕಾರಿಯಾಗಿದ್ದರು. ಒಂದು ಚಿತ್ರದಲ್ಲಿ ಸೂಯಿಟೊನಿಯಸರವರ ಕೈಯಲ್ಲಿ ಹುಕ್ಕಾದ ನಳಿಕೆ ಇದೆ. ಪಕ್ಕದಲ್ಲಿ ಒಬ್ಬ ಸೇವಕ ಹುಕ್ಕಾ ಹಿಡಿದು ನಿಂತಿದ್ದಾನೆ. ಈ ಚಿತ್ರ ೧೭೬೫ ರಲ್ಲಿ ನಿರ್ಮಾಣಗೊಂಡಿದೆ. ಹುಕ್ಕಾದಲ್ಲಿ ಬೆಳ್ಳಿಯ ಕೆಲಸವಿದೆ. ಅದನ್ನು ಪೂರ್ಣಿಯಾದ ಕರಕುಶಲಕಲೆಯೆಂದು ಗುರುತಿಸಲಾಗಿದೆ.

ಕ್ರಿ.ಶ. ೧೮೫೧ರಲ್ಲಿ ನಡೆದ ಅಂತರರಾಷ್ಟ್ರೀಯ ಪ್ರದರ್ಶನದಿಂದ ಇದರ ಪರಿಚಯ ಹೊರರಾಷ್ಟ್ರಗಳಲ್ಲಾಯಿತು. ನಂತರ ಭಾರತದಲ್ಲಿ ನಿಯಮಿತ ರೂಪದಿಂದ ಪ್ರಮುಖ ನಗರಗಳಲ್ಲಿ ಪ್ರದರ್ಶನ ನಡೆಯುತ್ತಿತ್ತು. ಈ ಪ್ರದರ್ಶನಗಳಿಂದಾಗಿ ಪೂರ್ಣಿಯಾದಲ್ಲಿ ಇದರ ಖ್ಯಾತಿ ಹೆಚ್ಚಿತು. ಈ ಶತಮಾನದ ಪ್ರಾರಂಭದಿಂದ ಇಲ್ಲಿ ದೊಡ್ಡ ಪ್ರಮಾಣದಲ್ಲಿ ಈ ಕಲೆಯ ಕೆಲಸ ನಡೆಯುತ್ತಿತ್ತು.

೧೮೭೭ ರಲ್ಲಿ ಎರಡನೆಯ ಪ್ರದರ್ಶನದ ನಂತರ ಬಿದರಿಕಲೆಯ ಉತ್ತಮ ಕಲಾಕೃತಿಗಳು ಸಿದ್ಧವಾಗ ತೊಡಗಿದವು. ಪೂರ್ಣಿಯಾದ ಕಲೆಯು ಎರಡು ಭಾಗಗಳಲ್ಲಿ ವಿಭಜನೆಗೊಂಡಿದೆ. ಒಂದು ಪೂರ್ಣಿಯಾದಲ್ಲಿ ಇನ್ನೊಂದು ಬೇಲೂರಿನಲ್ಲಿ. ಬೇಲೂರು ಪೂರ್ಣಿಯಾದಿಂದ ಕೆಲವು ಕಿ.ಮೀ. ದೂರದಲ್ಲಿದೆ. ಇಲ್ಲಿನ ಕಾರ್ಮಿಕರು ಹಿಂದು ಧರ್ಮದವರಾಗಿದ್ದರೂ ಪೂರ್ಣಿಯಾದಲ್ಲಿನ ಕಾರ್ಮಿಕರು ಹಿಂದು ಮತ್ತು ಮುಸ್ಲಿಮ್ ಧರ್ಮಗಳಿಗೆ ಸೇರಿದವರಾಗಿದ್ದರು. ಒಂದು ಪ್ರಕಾರದ ಕಲೆಗೆ 'ಗಾರಖಿ' ಎಂದೂ ಇನ್ನೊಂದು ಪ್ರಕಾರಕ್ಕೆ 'ಕರ್ಣ' ಬಿದರಿಕಲೆ ಎಂದು ಹೆಸರು ಬಂದಿದೆ. ಬಹಮನಿ ರಾಜ್ಯದ ಪತನದ ನಂತರ ಹೈದರಾಬಾದ ನಿಜಾಮನ ಆಡಳಿತದಲ್ಲಿ ಈ ಕಲೆಯ ಬೆಳವಣಿಗೆಯಾಗಿ 'ಮದರಸಾ ಸನತ್ ಹಿರಫತ್' ಎಂಬ ಹೆಸರಿನ ಶಾಲೆಯೊಂದು ಬೀದರಿನಲ್ಲಿ ಆರಂಭವಾಯಿತು. ಅದರಲ್ಲಿ ಬಿದರಿ ಕಲೆಯೊಂದಿಗೆ ವಿವಿಧಬಗೆಯ ಕರಕುಶಲ ಕಲೆಗಳಿಗಾಗಿ ತರಬೇತಿ ನೀಡಲಾಗುತ್ತಿತ್ತು. ಬಿದರಿ ಕಲಾನಿಪುಣರಿಗೆ ''ಮಾಸ್ಟರ್'' ಎಂದು ಕರೆಯಲಾಗುತ್ತಿತ್ತು. ಆ ಶಾಲೆಯಲ್ಲಿ ಗುಲಾಮ್ ಸತ್ತಾರ ಮಾಸ್ಟರನಾಗಿದ್ದನು. ಆ ಶಾಲೆಯಲ್ಲಿ ಬೀದರಿನ 'ಕುಲಸುಮ್' (ಕುಸುಮ) ಗಲ್ಲಿಯವರೇ ಹೆಚ್ಚಾಗಿ ಬಿದರಿ ಕಲೆಯ ತರಬೇತಿ ಪಡೆದರು.

ಕಳೆದ ಶತಮಾನದಲ್ಲಿ ರಾಮಣ್ಣ ಎಂಬ ಕರಕುಶಲ ಶಿಕ್ಷಕ ಬಿದರಿಕಲೆಯನ್ನು ಪುನರುಜ್ಜೀವನಗೊಳಿಸಿದವರಲ್ಲಿ ಒಬ್ಬ. ಆತನ ಸಹಾಸದಿಂದ ಹೂದಾನಿ, ಕುಂಕುಮ, ಡಬ್ಬಿ, ಪಾನ್ ಬೀಡ ಡಬ್ಬಿ, ಪದ್ಮಪಾಣಿ, ಅಜಂತಾ, ಎಲ್ಲೋರಾ ಮಾದರಿಯ ಮೂರ್ತಿಗಳು ಮುಂತಾದ ಹೊಸ ಆಕೃತಿಗಳು ಬಿದರಿ ಕಲೆಯಲ್ಲಿ ರೂಪತಾಳಿದವು. ಅದುವರೆಗೆ ಪರ್ಶಿಯನ್ ಮಾದರಿಯ ಉಮರ ಖಯ್ಯಾಮನ ರುಬಾಯಿತ್ ಪ್ರಸಂಗಗಳ ರೇಖಾಚಿತ್ರಗಳು, ಹುಕ್ಕಾ, ಜಗ್ಗು, ತಂಬಾಕು ಇಡುವ ಡಬ್ಬಿಗಳು ಹಾಗೂ ಅವುಗಳ ಮೇಲೆ ಹೂ, ಎಲೆ ಹಾಗೂ

ಬಳ್ಳಿಗಳ ಚಿತ್ತಾರಗಳು ಮತ್ತು ಕುರಾನಿನ ಶ್ಲೋಕಗಳುಳ್ಳ ಕಲಾಕೃತಿಗಳು ಮನೋಹರ ವಾಗಿದ್ದವು. ಆತನು ತನ್ನ ವೃದ್ಧಾವಸ್ಥೆಯಲ್ಲಿ ತನ್ನ ಕೆಲವು ನಂಬಿಗಸ್ಥ ಶಿಷ್ಯರಿಗೆ ಈ ಕಲೆಯ ಮಾಹಿತಿ ನೀಡಿದನೆಂದು ತಿಳಿಯುತ್ತದೆ.

ರಾಮಣ್ಣನವರ ನಂತರ ಬಿದ್ರಿಕಲೆ ಮುಂದುವರೆಸಿಕೊಂಡು ಬಂದ ಕಲಾವಿದ ''ಸಜ್ಜಾದ ಬಾಷಾ'' ಹಾಗೂ ಅವರ ನಚ್ಚಿನ ಶಿಷ್ಯ ''ಬಸಣ್ಣ'' (ಬಸಪ್ಪ) ಇವರು ತಮ್ಮ ಚತುರತೆಯಿಂದ ತಮ್ಮ ಬಿದರಿ ಕಲೆಯನ್ನು ಬೆಳೆಸಿದರು.

ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಮುಸಿದಾಬಾದ್ ಹಾಗೂ ಲಕ್ನೋ ದಲ್ಲಿ ಬಿದರಿ ಕಲೆ ಆರಂಭವಾಯಿತು. ೧೮೮೦ ರಲ್ಲಿ ಔದ್ಯೋಗಿಕರಣದ ಮುರ್ಶಿದಾಬಾದಿನ ವರದಿಯಲ್ಲಿ ಮೀರ್ ಇಲಾಹಿಬುಷ್ ಎಂಬ ಕುಶಲಕರ್ಮಿಯು ಮುರ್ಶಿದಾಬಾದ ನಗರದಲ್ಲಿ ಬಿದರಿ ಕಲೆಯ ಪರಿಚಯವನ್ನು ಮಾಡಿದನು. ತನ್ನ ಹಲವು ಶಿಷ್ಯರೊಂದಿಗೆ ಬಿದರಿ ಕಲೆಯಲ್ಲಿ ಹಲವಾರು ಹೊಸ ವಿನ್ಯಾಸಗಳನ್ನು ಮಾಡಿ ಈ ಕಲೆಯಲ್ಲಿ ಸುಧಾರಣೆ ತಂದನು ಎಂದು ಹೇಳಲಾಗಿದೆ.

ವಿಶ್ವದಲ್ಲಿ ಬೀದರ್ ಬಿದರಿ ಕಲೆಯ ಕೇಂದ್ರ ಬಿಂದುವಾಗಿದ್ದರೂ, ಹೈದರಾಬಾದ್ ಗೋಲ್ಕೊಂಡಾ, ಬಿಜಾಪುರ, ಅಹಮದ್‌ನಗರ, ಅಜಮೀರ, ಮುಂಬಯಿ, ಲಕ್ನೋ, ಮುರ್ಶಿದಾಬಾದ್, ಪೂರ್ಣಿಯಾ, ಸುರತ್, ಝೂವರ್, ಜೈಪೂರ್, ದೆಹಲಿ, ಫೈಜಾಬಾದ್, ಬನಾರಸ್, ಕಲ್ಕತ್ತಾ, ಗಯಾ, ಈ ಸ್ಥಳಗಳಲ್ಲಿಯೂ ಅಧ್ಯಯನದಿಂದ ಗೊತ್ತಾಗುತ್ತದೆ. ೧೮೮೧ರಲ್ಲಿ ಸಿಮ್ಲಾ, ೧೮೮೩-೮೪ರಲ್ಲಿ ಕಲ್ಕತ್ತಾ ೧೮೮೩ರಲ್ಲಿ ಜೈಪೂರ್, ೧೮೮೬ರಲ್ಲಿ ಇಂಗ್ಲೆಂಡಗಳಲ್ಲಿ ಬಿದರಿಕಲೆ ಪ್ರದರ್ಶನಗೊಂಡು ವಿಶ್ವವ್ಯಾಪಕವಾಯಿತು. ಇದರಿಂದ ಬಿದರಿ ಕಲಾಕೃತಿಗಳ ಬೇಡಿಕೆ ಹೆಚ್ಚಾಗಿ ಕುಶಲಕರ್ಮಿಗಳಿಗೂ ಮಾನ್ಯತೆ ಪ್ರಾಪ್ತವಾಗ ಲಾರಂಭಿಸಿತು.

ಪ್ರಾರಂಭದಿಂದಲೂ ಬೀದರ ಇದರ ಮುಖ್ಯ ಕೇಂದ್ರವಾಗಿತ್ತು. ಇಂದಿಗೂ ಇಲ್ಲಿ ೩೦೦ ಕ್ಕೂ ಹೆಚ್ಚಿನ ಕುಶಲ ಕರ್ಮಿಗಳು ಬಿದರಿ ವಸ್ತುಗಳನ್ನು ತಯಾರಿಸುವಲ್ಲಿ ತೊಡಗಿದ್ದಾರೆ. ಇವರಲ್ಲಿ ಅನೇಕರು ಈ ಕಲೆಯನ್ನು ತಮ್ಮ ಪೂರ್ವಜರಿಂದ ಪಡೆದಿದ್ದಾರೆ. ಇಂದು ಈ ಕಲೆಯ ನಿರ್ಮಾಣ ಪಾರಂಪರಿಕ ರೀತಿಯಲ್ಲಿಯೇ ನಡೆಯುತ್ತಿದೆ. ೧೯೫೬ರಲ್ಲಿ ಭಾಷಾವಾರು ರಾಜ್ಯಗಳ ಪುನರ್‌ವಿಂಗಡನೆ ಆದ ನಂತರ ಬೀದರ ಕರ್ನಾಟಕ ರಾಜ್ಯಕ್ಕೆ ಸೇರಿತು. ಹೈದರಾಬಾದ ಆಂಧ್ರ ಪ್ರದೇಶದ ರಾಜಧಾನಿಯಾಯಿತು. ಬೀದರ ಚಿಕ್ಕನಗರವಾಗಿದ್ದರಿಂದ ಮತ್ತು ಸ್ಥಳೀಯ ವ್ಯಾಪಾರ ಕಡಿಮೆಯಾಗಿದ್ದರಿಂದ ಕುಶಲಕರ್ಮಿಗಳು ಹೈದರಾಬಾದಿಗೆ ವಲಸೆ ಹೋದರು ಇದರ ಪರಿಣಾಮವಾಗಿ ಬೀದರಿನಲ್ಲಿ ಕೆಲವೇ ಕಾರ್ಮಿಕರು ಉಳಿದು ಕೊಂಡರು.

೧೯೭೫ ರಲ್ಲಿ ಬೀದರನಗರದಲ್ಲಿ ೨೫ ಸಂಘಟನೆಗಳಿದ್ದವು ಇದರಲ್ಲಿ ೧೧೦ ಜನ ಕುಶಲ ಕರ್ಮಿಗಳು ಕೆಲಸ ಮಾಡುತ್ತಿದ್ದರು.

೧೭೫ ನಮೂನೆಯ ಬಿದರಿ ಕಲೆಯನ್ನು ಇಲ್ಲಿ ಕಾಣಬಹುದಾಗಿತ್ತು. ಕ್ರಿ.ಶ. ೧೯೫೦ ರಲ್ಲಿ ಸರ್ಕಾರ ಇಲ್ಲಿ ಒಂದು ತರಬೇತಿ ಕೇಂದ್ರವನ್ನು ಆರಂಭಿಸಿತು. ಇದರಲ್ಲಿ ೨ ವರ್ಷಗಳ ಕಾಲ ಈ ಕಲೆಯಲ್ಲಿ ಶಿಕ್ಷಣ ನೀಡುವುದರ ಜೊತೆಗೆ ಇದಕ್ಕೆ ಬೇಕಾಗುವ ಅವಶ್ಯಕ ವಸ್ತುಗಳ ಸರಬರಾಜು ಕೂಡ ಈ ಕೇಂದ್ರವೇ ಮಾಡುತ್ತದೆ.

ಶತಮಾನಗಳಿಂದ ನಡೆದು ಬಂದ ಈ ಬಿದರಿ ಕಲೆಯ ಖ್ಯಾತಿಯನ್ನು ಉಳಿಸಿಕೊಳ್ಳುವ ಸಲುವಾಗಿ ೧೯೭೦ ರಲ್ಲಿ ಮೈಸೂರು ರಾಜ್ಯಸರಕಾರ ಬೀದರದಲ್ಲಿಯೂ 'ಆರ್ಟಿಸಾನ್ ಟ್ರೈನಿಂಗ್ ಇನ್ಸ್‌ಟ್ಯೂಟನ್ನು ಪ್ರಾರಂಭಿಸಿತು. ಇಲ್ಲಿಯೂ ಇತರ ಕರಕುಶಲ ಕಲೆಗಳಿಗಿಂತಲೂ ಬಿದರಿಕಲೆಗೆ ಬಹಳ ಪ್ರಾಮುಖ್ಯ ನೀಡಿದರು. ಇದೊಂದು ಅತ್ಯಂತ ನಾಜೂಕಾದ, ಬುದ್ಧಿ ಹಾಗೂ ದೈಹಿಕ ಶ್ರಮವುಳ್ಳ ಕಸಬುದಾರರಿಂದ ಒಂದು ಕಲಾಕೃತಿ ತಯಾರಿಸಲು ಕನಿಷ್ಟ ಒಂದುವಾರ ಕಾಲ ಬೇಕಾಗುವುದರಿಂದ ಕಲೆಗೆ ತಕ್ಕಬೆಲೆ ದುರ್ಲಭವಾಗಿರುವುದರಿಂದ ಹಲವರು ಈ ವೃತ್ತಿಯನ್ನು ಬಿಡಲು ಯೋಚಿಸಿದರು. ಕರ್ನಾಟಕ ಸರಕಾರದ ಕರಕುಶಲ ಕಲೆ ವಿಭಾಗವು ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟು ಬಿದರಿ ಕಲೆಗಳನ್ನು ಖರೀದಿಸಿ ಭಾರತದ ಇತರ ರಾಜ್ಯಗಳಿಗೆ ಹಾಗೂ ವಿಶ್ವ ಮಾರುಕಟ್ಟೆಗೆ ರಫ್ತು ಮಾಡಲಾರಂಭಿಸಿತು.

ಶತಮಾನಗಳಿಂದ ನಡೆದು ಬಂದ ಈ ಬಿದರಿ ಕಲೆಯ ಖ್ಯಾತಿ ೧೯೮೦ರ ದಶಕದ ಆರಂಭದಲ್ಲಿ ಕುಗ್ಗುತ್ತಾ ಹೋಯಿತು. ಈ ಕಲೆಯ ಕಾರ್ಮಿಕರು ದಿನನಿತ್ಯದ ಜೀವನ ಸಾಗಿಸು ವುದು ಕಷ್ಟದ ಕೆಲಸವಾಯಿ ತು. ಈ ಬಿದರಿ ಕಲೆಯ ಬೆಲೆ ಹೆಚ್ಚಿಗೆ ಇರುವುದರಿಂದ ಈ ಬಿದರಿ ಕಲೆಯ ವ್ಯಾಪಾರ ಕುಗ್ಗುತ್ತಾ ಹೋಯಿತು. ಬೀದರನಂತಹ ಚಿಕ್ಕ ನಗರಗಳಿಗೆ ಇದರದೇ ಆದ ವ್ಯಾಪಾರ ಮಳಿಗೆಗಳು ಇರಲಿಲ್ಲ. ಈ ಬಿದರಿ ಕಲೆಯು ಹೈದರಾಬಾದಿನಂತಹ ದೊಡ್ಡ ಶಹರದಲ್ಲಿ ಒಳ್ಳೆಯ ಬೆಲೆಗೆ ಮಾರುತಿದ್ದವು. ಕಾರ್ಮಿಕರಿಗಿಂತ ಹೆಚ್ಚಿನ ಲಾಭ ವ್ಯಾಪಾರಿಗಳಿಗೆ ದೊರೆಯುತ್ತಿತ್ತು. ಇದರ ಪರಿಣಾಮವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಬೇರೆ ಬೇರೆ ಉದ್ಯೋಗವನ್ನು ಪ್ರಾರಂಭಿಸಿದರು. ಅನಮೋಲ ಬಿದರಿ, ವೇರ್ ಕೋ ಆಫ್‌ರೇಟಿವ್ಹ ಸೋಸಾಯಿಟಿ ಲಿಮಿಟೆಡ್ ಮತ್ತು ಪ್ರಾಯಮರಿ ಕೋ-ಆಫ್‌ರೇಟಿವ್ಹ ಲ್ಯಾಂಡ್ ಡೆವ್ಹಲೆಪ್‌ಮೆಂಟ್ ಬ್ಯಾಂಕ್, ಬೀದರ್ ಎಂಬ ನಿಗಮಗಳಿಂದ ಕಾರ್ಮಿಕರಿಗೆ ಬ್ಯಾಂಕಿನಿಂದ ಕಚ್ಚಾ ಸಾಮಗ್ರಿ ಕೊಡಲಾಗುತ್ತಿದೆ. ತಯಾರಾದ ವಸ್ತುಗಳನ್ನು ನಿಗಮಕ್ಕೆ ಕೊಡಬೇಕಾಗುತ್ತದೆ. ಪ್ರತಿಯೊಬ್ಬ ಕಾರ್ಮಿಕನಿಗೆ ಇದರಿಂದ ಬಂದ ಹಣದಲ್ಲಿ ನಿಗಮವು ಕಲಾಕಾರರಿಗೆ ಒಂದು ಪಾಲನ್ನು ಕೊಡುತ್ತದೆ. ಅಲ್ಲದೆ ಪ್ರತಿಯೊಬ್ಬ ಕಾರ್ಮಿಕನಿಗೆ ೧೦೦೦ ದಿಂದ ೨೦೦೦ ರೂಪಾಯಿಗಳವರೆಗೆ ಆದಾಯ ಸಿಗುತ್ತದೆ. ಸ್ಥಳಿಯ ಕಾರ್ಮಿಕರಾದ ಸೈಯದ

ಅಹ್ಮದಶಹಾ ಖಾದ್ರಿ ಕಲಾಕಾರರು ನಿಗಮದಿಂದ ದೊರೆಯುವ ಮೊತ್ತ ಬಹಳ ಕಡಿಮೆ. ಇದರಿಂದ ಅವನ ಉಪಜೀವನ ಸಾಗಿಸುವುದು ಸಾಧ್ಯವಾಗುವುದಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ.

೧೯೮೮ ರಿಂದ ಈಚೆಗೆ ಬಿದರಿ ಕಲೆಯಲ್ಲಿ ಬದಲಾವಣೆಗಳನ್ನು ಕಾಣಬಹುದು. ಪ್ರಮುಖ ವಾಗಿ ಈ ವಸ್ತುಗಳ ಆಕಾರ ಮತ್ತು ನಕ್ಷೆಯಲ್ಲಿ ಪ್ರಸ್ತುತ ಜನರ ಬೇಡಿಕೆಯನ್ನು ಪೂರೈಸ ಲೆಂಬಂತೆ, ದಿನನಿತ್ಯದ ಬಳಕೆಯ ಸಾಮಾನುಗಳ ರೂಪದಲ್ಲಿ ನೋಡಬಹುದು. ಇದರಲ್ಲಿ ಅನೇಕ ಪ್ರಕಾರದ ಉದಾಹರಣೆ ನೀಡಬಹುದು. ಬಳೆಗಳು, ಸೀಗರೇಟ ಪೆಟ್ಟಿಗೆ, ಬೂದಿತಟ್ಟೆ (ಆ್ಯಸ್ಟ್ರೀ) ಉಂಗುರಗಳು ಮುಂತಾದವು ಪ್ರಮುಖವಾಗಿವೆ.

ಬಿದರಿ ಕಲೆಯ ಬೇಡಿಕೆ ಹೊರ ರಾಷ್ಟ್ರಗಳಾದ ಜಪಾನ, ಇಂಗ್ಲೆಂಡ, ಅಮೇರಿಕಾ, ಇಟಲಿ ಮತ್ತು ಕೆನಡಾಗಳಲ್ಲಿ ಅಪಾರವಾಗಿದ್ದು, ಪ್ರತಿವರ್ಷ ಕನಿಷ್ಟ ಆರರಿಂದ ಎಂಟು ಲಕ್ಷ ರೂಪಾಯಿ ಬೆಲೆಬಾಳುವ ವಸ್ತುಗಳು ಮಾರಾಟವಾಗುತ್ತವೆ. ಹಳೆಯ ಮಾದರಿಯ ಬಿದರಿ ಕಲೆಯ ವಸ್ತುಗಳ ಬೇಡಿಕೆ ಕಡಿಮೆಯಾಗಿದ್ದು ಅಂಥಹ ವಸ್ತುಗಳ ತಯಾರಿಕೆಯು ಕಡಿಮೆ ಯಾಗುತ್ತಲಿದೆ. ಆದರೆ ಆಸಕ್ತಿವುಳ್ಳವರಿಗೆ ಅಂಥ ವಸ್ತುಗಳೇ ಬೇಕು ಎಂದಾಗ ಮಾತ್ರ ಇಂದಿಗೂ ಅಂತಹ ವಸ್ತುಗಳನ್ನು ತಯಾರಿಸಿ ಕೊಡುತ್ತಾರೆ. ಮುಸ್ಲಿಂ, ವಾಸ್ತುಶಿಲ್ಪದ ದಟ್ಟ ವಾದ ಪ್ರಭಾವ ಈ ಕುಶಲ ಕಲೆಯಲ್ಲಿ ಕಂಡುಬಂದರೂ ಅಲ್ಲಿಯ 'ಕುಶಲಕರ್ಮಿಗಳು' ಚಾಣಾಕ್ಷರಾದ್ದರಿಂದ ಪರಿಸರದ ಹೊರಗಿನ ಜನರ ಅಭಿರುಚಿಗೆ ಅನುಗುಣವಾಗಿ ಇತರೇ ಧರ್ಮದವರ ಸಾಂಪ್ರದಾಯಿಕ ವಿನ್ಯಾಸಗಳನ್ನು ಬಿಡಿಸಿ ಜನಮನ್ನಣೆಗೆ ಪಾತ್ರಗಾಗಿದ್ದಾರೆ. ಅಜಂತಾದ ವರ್ಣಚಿತ್ರಗಳ ವಿನ್ಯಾಸಗಳನ್ನು ಬಳಸುತ್ತಿದ್ದಾರೆ. ಪದ್ಮಪಾಣಿ, ಬುದ್ಧ, ವಾಘ ರಾಕೃತಿಗಳು ಬಹಳ ಜನಪ್ರಿಯವಾಗಿವೆ. ಕಲ್ಯಾಣ ಚಾಳುಕ್ಯರ ಕಾಲದಲ್ಲಿ ನಿರ್ಮಾಣಗೊಂಡ ವಾಸ್ತುಶಿಲ್ಪದ ಶೈಲಿಯ ಕೆಲ ಮಾದರಿಗಳನ್ನು ಬಿದರಿ ವಸ್ತುಗಳಲ್ಲಿ ನೋಡಬಹುದಾಗಿದೆ. ಶಿಲಾ ಬಾಲಕಿಯರು ಶಿವ-ಶಿವೆಯರ ಪ್ರತಿರೂಪುಗಳು ಕಾಣಸಿಗುತ್ತವೆ. ಕುರಾನಿನ ಶ್ಲೋಕಗಳ ಕೆತ್ತನೆಗಳು ಮನೋಹರವಾಗಿವೆ.

ಬಿದರಿ ವಸ್ತುಗಳಲ್ಲಿ ತಂಬಿಗೆ, ಪೀಕದಾನಿ, ಬೋಗಣಿ, ಹೂದಾನಿ, ಕುಂಕುಮದ ಭರಣಿ, ಸುಗಂಧ ದ್ರವ್ಯದ ಡಬ್ಬಿ, ಲೋಟ, ತಟ್ಟೆ ಹಾಗೂ ಫೋಟೋ ಫ್ರೇಮ್‌ಗಳು, ಮಗುವಿನಾ ಕೃತಿಯಲ್ಲಿರುವ ಬೆಡ್‌ಲೈಟಗಳಿಗೆ ಹೆಚ್ಚಿನ ಬೇಡಿಕೆಯಿದೆ. ಬಿದರಿ ಪಾತ್ರೆಗಳಲ್ಲಿ ತುಂಬಿಟ್ಟ ನೀರು ಕುಡಿದರೆ ಆರೋಗ್ಯದೃಷ್ಟಿಯಿಂದ ಒಳ್ಳೆಯದು ಎಂದು ಜನ ನಂಬಿ ಪಾತ್ರೆಗಳನ್ನು ಖರೀದಿಸುತ್ತಿದ್ದರು. ಎದೆಗುಂಡಿ, ಸಿಗರೇಟಿನ ಡಬ್ಬಿ, ಕೈಗುಂಡಿ, ಕೊರಳಹಾರ, ಪದಕ ಮುಂತಾದ ವಿನ್ಯಾಸಗಳ ವಸ್ತುಗಳನ್ನು, ಹೆಚ್ಚು ನಾಜೂಕಾಗಿ ತಯಾರಿಸುತ್ತಿದ್ದಾರೆ. ಆಕರ್ಷಕ ವಾಗಿ ಕಾಣುವ ಇಂಥ ವಸ್ತುಗಳ ಮೇಲೆ ಸೂಕ್ಷ್ಮ ಕುಸರಿ ಮಾಡಿರುತ್ತಾರೆ. ಬಿದರಿನ ಆನೆಗಳು,

ಬೆಡ್‌ಲೈಟ್‌ಗಳು ಹಾಗೂ ಹಲವು ಬಗೆಯ ಬೂದಿಯ ತಬಕಗಳಿಗೆ ಇಂದು ಹೆಚ್ಚಿನ ಬೇಡಿಕೆ ಇರುವುದಾಗಿ ಹೇಳುತ್ತಾರೆ.

ಇಂದಿನ ಬಿದರಿ ಕಾರ್ಮಿಕರು ಸರಕಾರದಿಂದ ಆಯೋಜಿತ ಸ್ಪರ್ದೆಯಲ್ಲಿ ಮತ್ತು ಪ್ರದರ್ಶನಗಳಲ್ಲಿ ಭಾಗವಹಿಸಿ ಅನೇಕ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿಗಳನ್ನು ಪಡೆದಿದ್ದಾರೆ.

**ಬಿದರಿ ಕಲೆ ತಯಾರಿಕೆಗೆ ಬೇಕಾಗುವ ಕಚ್ಚಾವಸ್ತುಗಳು**

ಬಿದರಿ ಕಲೆ ತಯಾರಿಕೆಗೆ ಮುಖ್ಯವಾಗಿ ಒಟ್ಟು ೧೫ ಕಚ್ಚಾವಸ್ತುಗಳು ಬೇಕಾಗುತ್ತವೆ.

೧. ಸತುವು ೨. ತಾಮ್ರ ೩. ಬೆಳ್ಳಿ ೪. ಬಂಗಾರ. ೫. ಸೀಸ ೬. ತವರ ೭. ರಾಳ ೮. ತಾಮ್ರದ ಸಲ್ಫೇಟ್ ೯. ಅಮೋನಿಯಮ್ ಕ್ಲೋರೈಡ್ (ನವಸಾಗರ) ೧೦. ಬಿದರಿಕೋಟೆಯ ವಿಶಿಷ್ಟ ಬಗೆಯ ಮಣ್ಣು ೧೧. ಮೇಣ ೧೨. ಕಡಲೆಕಾಯಿ ಎಣ್ಣೆ ೧೩. ಹರಳೆಣ್ಣೆ ೧೪. ಔಡಲ ಎಣ್ಣೆ ೧೫. ಸಾಗಜೀರಾ ಇತ್ಯಾದಿ ವಸ್ತುಗಳು ಬಿದರಿ ವಸ್ತುಗಳ ರಚನೆಯಲ್ಲಿ ಮುಖ್ಯ ವಾದ ಪಾತ್ರವನ್ನು ವಹಿಸುತ್ತವೆ.

**ಬಿದರಿ ಕಲೆ ತಯಾರಿಕೆಗೆ ಬೇಕಾಗುವ ಪರಿಕರಗಳು**

೧. ಕತ್ತರಿ ೨. ಕಟಿಂಗ್ ಪ್ಲೇಯರ್ ೩. ಎರಕದ ಪೆಟ್ಟಿಗೆಗಳು ೪. ಕೈಸಹಾಯದಿಂದ ರಂಧ್ರ ಕೊರೆಯುವ ಯಂತ್ರ ೫. ಬರ್ಮಾ ೬. ಅರ, ೭. ತಿದಿ ೮. ಸರಳು ೯. ಬಡಗಿ ಹತಾರಗಳು ೧೦. ಲೋಹಕರಗಿಸುವ ಮೂಸೆ ೧೨. ಮಂಗನ ೧೩. ಸ್ಕ್ರೇಪರಗಳು ೧೪. ಭಾತ್ರಾ ೧೫. ಪ್ಯಾಲಾ ೧೬. ಚಾಕಿ ೭. ಪರಕಾರ ೧೮. ಹತೋಡಿ ೧೯. ಕಲಮ ಪಟ್ಟಿ ೨೦. ತಾರಪಟ್ಟಿ ೨೧. ರಂದಾ ೨೨. ಸಾನ ಇತ್ಯಾದಿಗಳು

**ಬಿದರಿ ಕರ ಕುಶಲತೆಯ ಪ್ರಾಚೀನ ಪ್ರಕಾರಗಳು**

೧. ತೇಹ-ನಿಸಾನೆ : ಕ್ರಮ ಕ್ರಮವಾಗಿ ಆಂತರಿಕವಾಗಿ ಕತ್ತರಿಸುವುದು

೨. ಜಾರ - ನಿಸಾನೆ : ಜಾರಿನ ಮೇಲ್ಭಾಗದಲ್ಲಿ ತಿಕ್ಕಿರುವುದರಿಂದ ಪ್ರತಿಬಿಂಬಿಸುವುದು ಇದನ್ನು ಮುನವದಕರಿ ಎಂದು ಕರೆಯುತ್ತಾರೆ. ೩. ಮಹತಬಿ-ಕವರಿ ತರಕಸಿ: ಕಪ್ಪು ಲೋಹ ದಲ್ಲಿ ಬೆಳ್ಳಿಯನ್ನೂ ಇಡುವುದು.

**೪. ಬಿದರಿಕಲೆ ತಯಾರಿಕೆಯ ಹಂತಗಳು**

ಈ ಕಲೆಯನ್ನು ತಯಾರಿಸುವ ಪ್ರಮುಖ ಹಂತಗಳಿವೆ.

೧. ಲೋಹ ಮಿಶ್ರಣಕ್ಕಾಗಿ ಕುದಿಸುವಿಕೆ

ಬಿದರಿ ಕಲೆ ತಯಾರಿಕೆಯ ಮೊದಲ ಹಂತವೆ ಲೋಹಗಳ ಮಿಶ್ರಣಕ್ರಿಯೆಯಾಗಿದೆ. ಒಂದು ಕಿಲೋ ಸತುವಿಗೆ ೬೦ ಗ್ರಾಂ ತಾಮ್ರ (೧೬:೧) ಈ ಪ್ರಮಾಣದಲ್ಲಿ ಲೋಹಗಳನ್ನು



ಶಿಲಾಬಾಲಿಕೆ



ಚಾಕುಗಳ ಮೇಲೆ ಬಿದರಿಕಲೆ

ಕರಗಿಸಲು 'ಮೂಸ' ಎಂಬೀ ವಿಶೇಷ ಮಣ್ಣಿನ ಮಡಕೆಯಲ್ಲಿ ಹಾಕಿ ಕುದಿಸಿದಾಗ ಲೋಹಗಳು ಕರಗಿ ಮಿಶ್ರಣ ಹೊಂದುತ್ತವೆ. ಇದಕ್ಕೆ ಉಬಾಲನಾ ಎಂದು ಕರೆಯುವರು.

**೨. ಎರಕ ಹೊಯ್ದು ಆಕೃತಿ ತಯಾರಿಸಿ ನಯಗೊಳಿಸುವಿಕೆ**

ಲೋಹಗಳು ಕರಗಿ ಮಿಶ್ರಣಗೊಂಡ ದ್ರಾವಣವನ್ನು ಮಣ್ಣಿನಿಂದ ತಯಾರಿಸಿದ ಎರಕದ ಪೆಟ್ಟಿಗೆಯಲ್ಲಿ ಹೊಯ್ಯಲಾಗುತ್ತದೆ. ತಕ್ಷಣ ದ್ರಾವಣ ಗಟ್ಟಿಗೊಂಡು ಎರಕದ ಪೆಟ್ಟಿಗೆ ಆಕೃತಿ ತಾಳುತ್ತದೆ. ಎರಕದ ಪೆಟ್ಟಿಗೆಯ ಆಕೃತಿಯನ್ನು ಮಣ್ಣಿಗೆ ದ್ರಾವಣವನ್ನೂ ಅಂಟಿಕೊಳ್ಳದಿರಲೆಂದು ದ್ರಾವಣ ಅದರಲ್ಲಿ ಹೊಯ್ಯುವ ಮೊದಲೆ ಸಂಗಜೀರಾ ಪುಡಿಯನ್ನು ಸಿಂಪಡಿಸಲಾಗುತ್ತದೆ. ಎರಕದ ಪೆಟ್ಟಿಗೆಯಲ್ಲಿ ಅಚ್ಚಾದ ಆಕೃತಿಗಳು ಅಲ್ಲಲ್ಲಿ ಒರಟಾಗಿರುವುದನ್ನು ನುಣ್ಣಗೆ ಮಾಡುವ ಸಲುವಾಗಿ ಆಕೃತಿಗೆ ತಕ್ಕ ಪೈಲುಗಳಿಂದ ತಿಕ್ಕಿ ನಯಗೊಳಿಸುತ್ತಾರೆ. ಇದಕ್ಕೆ ಆಕೃತಿ ನಯಗೊಳಿಸುವುದು ಇಲ್ಲವೆ ಪೈಲಿಂಗ್ ಮಾಡುವುದು ಎನ್ನುತ್ತಾರೆ.

**೩. ಬೆಸುಗೆ ಹಾಕುವುದು ಹಾಗೂ ನಯಗೊಳಿಸುವುದು**

ನಯಗೊಂಡ ಆಕೃತಿಯ ಬಿಡಿಭಾಗಗಳನ್ನು ಒಂದುಗೂಡಿಸ ಬೇಕಾದಲ್ಲಿ ಅಮೋನಿಯಂ ಕ್ಲೋರೈಡ್ (ನವಸಾಗರ) ಹಚ್ಚಿ ಬಿಡಿ ಭಾಗಗಳನ್ನು ಬೆಂಕಿಯ ಮೇಲಿಟ್ಟು ಕಾಯಿಸಿ ಜೋಡುಗಳಲ್ಲಿ ಬೆಸುಗೆ ಹಾಕಬೇಕಾಗುತ್ತದೆ. ಈ ಕಾರ್ಯಕ್ಕೆ ಬೆಸುಗೆ ಹಾಕುವುದು ಇಲ್ಲವೆ ವೆಲ್ಡಿಂಗ್ ಮಾಡುವುದು ಎಂದು ಕರೆಯುತ್ತಾರೆ.

೩. ಕೆಲವು ಆಕೃತಿಗಳು ಅಖಂಡವಾಗಿರುತ್ತವೆ. ಅಂಥವುಗಳಿಗೆ ಬೆಸುಗೆ ಅಗತ್ಯವಿಲ್ಲ. ಬೆಸುಗೆಯಾದ ಭಾಗಗಳಲ್ಲಿ ತಕ್ಕ ಫೈಲುಗಳಿಂದ ಪುನಃ ತಿಕ್ಕಿ ಆಕೃತಿಗೆ ನಯಗೊಳಿಸಲಾಗುತ್ತದೆ.

**೪. ತಾತ್ಕಾಲಿಕ ರಂಗೇರಿಸುವಿಕೆ**

ನಯಗೊಂಡ ಬಿದರಿ ಕಲಾಕೃತಿಯ ಮೇಲೆ ಚಿತ್ತಾರಗಳನ್ನು ಕೆತ್ತಲು ಅನುಕೂಲವಾಗಲೆಂದು ಬಿಳಿಯ ಕಲಾಕೃತಿಯ ಮೇಲೆ ನೀಲಾ ತೋತಾ(ತಾಮ್ರದ ಸಲ್ಫೇಟ)ವನ್ನು ಬಳಿಯಲಾಗುತ್ತದೆ. ಇದರಿಂದ ಸತು ಮತ್ತು ತಾಮ್ರದ ಲೋಹದಿಂದಾದ ಬಿಳಿಯ ಕಲಾಕೃತಿಯು ಕಂದು ಬಣ್ಣಕ್ಕೆ ತಿರುಗುತ್ತದೆ. ಇದು ತಾತ್ಕಾಲಿಕವಾಗಿದ್ದು ಕಲಾಕೃತಿಯ ಅಂತಿಮ ಹಂತದ ತಯಾರಿಕೆಯ ಮೊದಲೆ ತನ್ನ ಬಣ್ಣ ಕಳೆದುಕೊಳ್ಳುತ್ತದೆ.

**೫. ಚಿತ್ತಾರ ಕೆತ್ತುವಿಕೆ (ನಕ್ಷೆ ತಗೆಯುವದು)**

ಬೆಸುಗೆಗೊಂಡ ಕಲಾಕೃತಿಗೆ ತಾಮ್ರದ ಸಲ್ಫೇಟ್ ಬಳಿಯುವಿಕೆಯಿಂದ ಅದು ಕಂದು ಬಣ್ಣಕ್ಕಿಳಿದು ಚಿತ್ತಾರಗಳನ್ನು ಕೆತ್ತಿಸಿಕೊಳ್ಳಲು ಅಣಿಯಾಗುತ್ತದೆ. ಚಿತ್ತಾರಗಳನ್ನು ಕೆತ್ತುವ

ಮುನ್ನ ಕಲಾಕೃತಿಯ ಪೊಳ್ಳುಭಾಗದಲ್ಲಿ ಮೋಮ್‌ನ್ನು ತುಂಬುತ್ತಾರೆ. ಇದರಿಂದ ಕಲಾಕೃತಿ ಒಡೆಯುವುದಿಲ್ಲ. ಜೊತೆಗೆ ಒಂದು ಚಪ್ಪಟೆ ಕಲ್ಲಿನ ಮೇಲೆಯೂ ಮೋಮ್‌ಹಾಕಿ ಕಲಾ ಕೃತಿಯು ಜರುಗದಂತೆ ಚಿತ್ತಾರ ಕೆತ್ತುವುದಕ್ಕಾಗಿ ಬಿಗಿಯಾಗಿ ಕೂಡಿಸುತ್ತಾರೆ.

ಹೀಗೆ ಕೂಡಿಸಿದ ಕಲಾಕೃತಿಯ ಮೇಲೆ ಕಲಮ್(ಕಬ್ಬಿಣದ ಮೊಳೆ, ಪೆನ್ನು)ನಿಂದ ತಮಗೆ ಬೇಕಾದ ವಿನ್ಯಾಸಗಳನ್ನು ಬರೆದು ಇನ್ನೊಂದು ಚೂಪಾದ ಕಲಮ್‌ದಿಂದ ಸ್ವಲ್ಪ ಆಳವಾಗಿ (ರೇಖೆ ಬೀಳುವಂತೆ) ಕೆತ್ತಲಾಗುತ್ತದೆ. ಇದಕ್ಕೆ ಚಿತ್ತಾರ ಕೆತ್ತುವುದು ಅಥವಾ ಖೋದನಾ ಎನ್ನುವರು. ಬಿದರಿ ಕಲೆ ವಿನ್ಯಾಸದಲ್ಲಿ ಇದುವರೆಗೆ ನಾಲ್ಕು ವಿಧಗಳನ್ನು ಕಂಡುಕೊಳ್ಳಲಾಗಿದೆ.

ಅವು ೧. ತಾರಕಾಪಿ ೨. ಫುಲ್ ಝುಥಿ ೩. ಪೀಟ ೪. ಮಳಿಗೆಗಳು. ಈ ವಿಧಗಳಲ್ಲಿ ಮೋಹತಾಬಿಯ ವಿನ್ಯಾಸ ಕೇವಲ ತಜ್ಞ ಕುಶಲಕರ್ಮಿಗಳಿಂದ ಸಾಧ್ಯ.

**೬. ಬೆಳ್ಳಿ, ಬಂಗಾರ ಹುದುಗಿಸುವುದು ಹಾಗೂ ರಂದಾದಿಂದ ಕಲಾಕೃತಿ ನಯಗೊಳಿಸುವಿಕೆ**

ಆಕೃತಿಯ ಮೇಲೆ ಚಿತ್ತಾರದ ಕೆತ್ತನೆ ಕೆಲಸ ಮುಗಿದ ಮೇಲೆ ಆ ಕೆತ್ತಿದ ಸ್ಥಳದಲ್ಲೆಲ್ಲ ಶುದ್ಧವಾದ ಬೆಳ್ಳಿ ಅಥವಾ ಬಂಗಾರ ಇಲ್ಲವೆ ಅವೆರಡು ಕಲಮ್ ಹಾಗೂ ಹತೋಡಿಗಳ ಸಹಾಯದಿಂದ ಕುಶಲಕರ್ಮಿಗಳು ಹುದುಗಿಸುವ ದೃಶ್ಯ ಮನಮೋಹಕವಾಗಿರುತ್ತವೆ. ಬಂಗಾರದ ಬೆಲೆ ಹೆಚ್ಚಿರುವುದರಿಂದ ಇಂದು ಬಿದರಿ ಕಲಾಕೃತಿಗಳಲ್ಲಿ ಬಂಗಾರದ ಬಳಕೆ ಕಂಡುಬರುತ್ತಿಲ್ಲ. ಬೆಳ್ಳಿ ಹುದುಗಿಸುವುದರಲ್ಲಿ ಎರಡು ವಿಧಗಳಿವೆ.

೧. ವಿನ್ಯಾಸವು ರೇಖೆಯ ರೂಪದಲ್ಲಿ ಕೆತ್ತಿದ್ದರೆ ಅದರಲ್ಲಿ ತಾರಿನಂತೆ ಅಥವಾ ತಂತಿಯಂತೆ ಮಾಡಿಟ್ಟುಕೊಂಡ ಬೆಳ್ಳಿ ಅದಕ್ಕೆ ಬೇಕಾಗುವ ಗಾತ್ರದ ಕಲಮ್‌ನಿಂದ ಹುದುಗಿಸುತ್ತಾರೆ.

೨. ಅಗಲವುಳ್ಳ ವಿನ್ಯಾಸದ ಚಿತ್ತಾರಗಳನ್ನು ಕೆತ್ತಿದ್ದರೆ ಅದರಲ್ಲಿ ತಕಡಿನ ರೂಪದ ಬೆಳ್ಳಿಯನ್ನು ಹುದುಗಿಸುತ್ತಾರೆ. ಬೆಳ್ಳಿ ಹುದುಗಿಸುವ ಕಾರ್ಯ ಪೂರ್ಣಗೊಂಡ ಮೇಲೆ ಕಲಾಕೃತಿಯಲ್ಲಿ ತುಂಬಿದ್ದ ಮೇಣ ಹೊರತೆಗೆಯಲು ಕಲಾಕೃತಿಯನ್ನು ಸ್ವಲ್ಪ ಕಾಯಿಸುತ್ತಾರೆ. ಆಗ ಮೇಣ ಸರಳವಾಗಿ ಹೊರಬರುತ್ತದೆ.

ಕೆತ್ತಿದ ಚಿತ್ತಾರದಲ್ಲಿ ಬೆಳ್ಳಿ ಅಥವಾ ಬಂಗಾರ ಹುದುಗಿಸಿದುದರಿಂದ ಆಕೃತಿಯು ಅಲ್ಲಲ್ಲಿ ಒರಟಾಗಿರುವುದು. ಅದನ್ನು ನುಣ್ಣಗೆ ಮಾಡುವ ಸಲುವಾಗಿ ಫೈಲಿಂಗ್ ಮಾಡುತ್ತಾರೆ. ಆದರೆ ಈ ಫೈಲಿಂಗ್ ಮೊದಲಿನ ಫೈಲಿಂಗ್‌ಗಳಂತಿರದೆ ಸಣ್ಣದಾಗಿರುತ್ತದೆ. ಇದಕ್ಕೆ ರಂದಾ ಎಂದು ಕರೆಯುತ್ತಾರೆ. ಇದನ್ನು ಬಫಿಂಗ್ ಎಂಬ ಯಂತ್ರದ ಸಹಾಯದಿಂದಲೂ ನಯಗೊಳಿಸಬಹುದು. ಇದನ್ನು ಫೈಲಿಂಗ್, ರಂದಾ, ಬಫಿಂಗ್ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಫೈಲಿಂಗ್ ಮಾಡುವಾಗ ವಿನ್ಯಾಸದ ಚಿತ್ತಾರದಲ್ಲಿ ಹುದುಗಿಸಲಾದ ಬೆಳ್ಳಿ

ಹಾಗೂ ಕಲಾಕೃತಿಗೆ ಯಾವ ಧಕ್ಕೆಯೂ ಆಗುವುದಿಲ್ಲ. ಆದರೆ ನೀಲಾ ತೋತಾ(ತಾಮ್ರದ ಸಲ್ಫೇಟ)ದಿಂದಾದ ತಾತ್ಕಾಲಿಕ ಕಂದು ಬಣ್ಣ ಅಳಿದು ಮೊದಲಿನಂತೆ ಪೂರ್ಣ ಬೆಳ್ಳಿಯ ದೆಂಬಂತೆ ಬಿಳಿಯಾಗಿ ಆಕೃತಿ ಕಾಣುತ್ತಿರುತ್ತದೆ. ಇದರಲ್ಲಿ ವಿನ್ಯಾಸದ ಚಿತ್ತಾರಗಳನ್ನು ಕೆತ್ತಿ ಬೆಳ್ಳಿಯನ್ನು ಹುದುಗಿಸಿದ್ದಾರೆಂಬುದು ಕೂಡಾ ಗೊತ್ತಾಗುವುದಿಲ್ಲ. ಆಮೇಲೆ ಆಕೃತಿಗಳನ್ನು ಸೀಮೆ ಎಣ್ಣೆ(ಘಾಸ್‌ಲೇಟ)ಯಿಂದ ತೊಳೆದು ಕಟ್ಟಿಗೆಯ ಬಿಳಿಬೂದಿ ಹೊಡೆದು ಬಟ್ಟೆಯಿಂದ ಅಥವಾ ವಿಶಿಷ್ಟ ಬ್ರಷ್‌ದಿಂದ ಒರೆಸುತ್ತಾರೆ.

### ೭. ಶಾಶ್ವತ ರಂಗೇರಿಸುವಿಕೆ

ಬಿದರಿಕಲೆಯ ತಯಾರಿಕೆಯ ಕೊನೆಯ ಹಂತವೇ ಕಲಾಕೃತಿಗೆ ರಂಗೇರಿಸುವುದಾಗಿದೆ. ೧. ೬ ಪ್ರಮಾಣದಲ್ಲಿ ಅಮೋನಿಯಮ್ ಕ್ಲೋರೈಡ್ (ನವಸಾಗರ) ಹಾಗೂ ಬೀದರ ಕೋಟೆ ಯಲ್ಲಿ ಮಾತ್ರ ಸಿಗುವ ವಿಶಿಷ್ಟ ಬಗೆಯ ಮಣ್ಣನ್ನು ನೀರಿನಲ್ಲಿ ಮಿಶ್ರಣಮಾಡಿ, ಅಗಲವಾದ ಕಬ್ಬಿಣದ ಬುಟ್ಟಿಯಲ್ಲಿ ಕುದಿಸಿ ತಯಾರಿಸಿದ ದ್ರಾವಣದಲ್ಲಿ ಕಲಾಕೃತಿಗಳನ್ನು ಅದ್ದಿ ತಗೆಯುತ್ತಾರೆ. ಹೀಗೆ ಅದ್ದಿ ಕಲಾಕೃತಿಗಳನ್ನು ಹೊರಗೆ ತೆಗೆದಾಗ ಕಲಾತ್ಮಕ ಆಕೃತಿಯಲ್ಲಿನ ಸತುವಿನ ಅಂಶದ ಬಿಳಿಯ ಭಾಗವೆಲ್ಲ ಕಪ್ಪಾಗಿಯೂ ಬೆಳ್ಳಿ ಇರುವ ಬಳಿ ಭಾಗ ಮಾತ್ರ ಮೊದಲ ಬಣ್ಣವನ್ನು ಉಳಿಸಿಕೊಂಡಿರುತ್ತದೆ. ಈ ಕ್ರಿಯೆಗೆ ಶಾಶ್ವತ ರಂಗೇರಿಸುವುದು ಅಥವಾ ಬಣ್ಣ ಏರಿಸುವುದು ಎನ್ನುವರು. ಅದ್ದಿ ತೆಗೆದ ಕಲಾಕೃತಿಗಳನ್ನು ಹತ್ತು ಹದಿನೈದು ನಿಮಿಷಗಳ ಕಾಲ ಒಣಗಿಸಿ, ನೀರಿನಲ್ಲಿ ತೊಳೆದು, ಬಟ್ಟೆಯಿಂದ ಸೂಟಿ, ಕಡಲೆಕಾಯಿ, ಇಲ್ಲವೆ ಕೊಬ್ಬರಿ ಎಣ್ಣೆ ಹಚ್ಚಿ ಬಟ್ಟೆಯಿಂದ ಸ್ವಲ್ಪ ತಿಕ್ಕುತ್ತಾರೆ. ಕಾರಣ ಕುದಿದ ದ್ರಾವಣದಲ್ಲಿ ಅದ್ದಿದ ಕಲಾಕೃತಿಗಳಲ್ಲಿಯ ಬೆಳ್ಳಿಯ ಬಣ್ಣ ಸ್ವಲ್ಪ ಮಂದವಾಗಿರುತ್ತದೆ. ಆದ ಕಾರಣ ಹೀಗೆ ತಿಕ್ಕು ವುದರಿಂದ ಕಲೆಯಲ್ಲಿಯ ಬೆಳ್ಳಿಯ ಭಾಗಗಳು ಮಿಂಚುತ್ತ, ಉಳಿದ ಭಾಗ ಕಪ್ಪಾಗಿ ಮಿನುಗು ತ್ತಿರುತ್ತದೆ. ಈ ರೀತಿ ತಯಾರಾದ ಬಿದರಿ ಕಲಾಕೃತಿ ಮಾರಾಟಕ್ಕೆ ಸಿದ್ಧವಾಗುತ್ತದೆ.

### ೫. ಕಲಾತ್ಮಕತೆ ಮತ್ತು ಅಲಂಕಾರ

ಇಸ್ಲಾಂ ಧರ್ಮದಲ್ಲಿ ಮೂರ್ತಿ ಪೂಜೆಗೆ ಮಾನ್ಯತೆ ಇರದ ಕಾರಣ ಇವರ ಕಲೆಗೆ ನಿಸರ್ಗ ಹೂವು, ಎಲೆ, ಬಳ್ಳಿಗಳ ಅಲಂಕಾರದ ಚಿತ್ರಗಳನ್ನು ಕಾಣುತ್ತೇವೆ. ಪರ್ಶಿಯಾ, ಗ್ರೀಕ್ ದೇಶಗಳಲ್ಲಿ ಈ ಅಲಂಕಾರದ ಬಳಕೆ ಚಿತ್ರಕಲೆ, ವಾಸ್ತುಶಿಲ್ಪ ಮತ್ತು ದಿನನಿತ್ಯದ ಬಳಕೆಯ ವಸ್ತುಗಳ ರೂಪದಲ್ಲಿ ಚಿತ್ರಿತಗೊಂಡಿವೆ.

ಹಿಂದೂ-ಮುಸ್ಲಿಮ್ ಬಾಂಧವ್ಯದ ಸಂಕೇತವಾಗಿರುವ ಈ ಕಲೆ ಬಹಮನಿ, ಬರೀದಶಾಹಿ ಮತ್ತು ನಿಜಾಮಶಾಹಿಗಳಿಂದ ಪೋಷಿತವಾಗಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ಆಂಗ್ಲರೂ ಸಾಕಷ್ಟು ಪ್ರೋತ್ಸಾಹ ನೀಡಿದ್ದರು. ಪರ್ಶಿಯನ್, ಡೆಕ್ಕನ್ ಮತ್ತು ಮೊಗಲ್ ಕಲೆಯ ಸಮ ಮಿಶ್ರಣವು ಬಿದರಿ ಕಲೆಯಲ್ಲಿ ಗಮನಿಸುತ್ತೇವೆ.

ಬಿದರಿಕಲೆಯಲ್ಲಿ ಎರಡು ಬಣ್ಣವನ್ನು ಕಾಣುತ್ತೇವೆ. ಒಂದು ಕಪ್ಪು ಮೇಲ್ಮೈ ಮತ್ತು ಬೆಳ್ಳಿಯಿಂದ ತುಂಬಿದ ನಕ್ಷೆ. ಈ ಬಿದರಿ ಕಲೆಯಲ್ಲಿ ನಕ್ಷೆಯನ್ನು ಪ್ರಮುಖವಾಗಿ ಜ್ಯಾಮಿತಿ ಆಕಾರದಲ್ಲಿ ವಿಭಜಿಸಿಕೊಳ್ಳಲಾಗುತ್ತದೆ. ಈ ಶೈಲಿ ಸ್ಥಳೀಯ ವಾಸ್ತು ಶಿಲ್ಪಗಳಿಂದ ಪ್ರಭಾವ ಹೊಂದಿವೆ. ಬೀದರಿನ ಕೋಟೆಯಲ್ಲಿರುವ ರಂಗಿನ ಮಹಲಿನ ಗೋಡೆಗಳ ಮೇಲೆ ಇರುವ ಬಣ್ಣ ಅಮೃತ ಶಿಲೆಯಲ್ಲಿನ ಅಲಂಕಾರಿಕ ನಕ್ಷೆಗಳ ಬಳಕೆಯಂತೆಯೇ ಬಿದರಿ ಕೆಲಸದಲ್ಲಾಗುತ್ತದೆ.

**ಹೂದಾನಿ**

ಹೂದಾನಿ ಮಾಡುವ ಪದ್ಧತಿ ಅತೀ ಪ್ರಾಚೀನವಾದದ್ದು. ಪರ್ಷಿಯಾ ಗ್ರೀಕ್ ಮತ್ತು ಜಪಾನ್ ದೇಶಗಳಲ್ಲಿ ೫ನೆಯ ಶತಮಾನದ ಮೊದಲೆ ಈ ಪಾತ್ರೆಗಳ ಮೇಲೆ ಚಿತ್ರರಚನೆ ಪ್ರಾರಂಭವಾಯಿತು. ಗ್ರೀಕರ ಪಾತ್ರೆಗಳ ಮೇಲಿರುವ ಚಿತ್ರಗಳು ಉತ್ಕೃಷ್ಟ ನಮೂನೆಯ ಚಿತ್ರಗಳಾಗಿವೆ.

ಹೂದಾನಿಯನ್ನು ಮನೆಯ ಅಲಂಕರಣಕ್ಕಾಗಿ ಮಾಡಲಾಗಿದೆ. ಇಲ್ಲಿಯ ಚಿತ್ರದಲ್ಲಿಯ ಒಂದು ಹೂದಾನಿಯನ್ನು ರಷಿದಶಹಾರವರು ರಚಿಸಿದ್ದಾರೆ. ಅದು ೮ ಅಂಗಲ ಎತ್ತರದ ಈ ಪಾತ್ರೆಯ ಮೇಲೆ ಬೆಳ್ಳಿ ಜ್ಯಾಮಿತಿಯ ಆಕಾರದ ನಕ್ಷೆಗಳನ್ನು ಬಿಡಿಸಲಾಗಿದೆ. ನಕ್ಷೆಯ ರಚನೆ ಪಾತ್ರೆಯ ಆಕಾರಕ್ಕನುಗುಣವಾಗಿ ರಚಿಸಲಾಗಿದೆ. "ಯು" ಆಕಾರದ ಪ್ಯಾನೆಲ್‌ಗಳಲ್ಲಿ ಪಾತ್ರೆಯ ಗೋಲಾಕಾರದ ಭಾಗದ ಮೇಲೆ ವಿಭಜನೆ ಮಾಡಲಾಗಿದೆ. ಇದರ ಮಧ್ಯ ಎಲೆ ಅಥವಾ ಹೂವಿನ ನಕ್ಷೆಗಳಿವೆ. ಇದರಲ್ಲಿಯ ಸೂರ್ಯಕಾಂತಿಯ ಹೂವನ್ನು ನೋಡಿದಾಗ ಹೂ ಮೇಲಿನಿಂದ ಕೆಳಗೆ ಬಾಗಿದ್ದು ಗೋಚರವಾಗುತ್ತದೆ. ಪಾತ್ರೆಯ ನಾಲ್ಕು ಸಮ ಭಾಗಗಳಲ್ಲಿ ನಕ್ಷೆ ಪುನರಾವೃತ್ತಿಯಾಗುತ್ತದೆ. ಇದರಿಂದ ನಕ್ಷೆಗೆ ಲಯ ಮತ್ತು ಅಖಂಡತೆ ದೊರೆಯುತ್ತದೆ. ಹೂದಾನಿಯ ಕುತ್ತಿಗೆಯ ಮೇಲೆ ಉಬ್ಬಿದ ರೇಖೆಗಳಿವೆ. ಇವುಗಳನ್ನು ಇಸ್ಲಾಂ ವಾಸ್ತು ಶಿಲ್ಪಗಳಿಂದ ತೆಗೆದುಕೊಳ್ಳಲಾಗಿದೆ.

ಇನ್ನೊಂದು ಹೂದಾನಿಯ ಆಕಾರ ದೊಡ್ಡದಾಗಿ ಮುಖ ತೆಳುವಾಗಿದೆ. ಇದರ ಮೇಲಿನ ನಕ್ಷೆ ವಿಭಜನೆ ಜ್ಯಾಮಿತಿ ಆಕಾರದಲ್ಲಿ ಕಾರ್ಪೆಟ್‌ಗಳಿಗೆ ಹೋಲುತ್ತದೆ. ಇಲ್ಲಿಯ ಎಲೆ ಮತ್ತು ಹೂವಿನಿಂದ ರಚಿತಗೊಂಡ ನಕ್ಷೆಯಲ್ಲಿ ಲಯ ಮತ್ತು ಅಖಂಡತೆಯನ್ನು ಕಾಣಬಹುದು.

ಚಿತ್ರಪೆಟ್ಟಿಗೆ : ಈ ಚಿತ್ರ ಪೆಟ್ಟಿಗೆಯು ೧೭ನೆಯ ಶತಮಾನದ ಉತ್ತರಾರ್ಧದಲ್ಲಿ ನಿರ್ಮಾಣಗೊಂಡಿದೆ. ಇದು ಸ್ಥಳೀಯ ಕಾರ್ಮಿಕ ಹಾಗೂ ಕಲಾವಿದರಾದ ಮಹಮ್ಮದ ಶರೀಫ ಸಾಹೇಬರ ಬಳಿ ಸಂಗ್ರಹವಾಗಿದೆ. ಈ ಪೆಟ್ಟಿಗೆಯ ಎತ್ತರ ಮೂರುವರೆ ಅಂಗುಲ

ಮತ್ತು ಉದ್ದ ೮ ಅಂಗುಲ. ಈ ಎರಡು ಪೆಟ್ಟಿಗೆಯ ಆಕಾರ ಮತ್ತು ನಕ್ಷೆಗಳಲ್ಲಿ ಬಹಳ ವ್ಯತ್ಯಾಸವಿದೆ. ಈ ದಶಕದಲ್ಲಿ ನಿರ್ಮಾಣಗೊಂಡ ಪೆಟ್ಟಿಗೆಯ ಬಾಹ್ಯ ಆಕಾರಕೋನ ಆಯ ತಾಕಾರದ್ದಾಗಿದೆ ಮತ್ತು ಇದರ ನಕ್ಷೆಯಲ್ಲಿ ಸರಳತೆಯನ್ನು ಕಾಣಬಹುದು. ಡೆಕ್ಕನ್‌ಕಾಲದ ಪೆಟ್ಟಿಗೆಯ ಮೇಲ್ಭಾಗದ ಆಕಾರ ಗೋಲಾಕಾರದಲ್ಲಿದೆ ಮತ್ತು ನಕ್ಷೆಯಲ್ಲಿ ಪರ್ಶಿಯನ್ ಪ್ರಭಾವ ಕಾಣುತ್ತದೆ. ಇನ್ನೆರಡು ಚಿತ್ರಗಳಲ್ಲಿ ಎರಡು ದಖ್ಖನಿ ಜಲ ಪಾತ್ರೆಗಳಿವೆ. ಇವು ೧೭ನೆಯ ಶತಮಾನದ ಉತ್ತರಾರ್ಧದಲ್ಲಿ ನಿರ್ಮಾಣಗೊಂಡಿವೆ. ಎರಡು ಜಲಪಾತ್ರೆಗಳ ಮೇಲೆ ಬೆಳ್ಳಿಯ ಕೆಲಸವಿದೆ. ಬಹಳಷ್ಟು ಬೆಳ್ಳಿ ನಕ್ಷೆಯಿಂದ ಬಿದ್ದು ಹೋಗಿವೆ. ಇಲ್ಲಿಯ ಶೈಲಿಯು ಮೊಗಲ ನಕ್ಷೆಯ ಶೈಲಿಗೆ ಹೋಲುತ್ತದೆ.

### ಇಂದಿನ ಬಿದರಿ ಕಲಾಕೃತಿಗಳು

ಬಹಮನಿ ಕಾಲದಿಂದ ಹೈದರಾಬಾದ ನಿಜಾಮರ ಕಾಲದವರೆಗಿನ ರಾಜ ಮಹಾರಾಜರು ಹಾಗೂ ಶ್ರೀಮಂತವರ್ಗವು, ನೀರಿನ ಹೂಜಿಗಳು, ಕೈತೊಳೆಯುವ ಬೇಸಿನುಗಳು, ಪಾನ ಪಾತ್ರೆಗಳು, ಹುಕ್ಕಾಗಳು, ಉಮರಖಯ್ಯಾಮನ ರುಬಾಯಿತ ರೇಖಾ ಚಿತ್ರಗಳು ಹಾಗೂ ಅವುಗಳ ಮೇಲೆ ಕುರಾನಿನ ಶ್ಲೋಕಗಳು, ಹೂಬಳ್ಳಿ, ಎಲೆಗಳ ಚಿತ್ತಾರಗಳನ್ನು ಹೊಂದಿದ ಮೊಂಬತ್ತಿಯ ಕಂಬಗಳು, ಮಸಾಲೆ ವಸ್ತುವಿನ ಡಬ್ಬಗಳು, ಹೂದಾನಿಗಳು ಇತ್ಯಾದಿ ಬಿದರಿ ವಸ್ತುಗಳನ್ನು ಪರಂಪರಾಗತವಾಗಿ ಬಳಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಜನರ ಅಭಿರುಚಿ ಮತ್ತು ಒಲವುಗಳು ಬದಲಾವಣೆಯಾದ ಹಾಗೆ ೨೦೦ ವಿಧಗಳಿಗೂ ಹೆಚ್ಚಿನ ವಸ್ತುಗಳು ತಯಾರಾಗುತ್ತವೆ. ಇವುಗಳಲ್ಲಿ ಮುಖ್ಯವಾದವು ವರ್ಣಮಯವಾದ ವಿನ್ಯಾಸಗಳಿಂದ ಕೂಡಿದ ಸಿಗರೇಟು ಡಬ್ಬಿಗಳು, ಸಿಗರೇಟು ಬೂದಿ ತಟ್ಟೆಗಳು, ಅಂಗಿಯ ಗುಂಡಿಗಳು, ದೀಪದ ಪೀಠಗಳು, ಬಳೆಗಳು ಕಡಗಗಳು, ಬ್ರೋಚುಗಳು, ಸರಗಳು, ಕಿವಿಯ ಓಲೆಗಳು, ಮಾದರಿ ಆಕೃತಿಗಳು ಬಟ್ಟಲುಗಳು, ಸರಗಳು, ಚಿತ್ರ ಮತ್ತು ಕನ್ನಡಿ ಚೌಕಟ್ಟುಗಳು ಕಾಗದ ಹೇರು (ಪೇಪರ್‌ವೇಟ್) ಹಿಡಿಕೆಗಳು, ಲೇಖನಿ ಪೀಠ ಮುಂತಾದ ಲೇಖನ ಸಾಮಗ್ರಿಗಳು. ಹಣ್ಣಿನ ಬರಣಿಗಳು ಗೋಡೆ ಮತ್ತು ಮೇಜಿನ ಮೇಲಿಡುವ ಅಲಂಕಾರವಸ್ತು, ವಿನ್ಯಾಸಗಳು, ತಂಬಿಗೆ, ಬೋಗುಣಿ, ಕುಂಕುಮದ ಭರಣಿ, ಕೊರಳಹಾರ, ಪದಕ, ಮೂರ್ತಿಗಳು, ಪಿನ್, ಜಗ್ಗು, ವೃತ್ತ ಹಾಗೂ ತ್ರಿದಳ ಇತ್ಯಾದಿ ರೇಖಾಶಾಸ್ತ್ರದ ಮಾದರಿಗಳನ್ನು ಮತ್ತು ಸಾಂಪ್ರದಾಯಿಕ ನಮೂನೆಯ ವಸ್ತುಗಳು ಒಳಗೊಂಡಿರುತ್ತವೆ.

### ೬. ಬಿದರಿ ಕಲೆಯ ಉಪಯೋಗ

ಬಿದರಿ ಕಲಾಕೃತಿಗಳು ಜನಸಾಮಾನ್ಯರಿಗಿಂತಲೂ ಶ್ರೀಮಂತ ಜನ ವರ್ಗದ ಭೋಗದ ವಸ್ತುಗಳಾಗಿವೆ. ಬ್ರಿಟಿಷ್ ಗ್ರಂಥಾಲಯದಲ್ಲಿ ೧೭೫೪ರಲ್ಲಿ ಸಂಗ್ರಹಿತವಾದ 'ಚಾರ ಗುಲ್‌ಶನ್' ಎಂಬ ಹೆಸರಿನ ಹಸ್ತಪ್ರತಿಯಲ್ಲಿ ಬಿದರಿ ವಸ್ತುಗಳ ಪಟ್ಟಿಯನ್ನು ನೀಡಲಾಗಿದೆ.

ಅದರಲ್ಲಿ ಪಾನದಾನ, ಅಬ್ಖೋರೇಹ, ಬಟ್ಟಲು, ಗಿಲಾಸು ಹಾಗೂ ಭಿನ್ನ ಗಾತ್ರದ ವಿಭಿನ್ನ ಪಾತ್ರೆಗಳು ಸೇರಿವೆ. ಪಾಟ್ನಾದ ಬಂಕೀಪುರದಲ್ಲಿನ ಓರಿಯಂಟಲ್ ಗ್ರಂಥಾಲಯದಲ್ಲಿಯ ಹಸ್ತಪ್ರತಿಯಲ್ಲಿ (೧೯೦೧) ಪ್ರಕಾರ ಪತ್ತೆ ಹಚ್ಚಿದ ಮೇಣದ ಬತ್ತಿಯ ಸ್ತಂಭ ಸೇರಿಸಬಹುದು. ಪಾಟ್ನಾದ ಹಸ್ತಪ್ರತಿಯಲ್ಲಿ ಒಂದು ಕಣ್ಣುಕುಕ್ಕುವ ಹೊಳಪುಳ್ಳ ''ಹುಕ್ಕಾ'' ಬಿದರಿ ವಸ್ತುವಾಗಿತ್ತು. ಚಿತ್ರಕಲೆಯಲ್ಲಿಯೇ ರಚಿತವಾದ ಪ್ರಪ್ರಥಮವಾಗಿ ಗೋಚರಿಸಿದ ಅದ್ಭುತ ಬಿದರಿ ಕಲಾಕೃತಿ ಇದಾಗಿತ್ತು. ವಸ್ತುಸಂಗ್ರಹಾಲಯಗಳೆಲ್ಲ ಅಧಿಕ ಸಂಖ್ಯೆಯಲ್ಲಿ ಬಿದರಿ ವಸ್ತುವಿನಲ್ಲಿಯೇ ರಚಿತವಾದ ಹುಕ್ಕಾ ಗೋಚರಿಸುವುದು ಸಾಮಾನ್ಯವಾಗಿದೆ. ''ಹುಕ್ಕಾ'' ಇದೊಂದು ನೀರಿನ ನಳಿಕೆ ಹೊಂದಿರುವ ಬಿದರಿವಸ್ತು. ಇದು ಪಶ್ಚಿಮದಲ್ಲಿ ''ಹಬಲ್-ಬಬಲ್'' ಎಂದು ಖ್ಯಾತಿ ಹೊಂದಿದೆ. ಇದನ್ನು ಆರಂಭದಲ್ಲಿ ತಂಬಾಕು ಸೇದಲು ಉಪಯೋಗಿಸಿದಂತಿದೆ. ಅಂದು ಅಮಲೇರಿಸಲು ಅಫೀಮು, ಭಂಗಿ ಕುಡಿಯುವುದು, ತಿನ್ನುವುದು ಸಾಮಾನ್ಯವಾಗಿತ್ತು. ಬಿದರಿ ವಸ್ತುವಿನಲ್ಲಿ ಹುಕ್ಕಾ ತಯಾರಾದ ಮೇಲೆ ತಂಬಾಕಿನ ಜೊತೆಗೆ ಅಫೀಮು ಕೂಡ ಅಮಲೇರಿಸಲು, ಸೇದಲು ಉಪಯೋಗಿಸಲಾರಂಭಿಸಿದರು.

ಮೊಘಲರ ಕಾಲದಲ್ಲಿ (೧೬೦೪) ಭಾರತಕ್ಕೆ ದಖನ್‌ರಿಂದ ತಂಬಾಕು ಪ್ರವೇಶಮಾಡಿತು. ಪೋರ್ಚುಗೀಸರು ಸಂದೇಹದಿಂದಲೇ ತಂಬಾಕನ್ನು ಅಮಲಿಗಾಗಿ ಬಳಸಲು ದಖನ್‌ನಲ್ಲಿ ಅವಕಾಶ ಕಲ್ಪಿಸಿದರು. ತಂಬಾಕು ಒಂದು ಮಾರಕ ವಸ್ತುವೆಂಬುದು ದಖನ್‌ರಿಂದ ಮೊಘಲರಿಗೆ ಅರಿವಾಯಿತು. ಇದನ್ನರಿಯಲು ಅಕ್ಬರನು ತನ್ನ ಆಸ್ಥಾನದ ರಾಜಮಾನ್ಯ ಅಸಾದ್‌ಬೇಗನಿಗೆ ೧೬೦೪ರಲ್ಲಿ ತನ್ನ ಅಧೀನದಲ್ಲಿದ್ದ ದಖನ್ ಪ್ರದೇಶ ವಿಜಾಪುರಕ್ಕೆ ರಾಜದೂತನನ್ನಾಗಿ ಕಳುಹಿಸಿದ. ಅಸಾದಬೇಗನ ಅಭಿಪ್ರಾಯದ ಪ್ರಕಾರ ''ಭಾರತದಲ್ಲಿ ಇದುವರೆಗೂ ಎಲ್ಲಿಯೂ ಕಂಡರಿಯದ ತಂಬಾಕು ಬಿಜಾಪುರದಲ್ಲಿ ಕಂಡ, ತನ್ನ ಜೊತೆಗೆ ಸ್ವಲ್ಪ ತಂಬಾಕು ತಂದು, ಅಮೂಲ್ಯವಾದ ಸುಂದರವಾದ ನಳಿಕೆಯೊಂದನ್ನು (ಹುಕ್ಕಾ) ತಯಾರಿಸಿ ಅಕ್ಬರನಿಗೆ ಮತ್ತು ಇನ್ನುಳಿದ ರಾಜಮಾನ್ಯರಿಗೆ ಹಲವಾರು ಹುಕ್ಕಾಗಳನ್ನು ಮಾಡಿಸಿ ತಂಬಾಕಿನೊಂದಿಗೆ ರಾಜಮಾನ್ಯರಿಗೆ ಅರ್ಪಿಸಿದ.''

ಥಾಮಸ್ ರೋಯಿಯವರೆಲ್ಲರು ೧೬೧೬ರಲ್ಲಿ ತಾವು ಕಂಡ ಹುಕ್ಕಾದ ಬಗ್ಗೆ ಈ ರೀತಿ ಹೇಳಿದ್ದಾರೆ. ''ಭಾರತದಲ್ಲಿ ಕಂಡ ಹುಕ್ಕಾದ ತಳಚೌಕ ಗಡಿಗೆಯಾಕಾರ ಹೊಂದಿದ್ದು ಅದರ ತೆರೆದ ವರ್ತುಲಾಕಾರದ ಬಾಯಿ ಚಿಕ್ಕದಾಗಿರುತ್ತದೆ. ಈ ಗಡಿಗೆಯಾಕಾರದ ಬಿದರಿ ವಸ್ತುವಿನ ಹುಕ್ಕಾದಲ್ಲಿ ನೀರು ಹಾಕಿರುತ್ತಾರೆ. ಅದರ ಮೇಲೆ ಒಂದು ಚಿಕ್ಕನಳಿಕೆಯಿದ್ದು, ನಳಿಕೆಯ ಬಾಯಿಯಲ್ಲಿ ಬೆಂಕಿಕೆಂಡ ಹಾಕಿ ಹೊಗೆಸೊಪ್ಪು ಸೇದಲು ಅನುಕೂಲಕರವಾದ ಒಂದು ಉದ್ದ ನಳಿಕೆಯನ್ನು ಹುಕ್ಕಾದ ಬಾಯಿಯ ರಂಧ್ರಕ್ಕೆ ಜೋಡಿಸುತ್ತಾರೆ. ಹೊಗೆಸೊಪ್ಪು ಹುಕ್ಕಾದ ಮೇಲಿರುವ ನಳಿಕೆಯ ಬಟ್ಟಲಲ್ಲಿ ಉರಿಯುತ್ತಿರುತ್ತದೆ. ಹುಕ್ಕಾದ ಮೇಲ್ಭಾಗದ ನಳಿಕೆಯ ಬಟ್ಟಲಲ್ಲಿ ಬೆಂಕಿಯಿದ್ದು, ಕೆಳಭಾಗದಲ್ಲಿ ನೀರು ತುಂಬಿರುವುದರಿಂದ ಎರಡರ ಮಧ್ಯದಲ್ಲಿ

ರುವ ಹೊಗೆಸೊಪ್ಪು ಸೇದುವ ನಳಿಕೆಯ ಜೋಡಣೆ ತಂಪಾದ ಹಾಗೂ ಆಹ್ಲಾದಕರವಾದ ಧೂಮವನ್ನು ಪೂರೈಸುತ್ತದೆ.

೧೬೦೭ರಲ್ಲಿ ಮಾರ್ಚ್ ತಿಂಗಳಲ್ಲಿ ಜಹಾಂಗೀರನು ಹುಕ್ಕಾ ಸೇವನೆಯ ಮೇಲೆ ನಿರ್ಬಂಧ ಹೇರಿದರೂ ಹುಕ್ಕಾ ಸೇವನೆಯ ವ್ಯಸನಕ್ಕೆ ದಾಸರಾದವರಿಂದ ಅದು ನಿಲ್ಲದೆ ಮುಂದು ವರಿಯಿತು. ಹೀಗಾಗಿ ಹುಕ್ಕಾ ಬಿದರಿಕಲೆಯಲ್ಲಿ ಹಲವಾರು ವಿನ್ಯಾಸಗಳೊಂದಿಗೆ ಜನಪ್ರಿಯ ಗೊಂಡಿತು.

## ಹೂದಾನಿ

ಹೂದಾನಿ ಹೂಗಳನ್ನು ಅಲಂಕರಿಸಲು ಉಪಯೋಗಿಸುವ ಬಿದರಿ ಕಲಾಕೃತಿಗಳಲ್ಲಿ ಒಂದು. ಹಲವಾರು ವಿಭಿನ್ನ ವಿನ್ಯಾಸಗಳ ಹೂದಾನಿಗಳು ಜನಮನ ಸೂರೆಗೊಳಿಸಿವೆ.

## ಪಾನದಾನ

(ವೀಳ್ಯದೆಲೆ, ಅಡಿಕೆ, ಕಾಚು, ಸುಣ್ಣ, ಲವಂಗ, ಇಲಾಚಿ, ಇಡುವ ಸಾಧನ) ಭಾರತದಲ್ಲಿ ಜನಸಾಮಾನ್ಯರು ವಿಶೇಷ ಔತಣ, ಹಬ್ಬ ಹರಿದಿನಗಳಲ್ಲಿ ಹಾಗೂ ನಿತ್ಯಜೀವನದಲ್ಲಿ ವೀಳ್ಯಸೇವಿಸುವುದು ಅಭ್ಯಾಸವಾಗಿದೆ. ಊಟಮಾಡಿ ವೀಳ್ಯ ಸೇವಿಸುವುದು ಭಾರತದಾದ್ಯಂತ ಸಾಮಾನ್ಯವಾಗಿದೆ. ಊಟ ಜೀರ್ಣವಾಗುವುದೆಂದು ವೀಳ್ಯ ಸೇವಿಸುವುದುಂಟು. ವಿಭಿನ್ನ ಮಾದರಿಯ ಪಾನದಾನಗಳು ಬಿದರಿ ಕಲಾಕೃತಿಗಳಲ್ಲಿ ಲಭ್ಯವಾಗಿದ್ದು ಜನೋಪಯೋಗಿ ಯಾಗಿವೆ.

## ಪೀಕದಾನಿ

ಪಾನದಾನಕ್ಕೆ ಪೀಕದಾನಿಯ ಅವಶ್ಯಕತೆಯುಂಟು. ವೀಳ್ಯತಿಂದು ಉಗುಳಲು ಪೀಕದಾನಿ (ಉಗುಳುವ ತೊಟ್ಟಿ) ಬೇಕಾಗುವುದು. ಇದೂ ಕೂಡ ಪಾನದಾನದಷ್ಟೇ ಬಿದರಿ ಕಲೆಯಲ್ಲಿ ಮಹತ್ವ ಪಡೆದ ಕಲಾಕೃತಿ. ಹತ್ತೊಂಬತ್ತನೆಯ ಶತಮಾನದಲ್ಲಿ ಮೇಜು, ದೀಪ ಸ್ತಂಭಗಳು ಹಾಗೂ ಶಯನಗೃಹದ ದೀಪಸ್ತಂಭಗಳು, ಬಿದರಿ ಕಲೆಯಲ್ಲಿ ಪ್ರಸಿದ್ಧಿ ಹೊಂದಿದ ಕಲಾಕೃತಿ ಗಳು. ಸಣ್ಣಕೊಡಗಳು, ಹುಕ್ಕಾಗಳು, ಬಾಟಲಿಗಳು, ಹೂಜಿಗಳು, ಭೋಗುಣಿಗಳು, ಕುಡಿ ಯುವ ಪಾತ್ರೆಗಳು, ಪೆಟ್ಟಿಗೆಗಳು ಮುಂತಾದವು ಕೂಡ ಈ ಶತಮಾನದಲ್ಲಿ ಬಿದರಿ ಕಲೆಯ ಉಪಯುಕ್ತ ಹಾಗೂ ಬೇಡಿಕೆಯುಳ್ಳ ಕಲಾಕೃತಿಗಳಾಗಿದ್ದವು. ಬಿದರಿ ಕಲಾಕೃತಿಗಳು ಗಡಿಗೆ ಹಾಗೂ ಹಿತ್ತಾಳೆಯ ವಸ್ತುಗಳಲ್ಲೂ ತನ್ನ ಪ್ರಭಾವ ಬೀರಿರುವುದು ಸ್ಪಷ್ಟವಾಗಿದೆ.

ಇಂದು ಪ್ರವಾಸಿಗರಿಗೆ ಬಿದರಿ ಕಲೆಗಳು ಆಕರ್ಷಣೀಯ ವಾಗಿದ್ದು ಬೇಡಿಕೆಯುಳ್ಳವಾಗಿ, ಬೀಡಿ, ಸಿಗರೇಟು ಇಡುವ ಡಬ್ಬಿಗಳು ಹಾಗೂ ಅವುಗಳ ಬೂದಿ ಉದುರಿಸುವ ಆಶ್‌ಟ್ರೇಗಳು ಜನರ ಬೇಡಿಕೆಗನುಗುಣವಾಗಿ ಬಿದರಿ ಕಲೆಯಲ್ಲಿ ತಯಾರಾಗುತ್ತದೆ. ಹುಕ್ಕಾಗಳ

ಉಪಭೋಗತೆ ಕಡಿಮೆಯಾದಂತೆ ಅವುಗಳ ತಯಾರಿಕೆಯು ಬಿದರಿಕಲೆಯಲ್ಲಿ ಕಡಿಮೆಯಾಗಿದೆ. ಕಂಠಹಾರ, ಕೈಬಳೆಗಳು, ಗಡಿಯಾರ, ರಾಶಿಚಕ್ರ, ಅಜಂತಾ ಮಾದರಿಯ ಚಿತ್ರಗಳು ಜನಪದ ಕಲೆಗಳ ನೃತ್ಯಮಾದರಿಯ ಚಿತ್ರಗಳು ಇತ್ಯಾದಿಗಳು ಹಲವಾರು ಹಂತಗಳಲ್ಲಿ ಪ್ರೇರಣೆ ನೀಡುತ್ತವೆ.

### ೭. ಕುಶಲ ಕಾರ್ಮಿಕರು

ಹಿಂದಿನ ಕಾಲದಲ್ಲಿ ಈ ಬಿದರಿ ಕಲೆ ಕಲಾವಿದರಿಗೆ (ಕುಶಲಕರ್ಮಿಗಳಿಗೆ) ರಾಜರ ಆಶ್ರಯದಲ್ಲಿ ಕೆಲಸಮಾಡುತ್ತಿದ್ದರು. ಈಗಿನ ಕಾಲದಲ್ಲಿ ಈ ಕಲೆಯನ್ನು ತಮ್ಮ ಉಪಜೀವನಕ್ಕಾಗಿ ಮಾಡುತ್ತಿರುವರು. ಆಗಿನ ಕಲಾಕಾರರು ಕುಟುಂಬವನ್ನು ಐಶಾರಾಮವಾಗಿ ರಾಜಾಶ್ರಯದಲ್ಲಿ ಕಳೆಯುತ್ತಿದ್ದರು. ಆದರೆ ಈಗಿನ ಕಲಾಕಾರರ ಜೀವನವು ತಾವು ತಯಾರಿಸಿದ ವಸ್ತುಗಳ ಮಾರಾಟದ ಮೇಲೆ ಅವಲಂಬನವಾಗಿರುತ್ತದೆ.

ಅರಸುಮನೆತನಗಳಿಂದ ಪೋಷಿತವಾದ ಈ ಕಲೆ ಅತ್ಯಂತ ಉಚ್ಛ್ರಾಯ ಸ್ಥಿತಿಗೆ ತಲುಪಿದ್ದು ಬೀದರದಲ್ಲೇ. ಇಂದು ಇಲ್ಲಿನ ಹಲವು ಕಲಾವಿದರು ಅಂತರರಾಷ್ಟ್ರೀಯ ಖ್ಯಾತಿಗಳಿಸಿದ್ದಾರೆ. ಕೆಲವು ಕುಶಲಕರ್ಮಿಗಳ ಹೆಸರನ್ನು ಉಲ್ಲೇಖಿಸಲಾಗಿದೆ. ಅಬ್ದುಲ್ ರಹುಫ್, ಅಬ್ದುಲ್ ಗಫುರ್, ಅಬ್ದುಲ್ ಹಸೀನ್, ಅಬ್ದುಲ್ ಖಾಲಿಫ್, ಅಬ್ದುಲ್ ಖಿದ್ದುನ್, ಮಹಮ್ಮದ ಸಿದ್ದೀಕ್, ಖಾಜಾಮೈನೋದ್ದೀನ್, ದತ್ತಾತ್ರೀ, ಮಲ್ಲಿಕಾರ್ಜುನ, ರಾಜಕುಮಾರ, ರಾಕೇಶ ಕುಮಾರ, ಶಿವರಾಜ, ಸುಧಾಕರ, ಮಾಣಿಕಪ್ಪಾ, ಮಹಮ್ಮದಸುಮಾನ್, ಶೆಹಲಾನ್ ನಿಷ್ಯಾತ್, ಶಹವಾರ ಸಿದ್ದೀಖಾ, ಮಹಮ್ಮದ್ ಶರೀಫ್, ಮಹಮ್ಮದ ಸುಲ್ತಾನ, ಮಹ್ಮದ ಸುಲ್ತಾನಸಾಭಿ, ಮಹಮ್ಮದಖಾಜಾಮಿಯಾ, ಮಹಮ್ಮದ ಐರಿಖ, ರಿಯಾಜ ಅಹ್ಮದ, ಅಹ್ಮದ ಪಾಷಾ ಖಾದ್ರಿ ಹೀಗೆ ಅನೇಕ ಕಲಾವಿದರು ಈ ಕಲೆಯನ್ನು ಬೆಳೆಸಿ ಉಳಿಸಿಕೊಂಡು ಬಂದಿದ್ದಾರೆ.

### ರಾಜ್ಯ ಪಶಸ್ತಿ ಪಡೆದಂಥ ಬಿದರಿ ಕಲಾವಿದರು

| ಇಸ್ವಿ | ಕಲಾವಿದರ ಹೆಸರು |
|---|---|
| ೧೯೬೯ | ಗುಲಾಮ ಸತ್ತಾರ |
| ೧೯೭೦ | ಬಸಪ್ಪ |
| ೧೯೭೧ | ಶೇಖ ಅಹಮ್ಮದ ಸಾಹೇಬ |
| ೧೯೭೨ | ಗುಲಾಮ ಕದ್ದೂಸ್ |
| ೧೯೭೩ | ಮಾಣಿಕಪ್ಪ |

೧೯೭೮ ಮಹಮ್ಮದ್ ಶರೀಫ್

೧೯೮೪ ಸಯ್ಯದಷಾ ರಷೀದ ಅಹ್ಮದ ಖಾದ್ರಿ

೧೯೮೪ ಅಬ್ದುಲ್ ಖಲೀಮ್ (ಪ್ರಶಸ್ತಿ ಪತ್ರ)

೧೯೮೫ ಅಹ್ಮದ ಖಾದ್ರಿ

೧೯೮೬ ಅಬ್ದುಲ್ ರೋಫ್

೧೯೮೭ ಅಬ್ದುಲ್ ಹಮೀದ್ (ಪಶಸ್ತಿ ಪತ್ರ)

೧೯೮೮ ಮಹ್ಮದ ಅಹ್ಮದ

೧೯೮೮ ಸಯ್ಯದಷಾ ರಷೀದ ಅಹ್ಮದ್ ಖಾದ್ರಿ (ರಾಷ್ಟ್ರೀಯ ಪ್ರಶಸ್ತಿ)

ಹೀಗೆ ಅನೇಕ ಕಲಾವಿದರು ರಾಜ್ಯ ಮತ್ತು ರಾಷ್ಟ್ರಪ್ರಶಸ್ತಿಗಳನ್ನು ಪಡೆದಿದ್ದಾರೆ. ಈ ಕಲಾವಿದರಲ್ಲಿ ಮೂರು ಜನ ಬಿದರಿ ಕಲಾವಿದರ ಜೀವನ ಚರಿತ್ರೆ ಮತ್ತು ಅವರು ಪಡೆದಂತಹ ಪಾರಿತೋಷಕಗಳು ಹಾಗೂ ಅವರು ರಚಿಸಿದ ಕಲಾಕೃತಿಗಳ ವಿವರಣೆಯನ್ನು ಮಾಡಿದೆ.

ಕಲಾಕಾರರ ಹೆಸರು

೧. ಮಾಣಿಕಪ್ಪ
೨. ಮಹಮ್ಮದ್ ಶರೀಫ್
೩. ಸಯ್ಯದ್‌ಷಾ ರಷೀದ ಅಹ್ಮದ ಖಾದ್ರಿ

## ೧. ಮಾಣಿಕಪ್ಪ

ಮಾಣಿಕಪ್ಪನವರು ಬಿದರಿಕಲೆಯಲ್ಲಿ ನಿಪುಣತೆ ಹೊಂದಿದ ನರಸಪ್ಪನವರ ಮನೆತನದಲ್ಲಿ ಜನಿಸಿದರು. ನರಸಪ್ಪನವರು ರಾಜಾಶ್ರಯದಲ್ಲಿ ಬಿದರಿ ಕಲೆಯನ್ನೂ ಪೋಷಿಸಿಕೊಂಡು ಬೀದರ ನಗದರಲ್ಲಿ ನೆಲೆಸಿದ್ದರು. ನರಸಪ್ಪನವರಿಗೆ ನಾಲ್ಕು ಜನ ಮಕ್ಕಳಿದ್ದರು. ಅವರಲ್ಲಿ ಬಸಪ್ಪನೆಂಬವರು ನರಸಪ್ಪನವರ ಆಶ್ರಯದಲ್ಲಿದ್ದು ಬಿದರಿ ಕರಕುಶಲ ಕಲೆಯನ್ನು ಕಲಿತರು.

ಬಸಪ್ಪನವರು ೧೯೭೦ರಲ್ಲಿ ಕರ್ನಾಟಕ ಸರ್ಕಾರ ರಾಜ್ಯ ಪ್ರಶಸ್ತಿ ಪುರಸ್ಕಾರ ನೀಡಿ ಗೌರವಿಸಿತು. ಭಾರತದಲ್ಲಿಯ ಪ್ರಮುಖ ರಾಜ್ಯಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿ ಪ್ರಶಂಸೆ ಯನ್ನು ಪಡೆದಿದ್ದಾರೆ. ಬಸಪ್ಪನವರು ತೀರಿಕೊಂಡ ನಂತರ ಅವರ ಪತ್ನಿ ಅಡೆಮ್ಮಾ ಸರಕಾರದಿಂದ ಸಹಾಯಧನ ಪಡೆಯುತ್ತಿದ್ದಾರೆ. ಬಸಪ್ಪನವರಿಗೆ ನಾಲ್ಕು ಜನ ಮಕ್ಕಳಿದ್ದರು. ಇವರಲ್ಲಿ ಮಾಣಿಕಪ್ಪನವರು ಎರಡನೆಯ ಮಗನಾಗಿ ೧೮ನೇ ಸಪ್ಟೆಂಬರ್ ೧೯೪೧ರಲ್ಲಿ ಬೀದರಿನಲ್ಲಿ ಜನಿಸಿದರು.

ಮಾಣಿಕಪ್ಪನವರು ತಂದೆಯಾದ ಬಸಪ್ಪನವರ ಮಾರ್ಗದರ್ಶನದಿಂದ ಬಿದರಿ ಕರಕುಶಲ ಕಲೆ ಕಲಿತರು. ಬಾಲ್ಯದಿಂದಲೇ ಬಿದರಿಕಲೆಯಲ್ಲಿ ಪ್ರಾವಿಣ್ಯತೆಯನ್ನು ಪಡೆದಿದ್ದರು. ಈಗ ೪೭ ವರ್ಷಗಳಿಂದ ಕರಕುಶಲ ವಸ್ತುಗಳನ್ನು ತಯಾರಿಸುತ್ತಲೇ ಬಂದಿರುವರು. ಈಗಲೂ ತಮ್ಮ ಕುಟುಂಬದ ಸದಸ್ಯರೊಂದಿಗೆ ಬಿದರಿಕಲೆಯನ್ನು ಮುಂದುವರಿಸಿಕೊಂಡು ಬಂದಿರುವರು. ಅವರ ಪತ್ನಿ ಲಕ್ಷ್ಮಿ ಹಾಗೂ ಮಗ ಮಲ್ಲಿಕಾರ್ಜುನ ಬಿದರಿ ಕರಕುಶಲತೆಯಲ್ಲಿ ಪ್ರಾವಿಣ್ಯತೆ ಹೊಂದಿರುವರು. ಮಲ್ಲಿಕಾರ್ಜುನ ಡಿ.ಪಿ.ಸಿ.ದಿಂದ ಹ್ಯಾಂಡ್‌ಕ್ರಾಫ್ಟ್ ಯೋಜನೆಯಲ್ಲಿ ಭಾಗವಹಿಸಿ ಎರಡನೆಯ ಬಹುಮಾನ ಪಡೆದಿದ್ದಾರೆ. ಮಲ್ಲಿಕಾರ್ಜುನ ಅವರು ಬೀದರಿನ ಐ.ಟಿ.ಐ.ನಲ್ಲಿ ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡುತ್ತಿರುವರು.

**ಮಾಣಿಕಪ್ಪನವರು ತಯಾರಿಸಿದ ಬಿದರಿ ಕರಕುಶಲ ವಸ್ತುಗಳು**

ನೀರಿನ ಬಟ್ಟಲು, ಹುಕ್ಕಾ, ಆಭರಣ ಪೆಟ್ಟಿಗೆ, ತಟ್ಟೆ, ಹೂವನ್ನು ಇಡುವ ಹೂಜಿ, ಅಂಗಿಯ ಗುಂಡಿಗಳು, ಪೇಪರ ಕತ್ತರಿ, ಪೇಪರ ಕ್ಲಿಪ್‌ಗಳು, ತಟ್ಟೆಗಳು ಅಜಂತಾಕಲೆಯ ಮಾದರಿಯ ಹುಕ್ಕಾ, ಫಿಂಗರ್ ಮುಂತಾದ ವಸ್ತುಗಳನ್ನು ಬಹಳ ಸುಂದರವಾಗಿ ರಚಿಸಿದ್ದಾರೆ.

ಮಾಣಿಕಪ್ಪನವರು ಜರೆ ನಿಶಾನೆ, ಮನುವದಕರಿಕಲೆ ಕೌಶ್ಯಲವನ್ನು ಪಡೆದಿದ್ದಾರೆ. ಫುಲಜರಿ ಕೆಲಸ ಮೇಜಿನ ದೀಪದ ಮೇಲೆ, ತಟ್ಟೆಗಳ ಮೇಲೆ, ನವಿಲಿನ ಗರಿಗಳ ಮೇಲೆ, ನಳ ದಮಯಂತಿಯ ಪ್ರೇಮಕಥೆಯ ಸನ್ನಿವೇಶಗಳನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಇದು ಅಲ್ಲದೆ ಕಪುತೆ ಕಲೆಯಲ್ಲಿ ಕೂಡ ಕೌಶ್ಯಲವನ್ನು ಪಡೆದಿದ್ದರು. ಈ ಕಲೆಯನ್ನು ಆಯುಧಗಳ ಮೇಲೆ ಅಂದರೆ ಕತ್ತಿ (ತಲವಾರ) ಮತ್ತು ಕಂಬದ ಮೇಲೆ ಕಬ್ಬಿಣದ ವಸ್ತುಗಳ ಮೇಲೆ ಕೆತ್ತನೆ ಮಾಡಿ ಇದಕ್ಕೆ ಬೆಳ್ಳಿ ಮತ್ತು ಬಂಗಾರವನ್ನು ಲೇಪಿಸುವ ಕಾರ್ಯ ಮಾಡುತ್ತಿದ್ದರು. ಇವರು ತಯಾರಿಸಿದ ಬಿದರಿ ಕಲೆಯ ವಸ್ತುಗಳು ಹೈದರಾಬಾದ್, ಮೈಸೂರು, ಬೆಂಗಳೂರು, ಮುಂಬಯಿ, ನವದೆಹಲಿ ವಸ್ತುಸಂಗ್ರಹಾಲಯದಲ್ಲಿವೆ.

ಭಾರತದ ಪ್ರಥಮ ರಾಷ್ಟ್ರಪತಿಗಳಾದ ಡಾ.ರಾಜೇಂದ್ರ ಪ್ರಸಾದ ಅವರು ಕ್ರಿ.ಶ. ೧೯೫೦ ರಲ್ಲಿ ಬೀದರಿಗೆ ಬಂದಾಗ ಮಾಣಿಕಪ್ಪನವರ ಕಾರ್ಖಾನೆಗೆ ಭೇಟಿಕೊಟ್ಟು ಅವರಿಗೆ ಆಶೀರ್ವಾದ ಮಾಡಿದ್ದರು. ೧೯೭೩ರಲ್ಲಿ ಇವರಿಗೆ ರಾಜ್ಯಪ್ರಶಸ್ತಿ ಬಿದರಿ ಕಲೆಗಾಗಿ ದೊರಕಿತು. ೧೯೮೦ರಲ್ಲಿ ಕರ್ನಾಟಕ ಸರಕಾರವು ಜನಪದ ಕ್ಯಾಲಂಡರಿನಲ್ಲಿ ಬಿದರಿ ಕರಕುಶಲ ವಸ್ತುಗಳನ್ನು ಚಿತ್ರಿಸಿದ್ದಾರೆ. ೧೯೮೬ ಕೇಂದ್ರ ಸರಕಾರದ ಮಂತ್ರಿಗಳಾದ ಜನಾರ್ಧನ ಪೂಜಾರಿ ಅವರು ಅವರ ಕಲೆಯನ್ನು ಕಂಡು ಮೆಚ್ಚಿ ಕೇಂದ್ರ ಸರಕಾರದಿಂದ ಆರ್ಥಿಕ ಸಹಾಯ ದೊರಕಿಸಿ ಕೊಟ್ಟರು. ೧೯೮೫ರಲ್ಲಿ ತ್ರಿವೇಂದ್ರಂ, ದೆಹಲಿ, ಮೈಸೂರು ದಸರಾ ಪ್ರದರ್ಶನ, ಬೆಂಗಳೂರು, ಮುಂಬಯಿ, ಮದ್ರಾಸ ಮುಂತಾದ ನಗರಗಳಲ್ಲಿ ಬಿದರಿ ಕಲೆ ವಸ್ತುಪ್ರದರ್ಶನ ನಡೆಸ

ಲಾಯಿತು. ಧರ್ಮಸ್ಥಳದ ಧರ್ಮಾಧಿಕಾರಿಗಳಾದ ವಿರೇಂದ್ರ ಹೆಗ್ಗಡೆಯವರು ಮಾಣಿಕಪ್ಪ ನವರಿಗೆ ಪ್ರಶಸ್ತಿ ಪ್ರಧಾನ ಮಾಡಿದ್ದಾರೆ. ಮೊದಲನೆಯ ಬಹುಮಾನ ಹಾಗೂ ಪ್ರಮಾಣ ಪತ್ರವನ್ನು ಪ್ರಧಾನಿಸಿದರು. ಇವರ ಬಿದರಿ ಕಲೆಯನ್ನು ಕುರಿತು ಸಿ.ಸಿ.ಪಿ. ದೆಹಲಿ ೧೯೭೭ರಲ್ಲಿ ಹಾಗೂ ೧೯೮೪ರಲ್ಲಿ ಮದ್ರಾಸದ ಇಂಡಿಯನ್ ಎಕ್ಸಪ್ರೆಸ್ ದಿನ ಪತ್ರಿಕೆಯಲ್ಲಿ ಲೇಖನಗಳು ಪ್ರಕಟ ವಾದವು.

ಅವರು ಸಿದ್ಧಪಡಿಸಿದ ಪ್ರಸಿದ್ಧ ಬಿದರಿ ಕಲಾಕೃತಿಗಳ ಚಿತ್ರಗಳನ್ನು ನೋಡಬಹುದು. ಮತ್ತು ಆ ವಸ್ತುಗಳ ವಿವರಣೆಯನ್ನು ಇಲ್ಲಿ ಮಾಡಲಾಗಿದೆ.

**ಮಾಣಿಕಪ್ಪನವರ ಬಿದರಿ ಕಲಾಕೃತಿಗಳು**

**೧. ದೊಡ್ಡ ಹೂದಾನಿ**

ಈ ಹೂದಾನಿಯು ದೊಡ್ಡದಾದ ಆಕಾರದಲ್ಲಿದೆ. ಇದನ್ನು ತಯಾರಿಸಲು ೨೨ ದಿನಗಳನ್ನು ತಗೆದುಕೊಂಡರು. ಹೂದಾನಿಯ ಕೆಳಭಾಗದಲ್ಲಿ ಎಲೆಗಳ ಸರಮಾಲೆಯು ಬೆಳ್ಳಿಯ ತಂತಿಯಲ್ಲಿ ನಿರ್ಮಾಣಗೊಂಡಿದೆ. ಹೂದಾನಿಯ ನಡುವೆ ಎಲೆಗಳನ್ನು ಸುರಳಿ ಆಕಾರದಲ್ಲಿ ಕಾಣಬಹುದು. ಇಲ್ಲಿಯ ಬಿದರಿ ಕಲೆಯು ಅತೀ ಸೂಕ್ಷ್ಮವಾದ ರೇಖೆಗಳಿಂದ ಕೂಡಿದೆ. ಕುತ್ತಿಗೆಯ ಹಿಂಭಾಗದಲ್ಲಿ ಸುಂದರವಾದ ಹೂವಿನ ಸರಪಳಿ ನೋಡಬಹುದು. ಕುತ್ತಿಗೆ ಮುಂಭಾಗದಲ್ಲಿ ಹೂವಿನ ದಳಗಳ ಆಕಾರದ ನಕ್ಷೆಗಳಿವೆ. ಚೌಕಾಕಾರದ ಹಾಗೂ ಗೋಲಾಕಾರದಲ್ಲಿಯೂ ರೇಖೆಗಳ ಸೂಕ್ಷ್ಮತೆಯನ್ನು ಕಾಣಬಹುದು. ಈ ಹೂದಾನಿಯ ಮೌಲ್ಯ ೫೦೦೦ದಿಂದ ೬೦೦೦ ರೂ.ವರೆಗೆ ಆಗಬಹುದು.

**೨. ಸಣ್ಣ ಹೂದಾನಿ**

ಈ ಹೂದಾನಿಯ ಕೆಳಭಾಗದಲ್ಲಿ ಕರಕುಶಲತೆಯನ್ನು ಕಾಣಬಹುದು. ಇದರ ಹೊಟ್ಟೆಯ ಹಿಂಭಾಗದಲ್ಲಿ ಚೌಕ್ ಡಿಜೈನ್ ಮಾಡಲಾಗಿದೆ. ಹೂದಾನಿಯ ಮಧ್ಯಭಾಗದಲ್ಲಿ ನಾಲ್ಕು ಎಲೆಯ ಆಕಾರದ ಮನೆಗಳನ್ನು ಗುರುತಿಸಿ ಅದರ ಮಧ್ಯದಲ್ಲಿ ಬಿಚ್ಚಿದ ಕಮಲದ ಹೂವಿನ ಆಕೃತಿ ಇದೆ. ಎಲೆಗಳ ಸರಪಳಿ ಮತ್ತು ಚಿಕ್ಕ ಚಿಕ್ಕ ಹೂವುಗಳನ್ನು ಅರ್ಧರೂಪದಲ್ಲಿ ಚಿತ್ರಿಸಿದ್ದಾರೆ. ಮುಂಭಾಗದ ಬಾಯಿ ಸ್ವಲ್ಪ ಅಗಲವಾಗಿದ್ದು ಅದರ ಮೇಲೆ ಜ್ಯಾಮಿತಿ ಹೂವಿನ ದಳಗಳನ್ನು ಕತ್ತರಿಸಿ ಒಂದೊಂದು ಕೂಡಿಸಿದ ಹಾಗೆ ಕೂಡಿಸಿದ್ದಾರೆ. ನೋಡಲು ಬಹಳ ಸುಂದರವಾಗಿ ಕಾಣುತ್ತದೆ. ಇಂತಹ ಹೂದಾನಿಯನ್ನು ಆರು ದಿವಸಗಳಲ್ಲಿ ತಯಾರು ಮಾಡುತ್ತಾರೆ. ಇದನ್ನು ತಯಾರಿಸಲು ಸುಮಾರು ೧೨೦೦ ರಿಂದ ೧೫೦೦ ರೂ. ವೆಚ್ಚ ಬರುತ್ತದೆ.

### ೩. ಸಣ್ಣಪೆಟ್ಟಿಗೆ

ಈ ಸಣ್ಣ ಪೆಟ್ಟಿಗೆ ಆಯತಾಕಾರದಲ್ಲಿದೆ. ಪೆಟ್ಟಿಗೆಯ ಮೇಲ್ಭಾಗದಲ್ಲಿ ಮೂರು ಗೋಲಾಕೃತಿಯಲ್ಲಿ ಆಲದ ಎಲೆ ರೇಖೆಯಿಂದ ಕೂಡಿದೆ. ಚಿಕ್ಕ ಚಿಕ್ಕ ಎಲೆಗಳು ಇವೆ. ಪೆಟ್ಟಿಗೆಯ ಮೇಲ್ಭಾಗದಲ್ಲಿ ಸುತ್ತಲೂ ಚೌಕಡಿಜೈನ ಮಾಡಿದೆ. ಗೋಲಾಕೃತಿಯ ಸುತ್ತ ರೇಖೆಯ ಡಿಜೈನ್ ಇದೆ.

ಇದರ ಉದ್ದ ೧೦ ಇಂಚು ಅಗಲ ೪ ಇಂಚು ಎತ್ತರ ೩ ಇಂಚು ಇದೆ. ಇದರ ಒಟ್ಟು ಬೆಲೆ ೬೦೦ ರಿಂದ ೮೦೦ ರೂ.ವರೆಗೆ ಇದೆ. ಇದು ಪೂರ್ತಿಯಾಗಬೇಕಾದರೆ ಸುಮಾರು ನಾಲ್ಕು ದಿವಸ ಬೇಕಾಗುತ್ತದೆ. ಈ ಪೆಟ್ಟಿಗೆಯನ್ನು ಅವರ ಅಂಗಡಿಯಲ್ಲಿ ಇಂದೂ ಕಾಣಬಹುದು.

### ೪. ದೊಡ್ಡಪೆಟ್ಟಿಗೆ


ಈ ದೊಡ್ಡಪೆಟ್ಟಿಗೆಯ ರೂಪ ಆಯತಾಕಾರ ಇದೆ.  ಉದ್ದ ೭ ಅಂಗುಲ, ಅಗಲ ೪ ಅಂಗುಲ ಇದೆ. ಇದರ ಎತ್ತರ ಎರಡೂವರೆ ಅಂಗುಲ ಇದೆ. ಇದರ ಮೇಲ್ಭಾಗದಲ್ಲಿ ನೂರಾರು ಚಾಕುಗಳನ್ನು ಗುರುತಿಸಿ ಅದರಲ್ಲಿ ನಾಲ್ಕು ಒಳಭಾಗಗಳನ್ನು ಗುರುತಿಸಿದ್ದಾರೆ. ಉಳಿದ ಭಾಗ ಬೆಳ್ಳಿಯ ರೇಖೆ ಹಾಗೂ ರೇಖೆಗಳಿಂದ ಪೆಟ್ಟಿಗೆಯ ಮೇಲ್ಭಾಗ ಮತ್ತು ಹೊರ ಭಾಗದಲ್ಲಿ ಡಿಜೈನ್ ಇದೆ. ಇದನ್ನು ತಯಾರಿಸಲು ಬರುವ ವೆಚ್ಚ ೬೦೦ ರೂ. ಇರುತ್ತದೆ. ಈ ಪೆಟ್ಟಿಗೆಯು ಮಾಣಿಕಪ್ಪನವರ ಮಳಿಗೆಯಲ್ಲಿ ನೋಡಲು ದೊರಕುತ್ತದೆ.

### ೨ . ಮಹಮ್ಮದ ಶರೀಫ

ಬಿದರಿಕಲೆಯ ಪ್ರಖ್ಯಾತ ಕಲಾವಿದರಲ್ಲಿ ಮಹಮ್ಮದ ಶರೀಫ್ ಒಬ್ಬರು. ಹಲವಾರು ರಾಜ್ಯ ಪ್ರಶಸ್ತಿ ವಿಜೇತ ಕಲಾಕಾರರಲ್ಲಿ  ಮಹಮ್ಮದ್ ಶರೀಫ್ ಅವರೂ ಒಬ್ಬರು. ಇವರು ೧೯೩೭ರಲ್ಲಿ ಬೀದರಿನಲ್ಲಿ ಜನ್ಮತಾಳಿದರು. ಇವರ ತಂದೆ ಸುಲ್ತಾನ ಸಾಹೇಬ ಶರೀಫ್. ಇವರು ಬಡತನದ ಬೇಗೆಯಲ್ಲಿ ನರಳಿ ನೊಂದವರು. ಇಂಥ ಬಡತನದ ಕುಟುಂಬದಲ್ಲಿ ಪ್ರಖ್ಯಾತ ಕಲಾಕಾರರಾಗಿ ಬೆಳೆದು ನಿಂತದ್ದು ತುಂಬಾ ಸಾಹಸದ ಕಾರ್ಯವೇ ಸರಿ. ಇವರು ಬಿದರಿ ಕಲೆಯ ಮೂಲ, ಆಳ, ಅಗಲಗಳನ್ನೆಲ್ಲ ಅಮೂಲಾಗ್ರವಾಗಿ ಕಂಡುಕೊಂಡ ಪ್ರವೀಣರು. ಶರೀಫ್ ಅವರು ಭಾರತದ ಸ್ವತಂತ್ರ ಸಂಗ್ರಾಮದಲ್ಲಿ, ಹೈದರಾಬಾದ ನಿಜಾಮರ ಆಡಳಿತದ ಪ್ರದೇಶದಲ್ಲಿ ಬಿದರಿಕಲೆಯ ಮೊಗ್ಗಾಗಿ, ಹೂವಾಗಿ ಅರಳಿದರು. ಬೀದರದಲ್ಲಿ ಅಬ್ದುಲ್ ಗಫರ್ ಎಂಬುವವರು ಮಹಮ್ಮದ್ ಶರೀಫರಿಗೆ ಆಸರೆ ಕೊಟ್ಟರು. ಅಲ್ಲಿಯೇ ಅವರು ತಮ್ಮ ೧೫ನೆಯ ವಯಸ್ಸಿನಲ್ಲಿ ಬಿದರಿ ಕಲೆಯನ್ನು ಕರಗತ ಮಾಡಿಕೊಂಡರು. ಮಹಮ್ಮದ ಶರೀಫರು ಮೂರು ಬಿದರಿ ಕರಕುಶಲ ಕಲೆಯಲ್ಲಿ ಪರಿಣತಿಯನ್ನು ಹೊಂದಿ



ಮೂರ್ತಿಗಳು



ಬಿದರಿ ತಟ್ಟೆ

ತಾವೇ ತಯಾರಿಸಿದ ಬಿದರಿ ವಸ್ತುಗಳನ್ನು ಬೆಂಗಳೂರಿನಲ್ಲಿ ಪ್ರದರ್ಶಿಸಿದರು. ಇದು ಅಲ್ಲದೆ ಮದ್ರಾಸ್, ಮಂಗಳೂರು, ಕನ್ಯಾಕುಮಾರಿ, ಬೆಳಗಾವಿ, ಕಲ್ಕತ್ತಾ ಭುವನೇಶ್ವರ, ಪಾಂಡಿಚೇರಿ, ರಾಜಸ್ಥಾನ ಅಲ್ಲದೆ ಇನ್ನೂ ಹಲವಾರು ಕಡೆಗಳಲ್ಲಿ ಹೋಗಿ ತಮ್ಮ ಬಿದರಿ ಕಲಾಕೃತಿಯ ಪರಿಚಯ ಹಾಗೂ ಪ್ರಚಾರ ಮಾಡಿದ್ದಾರೆ.

ಶರೀಫ್ ಅವರು ಮಾನವರ ಇಸ್ಥಾರ್ಥಗಳನ್ನು ತಮ್ಮ ಒಳಗಣ್ಣಿನಿಂದ ಕಂಡು, ಅರ್ಥಮಾಡಿ ಕೊಂಡು ಇಂದಿನ ಹೊಸ ಯುಗದ ಜನರನ್ನು ಆಕರ್ಷಿಸುವಂತಹ ಕಲಾಕೃತಿಗಳನ್ನು ನಿರ್ಮಿಸಿ ಮಾರಾಟ ಮಾಡುತ್ತಾರೆ. ಅವರು ತಯಾರಿಸಿದ ಕೃತಿಗಳಲ್ಲಿಯೇ ಅತೀ ಖ್ಯಾತಿಯನ್ನು ಪಡೆದ ಕಲಾಕೃತಿಗಳೆಂದರೆ ಗೋಲಾಕಾರದ ಸೂರಾಯಿ, ಫುಲ್‌ಜಡಿ, ಮಹತಾಜ ಮುಂತಾದವುಗಳು. ಇವರ ಕಲೆಯನ್ನು ಮೆಚ್ಚಿ ಕರ್ನಾಟಕ ಸರ್ಕಾರವು ೧೯೭೮ರಲ್ಲಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿತು. ಮಾಜಿ ಮುಖ್ಯಮಂತ್ರಿ ಶ್ರೀ ದೇವರಾಜ ಅರಸರವರಿಂದ ಪ್ರಶಸ್ತಿ ಪಡೆದರು.

### ಮಹಮ್ಮದ ಶರೀಫ್ ಬಿದರಿ ಕಲಾಕೃತಿಗಳು

### ಹೂದಾನಿ

ಈ ಹೂದಾನಿಯನ್ನು ಎಂಟು ದಿವಸದಲ್ಲಿ ತಯಾರಿಸಲಾಗಿದೆ. ಹೂದಾನಿಯ ತಳಭಾಗದಲ್ಲಿ ಬೆಳ್ಳಿಯಿಂದ ತುಂಬಿದ ಜ್ಯಾಮಿತಿಕ ನಕ್ಷೆಯ ಚಿತ್ರವಿದೆ. ಹೂದಾನಿಯ ಮಧ್ಯಭಾಗ ಗೋಲಾಕೃತಿಯು ಸ್ವಲ್ಪ ಉದ್ದವಿದ್ದು, ಅದರಲ್ಲಿ ಉಬ್ಬು ತಗ್ಗು ಹಾಗೆ ಹತ್ತಾರು ಕಾಲಂ ರಚಿಸಿ ಅದರಲ್ಲಿ ಹೂವು ಎಲೆಗಳಿಂದ ಕೂಡಿದ ನಕ್ಷೆಯ ಚಿತ್ರವಿದೆ. ಮಧ್ಯಭಾಗದ ಮುಂದಿನ ತುದಿಯಲ್ಲಿ ಸ್ವಲ್ಪ ಉಬ್ಬವಿದೆ. ಅದರ ಮೇಲೆ ರೇಖೆಗಳಿಂದ ತುಂಬಿದ ನಕ್ಷೆಯಿದೆ. ರೇಖಾನಕ್ಷೆಯನ್ನು ಬಹಳ'ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಕುತ್ತಿಗೆಯ ನಡುವಿನ ಉದ್ದನೆಯ ಭಾಗದಲ್ಲಿ ನಾಲ್ಕು ಕಾಲಂ ಮಾಡಿಕೊಂಡು ಅದರಲ್ಲಿ ಬೆಳ್ಳಿಯಿಂದ ತುಂಬಿದ ಹೂವು ಎಲೆಗಳಿಂದ ಕೂಡಿದ ನಕ್ಷೆಯ ಚಿತ್ರವಾಗಿದೆ. ಹೂದಾನಿಯ ಮೇಲ್ತುದಿಯ ಸ್ವಲ್ಪ ಕೆಳಭಾಗದಲ್ಲಿ ಸೂಕ್ಷ್ಮವಾದ ರೇಖೆಗಳ ನಕ್ಷೆಯನ್ನು ಚಿತ್ರಿಸಿದೆ. ಮೇಲ್ತುದಿಯ ಭಾಗದಲ್ಲಿ ಜ್ಯಾಮಿತಿಕ ನಕ್ಷೆಯನ್ನು ಚಿತ್ರಿಸಿದೆ. ಈ ಹೂದಾನಿಯ ಬೆಲೆ ಸುಮಾರು ೫೦೦೦ ರೂ.ಗಳಾಗಬಹುದು.

### ಆನೆ

ಬಿದರಿ ಕರಕುಶಲ ಕಲೆಯಲ್ಲಿ ಆನೆ ತಯಾರಿಸಿದೆ. ಇದು ಐದು ಇಂಚು ಎತ್ತರವಿದ್ದು, ಇದನ್ನು ಒಂದು ದಿವಸದಲ್ಲಿ ತಯಾರು ಮಾಡಬಹುದು. ಇದರ ಬೆನ್ನಿನ ಮೇಲ್ಭಾಗದ ಮೇಲೆ ಬಟ್ಟೆ ಹೊದಿಕೆ ಹಾಕಿದ ಹಾಗೆ ಬೆಳ್ಳಿಯ ತಂತಿಯಿಂದ ಇನ್‌ಲೇ ಮಾಡಿದೆ. ಅದರ ಮಧ್ಯ ಭಾಗದಲ್ಲಿ ಎಲೆಯ ಚಿತ್ರದ ನಕ್ಷೆಯನ್ನು ರಚಿಸಿದ್ದಾರೆ. ಈ ವಸ್ತುವಿನ ಬೆಲೆ ೧೦೦ ರೂ. ಆಗಿರುತ್ತದೆ.

## ಎಲೆ

ಈ ಎಲೆಯ ಅಗಲ ಮೂರು ಇಂಚು ಇದೆ. ಇದರ ಮಧ್ಯಭಾಗದಲ್ಲಿ ಹೂವು, ಎಲೆಗಳಿಂದ ಕೂಡಿದ ಚಿತ್ರ ಇರುತ್ತದೆ. ಈ ಕಲೆಯನ್ನು ತಯಾರಿಸಲು ಒಂದು ದಿವಸ ಬೇಕಾಗುತ್ತದೆ.

## ಚಾಕು

ಬಿದರಿ ಕರಕುಶಲಕಲೆಯಲ್ಲಿ ಚಾಕು ತಯಾರಿಸಿದ್ದಾರೆ. ಅದರ ಹಿಡಿಕೆಯ ಭಾಗದಲ್ಲಿ ಓರ್ವ ಹೆಣ್ಣಿನ ಮುಖದ ಭಾಗದ ಹೊದಿಕೆ ಇದೆ. ಇದು ನೋಡಲು ಸುದರವಾಗಿದೆ. ಚಾಕುವಿನ ಹೊರಭಾಗವೆಲ್ಲ ಸೂಕ್ಷ್ಮವಾಗಿ ರೇಖಾಚಿತ್ರಗಳನ್ನು ಬೆಳ್ಳಿಯಿಂದ ಗುರುತಿಸಿ ಚಿತ್ರಿಸಿದ್ದಾರೆ. ಇದನ್ನು ತಯಾರಿಸಲು ಒಂದು ದಿನ ಮಾತ್ರ ಸಾಕು.

## ಉಮರಖಯಾಂನ ಹೂಜಿಗಳು

ಬಿದರಿಕಲೆಯಲ್ಲಿ ಮಹಮ್ಮದ ಶರೀಫ್ ಅವರು ತಯಾರಿಸಿದ ಈ ಉಮರಖಯಾಂ ಕರಕುಶಲಪಾತ್ರೆ ಒಂದು ಅದ್ಭುತ ಪಾತ್ರೆಯಾಗಿದೆ. ಇದನ್ನು ತಯಾರಿಸಲು ಸುಮಾರು ಇಪ್ಪತ್ತು ದಿನಗಳು ಬೇಕಾಗುತ್ತವೆ. ಇದರ ಎತ್ತರ ೨೨ ಇಂಚು ಇದೆ. ಈ ಉಮರಖಯಾಂ ಮೇಲ್ಭಾಗದ ರೂಪ ಮಸೀದಿಯ ಮೇಲ್ಭಾಗದ ಆಕೃತಿಯ ಹಾಗಿದೆ. ಅದರ ನಡುವಿನ ಭಾಗದಲ್ಲಿ ಸೂರು ಎಲೆಗಳ ದರ್ಶಿಗಳನ್ನು ಗುರುತಿಸಿ ಅದರಲ್ಲಿ ಒಂದೊಂದು ರೇಖೆಯನ್ನು ಬೆಳ್ಳಿಯ ತಂತಿಗಳನ್ನು ಒಳಹಾಕಿ ರಚಿಸಿದ್ದಾರೆ. ದಳಗಳ ಸುತ್ತಲೂ ಎಲೆಗಳಿಂದ ಕೂಡಿದ ನಕ್ಷೆಯ ಚಿತ್ರವಾಗಿದೆ. ಮೇಲ್ತುದಿಯ ಎರಡನೆಯ ಭಾಗದಲ್ಲಿ ಜ್ಯಾಮಿತಿಕ ನಕ್ಷೆಯಿದೆ. ಮೂರನೆಯ ಭಾಗದಲ್ಲಿ ಏಳೆಂಟು ಚೌಕಾಕೃತಿ ರಚಿಸಿ ಉಳಿದಭಾಗವೆಲ್ಲ ಅಗಲವಾಗಿ ರೇಖೆಯ ಹಾಗೆ ಬೆಳ್ಳಿಯ ತಾರುಗಳನ್ನು ಇನ್‌ಲೇ ಮಾಡಿ ತಯಾರಿಸಿದ್ದಾರೆ. ನಾಲ್ಕನೆಯ ಭಾಗದಲ್ಲಿ ಹೂ, ಎಲೆ ರಚಿಸಿ ರೇಖೆಗಳ ರೂಪದಲ್ಲಿ ರಚಿಸಿದ್ದಾರೆ. ಐದನೆಯ ಭಾಗದಲ್ಲಿ ಜ್ಯಾಮಿತಿಕ ರೇಖೆಗಳ ಹಾಗೆ ರಚಿಸಿ ಬೆಳ್ಳಿಯ ತಾರುಗಳಿಂದ ಇನ್‌ಲೇ ಮಾಡಿ ರಚಿಸಿದ್ದಾರೆ. ಇದರ ಮೇಲ್ತುದಿಯು ದಪ್ಪವಿದ್ದು ಕೆಳಭಾಗದಲ್ಲಿ ಚಿಕ್ಕದಾಗಿದೆ ಮತ್ತು ನಡುವಿನ ಭಾಗ ಗೋಲಾಕೃತಿಯಾಗಿದೆ. ಇದರ ಮಧ್ಯಭಾಗದಲ್ಲಿ ಎಲೆ ಹೂಗಳು ಇವೆ. ಇನ್ನುಳಿದ ಭಾಗವೆಲ್ಲವೂ ಎಲೆ, ಹೂಗಳಿಂದ ಅಲಂಕೃತ ಮಾಡಿದ್ದಾರೆ. ಇದರ ತಳಭಾಗವು ಜ್ಯಾಮಿತಿಕ ರೇಖೆಯಿಂದ ಕೂಡಿದೆ. ಹಿಡಿಕೆಯು ಸುಂದರ ಶೈಲಿಯದ್ದಾಗಿದೆ. ಬಲ ತುದಿಯ  ನಡುವೆ ಕೊಳವೆ ರಚಿಸಿದ್ದಾರೆ. ಇದರ ಬೆಲೆ ಸುಮಾರು ೪೦೦ ರೂ.ಗಳಾಗಿರಬಹುದು.

## ೩. ಸೈಯ್ಯದ್‌ಷಾ ರಷೀದ ಅಹ್ಮದ ಖಾದ್ರಿ

ರಾಷ್ಟ್ರ ಪ್ರಶಸ್ತಿ ವಿಜೇತ ಖಾದ್ರಿ ಬಿದಿರಿಕಲೆಗೆ ಇನ್ನೊಂದು ಹೆಸರು ಎಂದರೆ ತಪ್ಪಾಗಲಿಕ್ಕಿಲ್ಲ. ೪೩ ವರ್ಷ ವಯಸ್ಸಿನ ಈ ಬಿದರಿ ಕಲೆಯಲ್ಲಿ ಮಾಡಿದ ಸಾಧನೆ ಅಗಾಧ.

ಇವರ ತಂದೆ ಹೆಸರು ಶಹಾ ಮುಸ್ತುಫಾ ಖಾದರಿ ಮತ್ತು ಅವರ ಗುರು ಶ್ರೀ ಗುಲಾಮ ಸತ್ತಾರ ಸಿದ್ದುಕಿ.

ಕೇವಲ ಪದವಿ ಪೂರ್ವಕಾಲೇಜಿನವರೆಗೆ ಶಿಕ್ಷಣ. ನಂತರ ತನ್ನ ವಂಶಪಾರಂಪರ್ಯ ಬಿದರಿ ಕಲೆಯನ್ನು ಚಿಕ್ಕಂದಿನಿಂದಲೇ ಕಲಿತುಕೊಂಡು ಬಂದರು. ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಪ್ರೋತ್ಸಾಹದಿಂದ ಹೊಸ ಹೊಸ ಪ್ರಯೋಗಗಳನ್ನು ಕೈಕೊಂಡ ಅವರು ಬಿದರಿ ಕಲೆಯನ್ನು ಜನಪ್ರಿಯಗೊಳಿಸಿದರು.

ಸಯ್ಯದಖಾದ್ರಿ ಅವರ ಬಿದರಿ ಕರಕುಶಲ ಸಾಧನೆಗಾಗಿ ೧೯೮೪ರಲ್ಲಿ ರಾಜ್ಯ ಪ್ರಶಸ್ತಿ ದೊರಕಿತು. ೧೯೮೬ರಲ್ಲಿ ಭಾರತ ಸರಕಾರ ನವದೆಹಲಿಯಲ್ಲಿ "ಅಪನಾ ಉತ್ಸವ" ಆಚರಿಸಿದಾಗ ಅವರಿಗೆ ಬಿದರಿಕಲೆಯ ವಸ್ತುಗಳನ್ನು ಪ್ರದರ್ಶಿಸಲು ಅವಕಾಶ ದೊರಕಿತು. ೧೯೮೭ರಲ್ಲಿ ಅಮೇರಿಕಾದ ಬೋಸ್ಟನ್‌ನಲ್ಲಿ ನಡೆದ ವಿಜ್ಞಾನ ಮೇಳದಲ್ಲಿ ಭಾಗವಹಿಸಲು ಅವಕಾಶ ದೊರಕಿತು. ೧೯೮೬ರಲ್ಲಿ ಅವರಿಗೆ ತಮ್ಮ ಬಿದರಿ ಕಲೆಯ ವಸ್ತುಗಳನ್ನು ಪ್ರದರ್ಶಿಸಲು ಅವಕಾಶ ದೊರಕಿತು. ೧೯೮೬ರಲ್ಲಿ ಅವರಿಗೆ ತಮ್ಮ ಬಿದರಿ ಕಲೆಯ ವಸ್ತುಗಳನ್ನು ಪ್ರದರ್ಶಿಸಲು ಅವಕಾಶ ದೊರೆಯಿತು.

ರಾಜ್ಯದ ಹಾಗೂ ರಾಷ್ಟ್ರದ ಹಲವಾರು ಕಡೆಗಳಲ್ಲಿ ಖಾದ್ರಿ ಅವರು ಬಿದರಿ ಕಲೆಯನ್ನು ಪ್ರದರ್ಶಿಸಿ ಜನಪ್ರಿಯಗೊಳಿಸಿದ್ದಾರೆ. ನಶಿಸುತ್ತಿರುವ ಈ ಕಲೆ ಶಾಶ್ವತವಾಗಿರುವಂತೆ ಮಾಡುವುದೇ ತಮ್ಮ ಗುರಿಯೆಂದು ಖಾದ್ರಿಯವರು ಹೇಳುತ್ತಾರೆ. ಅವರ ಪ್ರತಿಭೆಗೆ ಮತ್ತೊಂದು ಪುರಸ್ಕಾರ ಲಭಿಸಿತು. ೧೯೮೮ರಲ್ಲಿ ಅವರನ್ನು ರಾಷ್ಟ್ರೀಯ "ಮಾಸ್ಟರ್ ಕ್ರಾಫ್ಟ್‌ಮನ್" ಪ್ರಶಸ್ತಿಗೆ ಆಯ್ಕೆ ಮಾಡಲಾಯಿತು. ಬೀದರಿನ ಕಲಾವಿದರಿಗೆ ಈ ಗೌರವ ದೊರೆತಿರುವುದು ಮೊದಲ ಬಾರಿಗೆ ಎಂದು ಹೇಳಬಹುದು.

ಈ ಮೊದಲು ಬಿದರಿ ಕಲೆಯ ರಾಷ್ಟ್ರಪ್ರಶಸ್ತಿಯನ್ನು ಹೈದರಾಬಾದಿನ ಕಲಾವಿದರೊಬ್ಬರಿಗೆ ನೀಡಲಾಗಿತ್ತು. ಆದರೆ ಬಿದರಿ ಕಲಾವಿದನಿಗೆ ರಾಷ್ಟ್ರ ಪ್ರಶಸ್ತಿ ನೀಡಿರುವುದು ಬಿದರಿಕಲೆಗೆ ಸಂದ ಗೌರವವೆಂದು ಅವರು ಭಾವಿಸುತ್ತಾರೆ. ಖಾದ್ರಿಯವರು ಬಿದರಿ ಕಲೆಯಲ್ಲಿ ನಡೆಸಿರುವ ವಿನೂತನ ಪ್ರಯೋಗಗಳು ವಿಶ್ವಮಾರುಕಟ್ಟೆಯಲ್ಲಿ ಅಪಾರ ಬೇಡಿಕೆಗಳಿಸಿವೆ.

### ೮. ಅವನತಿಯತ್ತ ಬಿದರಿ ಕಲೆ

ರಾಜ ಮಹಾರಾಜರ, ವಿದೇಶಿಯರ ಗೌರವಾದಾರಕ್ಕೆ ಪಾತ್ರವಾಗಿ ವಿಶ್ವದ ಗಮನ ಸೆಳೆದ ಬಿದ್ರಿಕಲೆ ಇದೀಗ ಅವನತಿಯತ್ತ ಸಾಗುತ್ತಿದೆ. ಸರಕಾರದ ನಿರ್ಲಕ್ಷ್ಯ, ಪ್ರೋತ್ಸಾಹದ ಕೊರತೆ, ಮಾರುಕಟ್ಟೆ ಸಮಸ್ಯೆ ಮತ್ತಿತರ ಕಾರಣಗಳಿಂದಾಗಿ ಇತಿಹಾಸ ಪ್ರಸಿದ್ಧ ಈ ಕಲೆ ಮತ್ತೆ ಇತಿಹಾಸ ಸೇರುವ ಹಂತದಲ್ಲಿದೆ. ಸದ್ಯ ಬೀದರನಗರದಲ್ಲಿ ಸುಮಾರು ೧೫೦ ಬಿದ್ರಿ ಕಲಾವಿದರಿದ್ದಾರೆ.

ಈ ಪೈಕಿ ೧೦೦ ಕಲಾವಿದರು ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದಲ್ಲಿ ನೊಂದಣಿ ಮಾಡಿ ಕೊಂಡಿದ್ದಾರೆ. ಇನ್ನುಳಿದ ಸುಮಾರು ೫೦ ಕಲಾವಿದರು ಖಾಸಗಿಯಾಗಿ ಬಿದ್ರಿ ಕಲಾಕೃತಿಗಳ ತಯಾರಿಕೆಯಲ್ಲಿ ತೊಡಗಿದ್ದಾರೆ. ಬೀದರ ನಗರದಲ್ಲಿರುವ ಬಿದ್ರಿ ಕಲಾವಿದರ ಒಕ್ಕೂಟವು ಸದ್ಯ ಬಿದ್ರಿ ಕಲಾವಿದರ ಕ್ಷೇಮಾಭಿವೃದ್ಧಿಗಾಗಿ ಯತ್ನಿಸುತ್ತಿದೆ. ಕಲಾವಿದರಿಗೆ ಈ ಸಂಘವು ನೆರವಾಗುತ್ತದೆ ಎಂದು ಒಕ್ಕೂಟದ ಅಧ್ಯಕ್ಷ ಮಹಮ್ಮದಲ್ಲೆ ಕೋದ್ದೀನ್ ಹೇಳುತ್ತಾರೆ.

ವಾಸ್ತವವಾಗಿ ಕಚ್ಚಾ ಪದಾರ್ಥಗಳಿಗಾಗಿ ನೀಡಲಾಗುವ ಅನುದಾನವು ೫ ಸಾವಿರ ರೂಗಳಿದೆ. ಅದನ್ನು ಹೆಚ್ಚಿಸಬೇಕೆಂಬ ಬೇಡಿಕೆ ಒಕ್ಕೂಟವು ಸರಕಾರದ ಮುಂದಿಟ್ಟಿತ್ತು. ಜೊತೆಗೆ ಸಹಾಯಧನವು ಹೆಚ್ಚಿಸುವ ಬೇಡಿಕೆಯನ್ನು ಸರಕಾರದ ಮುಂದಿಡಲಾಗಿತ್ತು. ಆದರೆ ಯಾವುದೇ ಸರಕಾರಗಳು ಈ ಬೇಡಿಕೆಯನ್ನು ಪುರಸ್ಕರಿಸಲಿಲ್ಲ ಹೀಗಾಗಿ ನಿಧಾನವಾಗಿ ಈ ಐತಿಹಾಸಿಕ ಕಲೆ ನೆಲೆ ಕಳೆದುಕೊಳ್ಳತೊಡಗಿತ್ತು.

ಮೊದಲೇ ಕಚ್ಚಾ ಪದಾರ್ಥಗಳ ಕೊರತೆ, ಅನುದಾನ ಕೊರತೆ ಮತ್ತು ಕಡಿಮೆ ಸಹಾಯ ಧನದಿಂದಾಗಿ ನರಳುತ್ತಿದ್ದ ಬಿದ್ರಿಕಲಾವಿದರು ಮತ್ತಷ್ಟು ಸಂಕಟಕ್ಕೆ ಒಳಗಾಗುವಂತಾಗಲು ಈಗಿನ ಸರಕಾರ ಕಾರಣವಾಗಿದೆ ಎಂದು ಮಾಜಿ ಶಾಶಕರು ಮಹಮ್ಮದ ಲೈಕೋದ್ದೀನ್ ಹೇಳುತ್ತಾರೆ.

ಇಲ್ಲಿರುವ ಬಹುತೇಕ ಕಲಾವಿದರು ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದಲ್ಲಿ ನೊಂದಣಿ ಹೊಂದಿರುವುದರಿಂದ ತಾವು ತಯಾರಿಸಿದ ಕಲಾಕೃತಿಗಳನ್ನು ಖಾಸಗಿಯಾಗಿ ಮಾಡು ವಂತಿಲ್ಲ. ಜೊತೆಗೆ ಕಚ್ಚಾಪದಾರ್ಥಗಳು ಸಾಕಷ್ಟು ತುಟ್ಟಿಯಾಗಿರುವುದರಿಂದ ಸ್ವತಃ ಖರೀದಿಸಿ, ತಯಾರಿಸಿ, ಮಾರಾಟ ಮಾಡುವ ಸಾಮರ್ಥ್ಯವೂ ಇಲ್ಲ. ಹೀಗಾಗಿ ಕಲಾವಿದರು ಸರಕಾರಕ್ಕೆ ಒಳಗಾಗಿದ್ದಾರೆ. ಕೆಲವೇ ಕಲಾವಿದರು ಮಾತ್ರ ಕಚ್ಚಾ ಪದಾರ್ಥ ಖರೀದಿಸಿ ಕಲಾಕೃತಿಗಳನ್ನು ತಯಾರಿಸಿ ಹೈದರಾಬಾದ ಮತ್ತೂರ ಕಡೆಗಳಲ್ಲಿ ಮಾರಾಟ ಮಾಡುತ್ತಿದ್ದಾರೆ.

ರಾಜ್ಯದಲ್ಲಿ ಸರಕಾರದಿಂದ ತಾತ್ಸಾರಕ್ಕೆ ಒಳಗಾಗಿರುವ ಬಿದ್ರಿ ಕಲಾವಿದರಿಗೆ ನೆರೆಯ ಆಂಧ್ರ ಸರಕಾರ ಕರೆದು ಆರಾಧಿಸುತ್ತಿದೆ. ಈ ಕಾರಣದಿಂದಾಗಿ ಈಗಾಗಲೇ ಹಲವು ಕಲಾವಿದರು ಹೈದರಾಬಾದಿಗೆ ಹೋಗಿದ್ದಾರೆ. ಸರಕಾರ ಕಲಾವಿದರ ಬಗ್ಗೆ ನಿರ್ಲಕ್ಷ ಮುಂದು ವರೆಸಿದ್ದೇ ಆದಲ್ಲಿ ಹೆಚ್ಚಿನ ಕಲಾವಿದರು ನಿಗಮದಿಂದ ಸಂಬಂಧ ಕಡಿದುಕೊಂಡು ಹೈದರಾಬಾದಿನಲ್ಲಿ ನೆಲೆಸುವ ಪ್ರಭಲ ಸಾಧ್ಯತೆಗಳಿವೆ ಎಂಬುದು ಪ್ರತ್ಯಕ್ಷ ಕಲಾವಿದರ ಸಂದರ್ಶನದಿಂದ ಅರಿತು ಕೊಂಡಿದ್ದಾಗಿದೆ.

ಸರಕಾರ ಐತಿಹಾಸಿಕ ಮಹತ್ವವುಳ್ಳ ಈ ಕಲೆಯನ್ನು ಮುಂದಿನ ಪೀಳಿಗೆಗೆ ಉಳಿಸಿ ಕೊಡು ವದರತ್ತ ಗಮನಹರಿಸುವಂತೆ ಕಾಣುತ್ತಿಲ್ಲ. ಪರಿಸ್ಥಿತಿ ಇದೇ ರೀತಿ ಮುಂದುವರೆದಲ್ಲಿ ಅತ್ಯಂತ ಉಚ್ಛ್ರಾಯ ಕಂಡ ಬಿದ್ರಿಕಲೆ ಈ ನೆಲದಿಂದಲೇ ಮರೆಯಾದರೂ ಅಚ್ಚರಿಪಡಬೇಕಿಲ್ಲ.

## ಪದಕೋಶ

**ಮೂಸ :** ಇದು ಒಂದು ರೀತಿಯ ಮಣ್ಣಿನ ಮಡಿಕೆ. ಅದು ಸಾಮಾನ್ಯ ಮಡಿಕೆಗಳಿಗಿಂತ ಭಿನ್ನವಾಗಿರುವುದು. ಇದನ್ನು ಮದ್ರಾಸ್ ಮುಂತಾದ ಕಡೆಗಳಲ್ಲಿ ತಯಾರಿಸಲಾಗುತ್ತದೆ. ಇದರ ವಿಶಿಷ್ಟ ಗುಣವೆಂದರೆ ಸತು+ತಾಮ್ರ ಎಷ್ಟೇ ಕಾಲಾವಧಿಯವರೆಗೂ ಅದರಲ್ಲಿ ಕುದಿಸಿದರೂ ಎಷ್ಟೂ ಅಂಟಿಕೊಳ್ಳಲಾರದು. ಆದರೆ ಕಾಯಿಸುವಾಗ ಒಂದು ಜಾಗ್ರತೆವಹಿಸ ಬೇಕಾಗುತ್ತದೆ. ಉಳಿದ ಮಡಕೆಗಳಂತೆ ಇದನ್ನು ಒಲೆಗೆ ತಗುಲದಂತೆ ಬೆಂಕಿಯ ಮೇಲಿಡ ಬೇಕಾಗುತ್ತದೆ. ಇದು ಬಿದರಿ ಕಲೆ ತಯಾರಿಕೆಯ ಅತಿ ಮುಖ್ಯವಾದ ಪರಿಕರವಾಗಿದೆ.

**ಭಾತಿ (ಭತ್ತಾ) :** ಇದು ಲೋಹ ಕರಗಿಸಲು, ಮೋಲ್ಡಿಂಗ್ ಮಾಡಲು ವೆಲ್ಡಿಂಗ್ ಏರಿಸಲು ಬೆಂಕಿಗಾಗಿ ಒಲೆಗೆ ಗಾಳಿ ಊದುವ ಸಲುವಾಗಿ ಬಳಸುವ ಸಾಧನ.

**ಪಟ್ಟಿ :** ಇದು ಕಬ್ಬಿಣದ್ದಾಗಿದ್ದು ಸತು, ತ್ರಾಮ ಕುದಿಸುವಾಗ, ಕಲೆಗಳ ರಂಗೇರಿಸುವಾಗ ವಸ್ತುಗಳನ್ನು, ದ್ರಾವಣಗಳನ್ನು ಅಲುಗಾಡಿಸಲು ಉಪಯೋಗವಾಗುವುದು.

**ಸೌಟು : (ಪ್ಯಾಲಾ)** ಕಬ್ಬಿಣದ್ದಾಗಿದ್ದು ಪಟ್ಟಿಯಂತೆ ಅಲುಗಾಡಿಸಲು ಹಾಗೂ ದ್ರಾವಣವನ್ನು ಪೇಟೆಯಲ್ಲಿ ಹೊಯ್ಯಲು ಉಪಯೋಗಿಸುವ ಸಾಧನ.

**ಎರಕದ ಪೆಟ್ಟಿಗೆ :** ಇದನ್ನು ಮೋಲ್ಡಿಂಗ್ ಮಾಡುವ ಸಲುವಾಗಿ ಉಪಯೋಗಿಸುವರು. ಬಿದರಿಕಲೆಯಲ್ಲಿ ಇನ್ನೂರಕ್ಕೂ ಹೆಚ್ಚಿನ ಎರಕದ ಪೆಟ್ಟಿಗೆಗಳಿವೆ. ಇದನ್ನು ಬಿಳಿಗಾರಿನಂಥ ಐದು ಕಿ.ಗ್ರಾಂ ಸೋಪಿನ ನುಣುಪಾದ ಮಣ್ಣಿನಲ್ಲಿ ನೂರು ಗ್ರಾಂ ರಾಂಜಾದೊಂದಿಗೆ ಜೌಡ ಲೆಣ್ಣೆಯಲ್ಲಿ ಕಲಿಸಿದಾಗ ಅದು ಸ್ವಲ್ಪ ಜಿಗುಟಾಗುತ್ತದೆ. ಅದನ್ನು ಎರಕದ ಪೇಟೆಯಲ್ಲಿ ಹಾಕಿ ಸರಿಯಾಗಿ ಕೂಡುವಂತೆ ಒತ್ತಿ ಮುಚ್ಚಳಿಕೆಯ ಇನ್ನೊಂದು ಪೇಟೆ ಅದರ ಮೇಲೆ ಮುಚ್ಚಿ ಬಾಯಿ ಇರುವ ಕಡೆಯಿಂದ ಕಾದ ದ್ರಾವಣ ಹೊಯ್ಯುತ್ತಾರೆ. ಹೀಗೆ ಎರಕದ ಪೇಟೆಯಲ್ಲಿ ಹೊಯ್ದ ದ್ರಾವಣ ಕ್ಷಣದಲ್ಲಿ ಛಾಪ ಒತ್ತಿದ ಕಲೆಯ ಆಕಾರ ತಾಳುತ್ತದೆ. ಎರಕದ ಪೆಟ್ಟಿಗೆ ಬಿದರಿ ಕಲೆಗೆ ರೂಪ ನೀಡುವ ಭೂಮಿಕೆ ನಿಭಾಯಿಸುತ್ತದೆ.

**ಅರಾ :** ಬಿದರಿ ಕಲಾವಸ್ತುಗಳನ್ನು ಮೋಲ್ಡಿಂಗ್ ಮಾಡಿದ ಮೇಲೆ ಆಕೃತಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಅದದ್ದನ್ನು ಕೊಯ್ಯುವ ಸಲುವಾಗಿ ಬಳಸುವ ಸಾಧನ.

**ಸೋಲ್ (ಫೈಲ್) :** ಬಿದರಿ ಕಲೆ ಮೋಲ್ಡಿಂಗ್ ಇತ್ಯಾದಿಗಳನ್ನು ಮಾಡಿದಾಗ ಆಕೃತಿ ಒರಟಾದುದ್ದನ್ನು ನುಣ್ಣಗೆ ತಿಕ್ಕಲು ಬಳಸುವ ಸಾಧನ. ಇದರಲ್ಲಿ ಐದಾರು ಆಕೃತಿಗಳಿವೆ.

**ಮೋಮ್ (ಮೇಣ) :** ೨೫೦ ಗ್ರಾಂ ಮೇಣ, ೨೫೦ ಗ್ರಾಂ ರಾಳ, ೧೦೦ ಗ್ರಾಂ ಕಟ್ಟಿಗೆಯ ಬೂದಿ, ೧೦೦ ಗ್ರಾಂ ಕಟ್ಟಿಗೆಯ ಬೂದಿ, ೧೦೦ ಗ್ರಾ ಒಳ್ಳೆಣ್ಣೆ ವಿಶ್ರಣ ಮಾಡಿ ಕುದಿಸುದಾಗ

ಉಂಟಾಗುವುದೇ ಮೋಮ್. ಹೀಗೆ ತಯಾರಿಸಿದ ಮೋಮ್ ಬಿದರಿಕಲೆಯ ತಯಾರಿಕೆಯಲ್ಲಿ ಅದರ ಪೊಳ್ಳು ಭಾಗದಲ್ಲೆಲ್ಲ ತುಂಬಿ ಕಲೆಗೆ ರಕ್ಷಣೆ ನೀಡುತ್ತಾರೆ. ಕಾರಣ ಕಲೆಯ ಮೇಲೆ ಚಿತ್ತಾರಗಳನ್ನು ಕೆತ್ತುವಾಗ ಅದು ಒಡೆಯಬಹುದೆಂಬ ಭಯವಿರುತ್ತದೆ. ಮೋಮ್ ಹೊರತಗೆಯಲು ಅದನ್ನು ಸ್ವಲ್ಪ ಕಾಯಿಸಿದರೆ ಮೋಮ್ ಹೊರಬರುತ್ತದೆ.

**ಚಾಕಿ :** ಫೈಲಿಂಗ್ ಮಾಡುವಾಗ, ಚಿತ್ರ ಕೆತ್ತುವಾಗ, ಬೆಳ್ಳಿ ಸೇರಿಸುವಾಗ ಬಿದರಿ ಕಲೆಗಳನ್ನು ಚಾಕಿ ಎಂಬ ಮಣೆಯ ಮೇಲಿಟ್ಟು ಕೆಲಸಮಾಡುತ್ತಾರೆ.

**ಪರಕಾರ :** ಕೈವಾರದಂತಿದ್ದು ಕಲಾ ವಸ್ತುಗಳ ಮೇಲೆ ಚಿತ್ರ ಬಿಡಿಸಲು ಉಪಯೋಗಿಸುವ ಒಂದು ಸಾಧನ.

**ಮಂಗನ :** ವಸ್ತುಗಳನ್ನು ಚಾಕಿಯಂತಹ ಮಣೆಯಮೇಲೆ ಕೂಡಿಸಿ ಚಿತ್ರ ಕೆತ್ತಲು, ಬೆಳ್ಳಿ ಕೂಡಿಸಲು ಉಪಯೋಗಿಸುವ ಒಂದು ಸಾಧನ.

## ಪದಕೋಶ

**ಹತೋಡಿ :** ವಸ್ತುಗಳಲ್ಲಿ ಚಿತ್ತಾರ ಕೆತ್ತುವಾಗ, ಬೆಳ್ಳಿ ಹುದುಗಿಸುವಾಗ ಕಲಮುಗಳಿಗೆ (ಪೆನ್ನು) ಕೈಯಿಂದ ಹೊಡೆಯುವ ಸಾಧನ. ಹತೋಡಿಗಳು ಭಿನ್ನ ಭಿನ್ನ ಮಾದರಿಯಲ್ಲಿರುತ್ತವೆ.

**ಕಲಮ್ :** ಕಬ್ಬಿಣದ ವಿವಿಧ ಆಕಾರದ ಕಲಮುಗಳು ವಸ್ತುವಿನಲ್ಲಿ ಚಿತ್ತಾರ ಕೆತ್ತಲು, ಬೆಳ್ಳಿ ಹುದುಗಿಸಲು ಸಹಾಯಕ ವಾಗುತ್ತವೆ.

**ತಾರಪಟ್ಟಿ :** ಇದು ವಿವಿಧ ಅಳತೆಯ ರಂಧ್ರಗಳುಳ್ಳ ಕಬ್ಬಿಣದ ಪಟ್ಟಿ. ಕಲೆಯಲ್ಲಿ ತಾರಿನ ರೂಪದ ಬೆಳ್ಳಿ ಕೂಡಿಸುವಾಗ, ಕೆತ್ತಿದ ಚಿತ್ತಾರದ ಅಳತೆಗೆ ತಕ್ಕಂತೆ ತಂತಿ ಚಿಕ್ಕ ರಂಧ್ರದಲ್ಲಿ ಹಾಕಿ ಎಳೆಯುತ್ತ ತೆಳುವಾಗಿ ಮಾಡಿಕೊಳ್ಳಲು ಬರುವಂತಹದಾಗಿದೆ.

**ರಂದಾ :** ಕಲೆಯಲ್ಲಿ ಬೆಳ್ಳಿ ಕೂಡಿಸಿದ ಮೇಲೆ ತಿಕ್ಕಿ, ಒರೆಸಿ ನುಣ್ಣಗೆ ಮಾಡಲು ಬಳಸುವ ಸಾಧನ. ಇದಕ್ಕೆ ಫೈಲಿಂಗ್ ಬಫಿಂಗ್ ಎಂತಲೂ ಕರೆಯುವರು.

**ಬರ್ಮಾ :** ಕಲೆಗಳಲ್ಲಿ ರಂದ್ರ ಹಾಕಲು ಬಳುಸುವ ಸಾಧನ.

**ಸಾವ :** ಬಿದರಿಕಲೆಗಳ ಪರಿಕರಗಳನ್ನು ಚೂಪುಗೊಳಿಸಲು ಇರುವಸಾಧನ.

**ಮಣ್ಣು :** ಬಿದರಿ ಕಲೆಗೆ ಕೇವಲ ಬೀದರ ಕೋಟೆಯಲ್ಲಿ ಲಭ್ಯವಿರುವ ರಂಗೇರಿಸುವ ವಿಶಿಷ್ಟ ಗುಣವುಳ್ಳ ಮಣ್ಣು ತಾಕತ್ತಿದೆ. ಕೋಟೆಯ ಹತ್ತಾರು ಸ್ಥಳಗಳಲ್ಲಿ ಈ ಮಣ್ಣು ಲಭ್ಯವಿದ್ದು, ಬಿದರಿ ಕಲೆಯ ಕುಶಲಕರ್ಮಿಗಳಿಂದ ಸರಳವಾಗಿ ಪತ್ತೆ ಹಚ್ಚಬಹುದಾಗಿದೆ. ಮಣ್ಣಿನಲ್ಲಿ ಉಪ್ಪು, ಖಾರ ಹಾಗೂ ವಿಶಿಷ್ಟ ರೀತಿಯ ವಾಸನೆಯಿಂದ ಕುಶಲಕರ್ಮಿಗಳು ಈ ಮಣ್ಣನ್ನು ಪತ್ತೆಹಚ್ಚುತ್ತಾರೆ. ಈ ಮಣ್ಣಿಗೆ ಬೆಳೆಯುವ ಗುಣವಿದೆ ಎಂಬುದು

ಕುಶಲಕರ್ಮಿಗಳ ನಂಬಿಕೆಯಾಗಿದೆ. ೫೦೦ ವರ್ಷಗಳಿಂದಲೂ ಬಳಸುತ್ತಿದ್ದ ಈ ಮಣ್ಣು ಇನ್ನು ಬರಿದಾಗುವ ಸೂಚನೆಗಳಿಲ್ಲದಿರುವುದೇ ಅವರ ಈ ನಂಬಿಕೆಗೆ ಮೂಲಕಾರಣವಾಗಿದೆ.

**ಪದಕೋಶ**

| | | |
|---|---|---|
| ಹುಕ್ಕಾ | - | ಸೇದುವ ಚಿಲುಮೆ |
| ಆಸ್ಟ್ರೇ | - | ಬೂದಿ ತಟ್ಟೆ |
| ಪಾನದಾನ | - | ಎಲೆ ತಟ್ಟೆ |
| ಫೂಲಝುಡಿ | - | ಹೂವಿನ ಗೊಂಚಲು |
| ಕಪ್ಪತೆ | - | ಆಯುಧಗಳಲ್ಲಿ ತುಂಬುವುದು |
| ತೆಹ ನಿಸಾನೆ | - | ಕ್ರಮಕ್ರಮವಾಗಿ ಆಂತರಿಕವಾಗಿ ಕತ್ತರಿಸುವುದು |
| ಜಾರ ನಿಸಾನೆ | - | ಪ್ರತಿಬಿಂಬಿಸುವುದು |
| ಮುನವದಕರಿ | - | ಎದ್ದು ತೋರುವಂತೆ ಮಾಡುವುದು |
| ಮಹತಬಿ | - | ಕವರಿ ತರಕಸಿ - ಕಪ್ಪು ಲೋಹದಲ್ಲಿ ಬೆಳ್ಳಿಯನ್ನು ಇಡುವುದು |
| ಉಮರಖಿಯಾರ | - | ಹೂಜಿ |
| ಜಾಮ | - | ಒಂದು ಬಗೆಯ ಪಾತ್ರೆ |

**ಆಧಾರ ಗ್ರಂಥಗಳು**

೧. ಕರ್ನಾಟಕ ಚರಿತ್ರೆ, ಸಂ-೪, ಪ್ರೊ.ಬಿ.ಶೇಖಅಲಿ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨. ಕರ್ನಾಟಕ ಸರಕಾರ ಗೆಝೆಟಿಯರ್, ಬೀದರ ಜಿಲ್ಲೆ

೩. ಬಿದರಿ-ವೆಯರ್ ಕೋ.ಆಪ್.ಸೋಸಾಯಿಟಿ ಯೂನಿಯನ್ ಲಿಮಿಟೆಡ್, ಕ್ಯಾಟಲಾಗ್

೪. ಸಂಯುಕ್ತ ಕರ್ನಾಟಕ ಡೆಕ್ಕಾನ್‌ಹೆರಾಲ್ಡ್, ಸುಧಾ ಪತ್ರಿಕೆಯ ಪ್ರಕಟಿತ ಲೇಖನಗಳು

೫. ಬಿದರಿ ಕಲೆ ಕುಶಲಕರ್ಮಿಗಳು, ರವೀಂದ್ರ ಎಸ್.ವ್ಹಿ


೬. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೨, ಕರಕುಶಲ ಕಲೆಗಳು

೭. ಕರ್ನಾಟಕದ ಕಲೆಗಳು, ಮೂರನೆಯ ಸಂಪುಟ, ಕರಕುಶಲ ಕಲೆಗಳು

೮. The new cmbridge History of India Architecture and art of the Deccan Sultanates, Georg Michell and Mark Zebrowski




ತಾಮ್ರದ ಪಾತ್ರೆಯ ಮೇಲೆ ಕೊರೆದ ಚಿತ್ರ



ಬಿದರಿ ಹುಕ್ಕಾ



ಮೊಗಲರ ಕಾಲದ ಬಿದರಿ ಹುಕ್ಕಾ




೧೭ನೆಯ ಶತಮಾನದ ಬಿದರಿ ಹುಕ್ಕಾ




ಕೊವಲಕೊಂಡದ ಆಭರಣ ಪೆಟ್ಟಿಗೆ



ಬಿಕ್ಷಾ ಪಾತ್ರೆ



ದೀಪದ ಲಾಂದ್ರಗಳು



ಮುತ್ತು ರತ್ನಗಳ ಆಭರಣದ ಪೆಟ್ಟಿಗೆ



ಗೋಡೆಗೆ ನೇತು ಹಾಕುವ ಶಿಲ್ಪ



ಆಧುನಿಕ ಬಿದರಿ ಕರಕುಶಲಕಲೆ



ಗೋಡೆಗೆ ನೇತು ಹಾಕುವ ಬಿದರಿ ಕಲಾಕೃತಿಗಳು



ಗೋಡೆಗೆ ನೇತು ಹಾಕುವ ಶಿಲ್ಪ



ಉಮರ ಖಯಾಮನ ರುಬಾಯಿತ ನೇತು ಹಾಕು ಚಿತ್ರ



ಬಿದರಿ ಚಿತ್ರ ಕಲೆ



ಬಿದರಿಕಲೆ



ಹೂದಾನಿ ಬಿದರಿಕಲೆ




ಕನ್ನಡಿ




ಸಿಗರೇಟ್ ಪೆಟ್ಟಿಗೆ




ಹುಕ್ಕಾ




ಸಿಗರೇಟ್ ಪೆಟ್ಟಿಗೆ



ಪೆಟ್ಟಿಗೆ



ಬೂಟುಗಳು



ಮೀನು



ರಾಶಿಚಕ್ರ



೧೯೫೭ರಲ್ಲಿ ಜನಿಸಿದ ಡಾ. ವಜೀರ್‌ಬಾಷಾ ಮ. ಬಾಗಾಯತ್ ಇವರು ಎಮ್.ಎ. ಹಿಂದಿ, ಎಮ್. ಎ. ಇತಿಹಾಸ, ಎಮ್.ಎ. ಇಂಗ್ಲೀಷ್, ಎಮ್. ಈಡಿ. ಮತ್ತು ಕಲಾ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿಗಳನ್ನು ಪಡೆದಿದ್ದಾರೆ. ಇತ್ತೀಚೆಗೆ ಡಾ. ಎಸ್.ಸಿ. ಪಾಟೀಲರವರ ಮಾರ್ಗದರ್ಶನದಲ್ಲಿ 'ಕರ್ನಾಟಕದ ಮುಸ್ಲಿಮ್ ಅರಸರ ಕಾಲದ ಚಿತ್ರಕಲೆ' ಕುರಿತು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಬಿಜಾಪುರದ ಬಿ. ಈಡಿ. ಕಾಲೇಜಿನಲ್ಲಿ ಮತ್ತು ವಿವಿಧ ಸಂಸ್ಥೆಗಳಲ್ಲಿ ಗೌರವ ಉಪನ್ಯಾಸಕರಾಗಿ ಕೆಲಸ ಮಾಡಿದ್ದಾರೆ. ಸುಮಾರು ಮೂವತ್ತು ವರ್ಷಗಳ ಸೇವಾ ಬೋಧನಾ ಅನುಭವವನ್ನು ಹೊಂದಿದ ಇವರಿಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಬಂದಿವೆ. ಆದರ್ಶ ಶಿಕ್ಷಕ ಪ್ರಶಸ್ತಿ ಉತ್ತಮ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಕ್ಕಾಗಿ ಡಾ. ರಾಧಾಕೃಷ್ಣನ್ ಪ್ರಶಸ್ತಿ ಹೀಗೆ ಅನೇಕ ಪ್ರಶಸ್ತಿಗಳನ್ನು ಪಡೆದಿರುವ ಇವರು ಅನೇಕ ಸಭೆ ಸಮಾರಂಭ, ರಾಜ್ಯ ರಾಷ್ಟ್ರ ಮಟ್ಟದ ವಿಚಾರ ಸಂಕಿರಣ, ಚಿತ್ರಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಈಗ ಇಂಡಿ ತಾಲೂಕಿನ ಹೊರ್ತಿ ಗ್ರಾಮದ ರೇವಣಸಿದ್ಧೇಶ್ವರ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ಸಂಶೋಧಕರಾಗಿ ಬರಹಗಾರರಾಗಿ ತಮ್ಮನ್ನು ತೊಡಗಿಸಿಕೊಂಡು ಅಧ್ಯಯನ ಮಾಡುತ್ತಿರುವ ಬಾಗಾಯತರು ಬಿಜಾಪುರದ ಆದಿಲ್ ಶಾಹಿ ಅರಸರ ವಾಸ್ತು, ಶಿಲ್ಪ, ಚಿತ್ರಕಲೆ ಕುರಿತು ಗಂಭೀರವಾಗಿ ಮಾತನಾಡುವವರಲ್ಲಿ ಇವರೂ ಒಬ್ಬರಾಗಿದ್ದಾರೆ. ಅಕಾಡೆಮಿಗಾಗಿ ಬೀದರಿನ 'ಬಿದರಿ ಚಿತ್ರಕಲೆ'ಯ ಕುರಿತು ಆಳವಾಗಿ ಅಧ್ಯಯನ ಮಾಡಿ ಈ ಪುಸ್ತಕವನ್ನು ಬರೆದುಕೊಟ್ಟಿದ್ದಕ್ಕಾಗಿ ಅಕಾಡೆಮಿ ಅವರನ್ನು ಅಭಿನಂದಿಸುತ್ತದೆ.

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - 560 002